
ಸಂಪುಟ 22 ಸಂಚಿಕೆ 32
ಆಗಸ್ಟ್ 6, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಷ್ಯಾರರಗ



ಔಷಧಿಗಳ ಸ್ಥಿತಿಗತಿ



ಹರತಾಳ ನಿಷೇಧ:

ನ್ಯಾಯಾಲಯಗಳ ಅತಿಕ್ರಮಣ




ಕನ್ನಡ ಚಲನಚಿತ್ರಗಳು ಅರ್ಧವಾರ್ಷಿಕ ಪರೀಕ್ಷೆ

ಗ್ರಾಮಾಂತರದಲ್ಲಿ ಶಿಕ್ಷಣ

ದಮನಕ್ಕೆ ಮಣಿಯದ ಜನತಾಂದೋಲನ

ಹಿಂದಿನ ಸಂಚಿಕೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದ ಆಹಾರ ಚಳುವಳಿಗಳ ಬಗ್ಗೆ ಬರೆದ ಕಾಂ. ಜ್ಯೋತಿಬಸು ಅವರು ಈ ಸಂಚಿಕೆಯಲ್ಲಿ ಆಹಾರ ಚಳುವಳಿಯ ಉಗ್ರಹೋರಾಟದ ಸ್ವರೂಪವನ್ನು, ಹೋರಾಟದ ವಿರುದ್ಧ ಆಡಳಿತರೂಢ ಕಾಂಗ್ರೆಸ್ ಸರ್ಕಾರದ ದಮನಕಾರಿ ನಡವಳಿಕೆಯನ್ನು, ಈ ದಮನದ ವಿರುದ್ಧ ಜನಾಂದೋಲನ ಹೇಗೆ ರೂಪು ಪಡೆಯಿತೆಂಬುದನ್ನು



ಎಡಪಂಥೀಯ ನಾಯಕರು ಮತ್ತು ಕಾರ್ಯಕರ್ತರನ್ನು ಬಂಧಿಸುವ ಹಾಗೂ ಮನೆಮನೆ ಮೇಲೆ ದಾಳಿ ಮಾಡುವ ಕಾರ್ಯ ಆಗಸ್ಟ್ 19ರ ಮಧ್ಯರಾತ್ರಿ ಆರಂಭವಾಯಿತು. ನಿರಂಜನ ಸೇನ್, ಭಖನಿ ಸೇನ್, ಇಂದ್ರಜಿತ್ ಗುಪ್ತಾ, ಮನೋರಂಜನ್ ರಾಯ್, ಗಣೇಶ ಘೋಷ್, ಬಿನಯ್ ಚೌಧರಿ, ಸಮರ್ ಮುಖರ್ಜಿ, ರಬಿನ್ ಮುಖರ್ಜಿ, ಗೋಪಾಲ್ ಬೋಸ್, ವಿಶ್ವನಾಥ ಮುಖರ್ಜಿ, ಗೀತಾ ಮುಖರ್ಜಿ, ಪ್ರಶಾಂತ್ ಸೂರ್, ರಾಧಿಕಾ ಬ್ಯಾನರ್ಜಿ ಮತ್ತು ನರೇಶ್ ದಾಸ್‌ಗುಪ್ತಾ ಮೊದಲಾದವರನ್ನು ಬಂಧಿಸಲಾಯಿತು.

ನನ್ನ ಮತ್ತು ಹೇಮಂತ ಬೋಸ್ ಮನೆ ಮೇಲೆ ಪೊಲೀಸರು ದಾಳಿ ಮಾಡಿದರು. ಆದರೆ ನಾವು ಆಗ ಮನೆಯಲ್ಲಿ ಇಲ್ಲದಿದ್ದರಿಂದ ನಮ್ಮನ್ನು

1959 ರಲ್ಲಿ ಎಡಪಕ್ಷಗಳು ಮತ್ತು ಇತರ ಸಂಘಟನೆಗಳು ನಡೆಸಿದ ಆಹಾರ ಚಳುವಳಿ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥ ಆಂದೋಲನ.

ಬಂಧಿಸಲು ಆಗಲಿಲ್ಲ. ಪ್ರಮೋದ್ ದಾಸ್ ಗುಪ್ತಾ ಮತ್ತು ಹರೇ ಕೃಷ್ಣ ಕೋನಾರ್ ವಿರುದ್ಧವೂ ಬಂಧನದ ವಾರಂಟ್ ಇತ್ತು. ಆದರೆ ಅವರು ಕೂಡ ಬಂಧನದ ಜಾಲದಿಂದ ತಪ್ಪಿಸಿಕೊಂಡರು. ಪಕ್ಷದ ರಾಜ್ಯ ಸಮಿತಿಯ ನಿರ್ದೇಶನದ ಮೇರೆಗೆ ಪ್ರಮೋದ್ ದಾಸ್‌ಗುಪ್ತಾ ಹರೇಕೃಷ್ಣ ಕೋನಾರ್ ಮತ್ತು ನಾನು ಭೂಗತರಾಗಿಯೇ ಚಳುವಳಿಯ ನೇತೃತ್ವ ವಹಿಸುವುದನ್ನು ಮುಂದುವರಿಸಿದೆವು.

ದಾಳಿ ಮತ್ತು ಬಂಧನ ಇನ್ನೂ ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿರುವಾಗಲೇ ನಾನು ಪಕ್ಷದ ಘಟಕವೊಂದರ ಆಹ್ವಾನದ ಮೇರೆಗೆ ರಾಜ್ಯದಿಂದ (ಪ.ಬಂಗಾಳ) ಹೊರಗಿದ್ದೆ. ನನ್ನ ವಿರುದ್ಧ ಬಂಧನದ ವಾರಂಟ್ ಹೊರಡಿಸಿರುವುದು ನನಗೆ ಆಗ ಗೊತ್ತಿರಲಿಲ್ಲ. ನಂತರ ನಾನು ಕಲ್ಕತ್ತ ತಲುಪಿದಾಗ, ಪೊಲೀಸರು ನನ್ನ ಬೆನ್ನ ಹಿಂದೆ ಬಿದ್ದಿದ್ದಾರೆಂದು ತಿಳಿಸಲಾಯಿತು. ಅದುವರೆಗೆ ಬಂಧನದಿಂದ ತಪ್ಪಿಸಿಕೊಂಡಿದ್ದ ಪ್ರಾಂತೀಯ ಸಮಿತಿಯ ನಾಯಕರು ಆಹಾರ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗುವ ಸಲುವಾಗಿ ನಾನು ಬಂಧನದಿಂದ ತಪ್ಪಿಸಿಕೊಳ್ಳುವುದು ಅಗತ್ಯ ಎಂದು ಅಭಿಪ್ರಾಯಪಟ್ಟರು.

ಡಮ್ ಡಮ್ ವಿಮಾನನಿಲ್ದಾಣದಲ್ಲಿ ಪೋಲೀಸ್‌ರ ಹದ್ದಿನ ಕಣ್ಣಿನ ಕಾವಲಿತ್ತು. ಸ್ನೇಹಾಂಗ್ಶು ಆಚಾರ್ಯ ನನ್ನನ್ನು ವಿಮಾನ ನಿಲ್ದಾಣದಿಂದ ಹೊರಗೆ ಕರೆ ತಂದು ಕಾರೊಂದರಲ್ಲಿ ಕುಳ್ಳಿರಿಸಿದರು. ಕಲ್ಕತ್ತದ ಒಂದು ಮನೆಯ ಹತ್ತಿರ ನನ್ನನ್ನು ಕರೆ ತರಲಾಯಿತು. ನನ್ನನ್ನು ಅಲ್ಲಿಂದ ಬೇರೆಡೆ ಕರೆದೊಯ್ಯಲು ಕಾಮ್ರೇಡ್ ದಿನೇಶ್ ರಾಯ್ ಅಲ್ಲಿ ಕಾಯುತ್ತಿದ್ದರು.

ಅವರು ನನ್ನನ್ನು ದಕ್ಷಿಣ ಕಲ್ಕತ್ತದ ಮನೆಯೊಂದಕ್ಕೆ ಕರೆದೊಯ್ದರು. ಅಲ್ಲಿ ಪ್ರಮೋದ್ ದಾಸ್‌ಗುಪ್ತಾ ಮತ್ತು ಹರೇ ಕೃಷ್ಣ ಕೋನಾರ್ ಕೂಡ ಇದ್ದರು. ಚಳುವಳಿಯನ್ನು ಜೀವಂತವಾಗಿರಿಸುವ ಕೆಲಸವನ್ನು ನಾವು ಇಂದು ಮಾಡಿದ್ದೆವು. ಅದೇ ರೀತಿ, ಬಂಧಿತರಾಗದ ನಾಯಕರ ಜತೆ ಸಂಪರ್ಕ ಇರಿಸಿಕೊಳ್ಳಲಾರಂಭಿಸಿದೆವು.

ಶಾಂತರಾಗದ ಜನತೆ ಸಿಡಿದೆದ್ದ ಪ್ರತಿಭಟನೆ:

ಈ ನಡುವೆ, ಪಶ್ಚಿಮ ಬಂಗಾಳ ಸರಕಾರ ಆಹಾರ ಚಳುವಳಿಯ ಕೆಲವು ಬೇಡಿಕೆಗಳನ್ನು ಒಪ್ಪಿತು. ಬಂಧಿತ ಚಳುವಳಿಕಾರರನ್ನು ಬಿಡುಗಡೆ ಮಾಡಿತು. ವಾರಂಟ್‌ಗಳನ್ನು ವಾಪಸ್ ಪಡೆಯಿತು.

ಏನಿದ್ದರೂ ಎಡಪಂಥೀಯ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಕೈಗೊಳ್ಳಲಾದ ದಮನಕಾರಿ ಕ್ರಮಗಳ ವಿರುದ್ಧ ಪಶ್ಚಿಮ ಬಂಗಾಳದ ಜನತೆ ಸಿಡಿದೆದ್ದರು. ಆಗಸ್ಟ್ 18 ರಂದು ಕಲ್ಕತ್ತ, ಹೌರಾ, ಹೂಗ್ಲಿ, ಬರ್ಧಮಾನ, 24 ಪರಗಣ ಮತ್ತು ಮಿಡ್ನಾಪುರದಲ್ಲಿ ಸ್ವಯಂಪ್ರೇರಿತ ಪ್ರತಿಭಟನೆಗಳು ನಡೆದವು. ರಾಜ್ಯದೆಲ್ಲೆಡೆ ಲೆಕ್ಕವಿಲ್ಲದಷ್ಟು ಮೆರವಣಿಗೆಗಳು ನಡೆದವು.

ದಮನಕಾರಿ ಕ್ರಮಗಳಿಂದ ಜನರ ಉತ್ಸಾಹ, ಸ್ಫೂರ್ತಿಯೇನೂ ಕುಗ್ಗಲಿಲ್ಲ. ಈ ರೀತಿಯಾಗಿ ಆಹಾರ ಆಂದೋಳನದ ಎರಡನೇ ಹಂತ ಶುರುವಾಯಿತು. ಆಗಸ್ಟ್ 27 ರ ವೇಳೆಗೆ ಕನಿಷ್ಟ 7000 ಜನರನ್ನು ಬಂಧಿಸಲಾಯಿತು.

ಲಕ್ಷಜನರ ರ‍್ಯಾಲಿ ಮೇಲೆ ಗುಂಡು:

ಆಗಸ್ಟ್ 31 ರಂದು ಸುಮಾರು ಒಂದು ಲಕ್ಷ ಜನರು ಸ್ಮಾರಕದ ಬಳಿ ನೆರೆದರು. ಆನಂತರ ಅವರು ಮೆರವಣಿಗೆಯಲ್ಲಿ ರೈಟರ್ಸ್ ಬಿಲ್ಡಿಂಗ್ ನತ್ತ ಸಾಗುತ್ತಿದ್ದಾಗ ಪೊಲೀಸರು ಗೋಲಿಬಾರ್ ನಡೆಸಿದರು. ಈ ಘಟನೆಯಲ್ಲಿ 1000ಕ್ಕೂ ಹೆಚ್ಚು ಜನರು ಗಾಯಗೊಂಡರು ಬರ್ದ್ವಾನ್, ಬೆಹ್ರಾಂಪುರ ಮತ್ತು ಗಂಗಾರಾಮ ಪುರಗಳಲ್ಲಿ ಪೊಲೀಸರು ಲಾಠಿ ಪ್ರಹಾರ ಮಾಡಿದರು.

ಸೆಪ್ಟೆಂಬರ್ 1 ರಂದು ವಿದ್ಯಾರ್ಥಿಗಳು ಮುಷ್ಕರ ನಡೆಸಿದರು. ಪೊಲೀಸರ ಕರಾಳ ಯಂತ್ರ ಅವರನ್ನು ಕೂಡ ಬಿಡಲಿಲ್ಲ. ಕಲ್ಕತ್ತದಲ್ಲಿ ಯದ್ವಾ-ತದ್ವಾ ಗೋಲಿಬಾರಿನಲ್ಲಿ ಎಂಟು ಜನರು ಸತ್ತರು, 77 ಮಂದಿ ಗಾಯಗೊಂಡರು. ಕಲ್ಕತ್ತ ಮತ್ತು ಉಪನಗರಗಳಲ್ಲಿ ನಿಷೇಧಾಜ್ಞೆ ಜಾರಿಗೆ ಬಂತು.

ಪ್ರತಿಭಟನೆ ನಿರತ ಜನರನ್ನು ಅಭಿನಂದಿಸಿ ನಾನು ಒಂದು ಹೇಳಿಕೆ ಹೊರಡಿಸಿದೆ.

"ರಾಜ್ಯದ ಆಹಾರ ಸಚಿವರ ರಾಜಿನಾಮೆಗೆ ಒತ್ತಾಯಿಸುವ ಕರೆಗೆ ಪಶ್ಚಿಮ ಬಂಗಾಳದ ಜನತೆ ಸರಿಯಾಗಿಯೇ ಸ್ಪಂದಿಸಿದ್ದು ಅವರನ್ನು ನಾನು ಅಭಿನಂದಿಸುತ್ತೇನೆ. ಪಶ್ಚಿಮ ಬಂಗಾಳದ ಕ್ರಾಂತಿಕಾರಿ ಜನರು ಮತ್ತೊಮ್ಮೆ ತಮ್ಮ ಗುಣವನ್ನು ಸಾಬೀತುಪಡಿಸಿದ್ದಾರೆ" ಎಂದು ನಾನು ಹೇಳಿಕೆಯಲ್ಲಿ ಹೇಳಿದೆ.

ಶಾಂತಿಯುತ ಕ್ಷಿಪ್ರ ಕ್ರಾಂತಿ!:

ರಾಜ್ಯ ಸರಕಾರಕ್ಕೆ ಸವಾಲು ಹಾಕಿ ಸಾವಿರಾರು ರೈತರು ಕಲ್ಕತ್ತಕ್ಕೆ ಬಂದಿದ್ದಾರೆ ಎಂದೂ ನಾನು ಹೇಳಿದೆ. ಇದು ಸರಕಾರದ ವಿರುದ್ಧದ ಒಂದು ಶಾಂತಿಯುತ ಕ್ಷಿಪ್ರಕ್ರಾಂತಿ ಆಗಿತ್ತು.

ಕಾಂಗ್ರೆಸ್ ಸರಕಾರ ಮತ್ತು ಅವರ ಪೊಲೀಸರು ಸ್ಪಟಿಕ ಹೋರಾಟದಲ್ಲಿ ,ಸೋತಿದ್ದಾರೆ ಎಂದೂ ನಾನು ಆ ಹೇಳಿಕೆಯಲ್ಲಿ ವಿಶ್ಲೇಷಿಸಿದೆ." ಆಹಾರ ಬಿಕ್ಕಟ್ಟಿನ ಕುರಿತಾದ ಕೇಂದ್ರ ಸರಕಾರದ ನಿರ್ಲಕ್ಷ್ಯದ ಹಾಗೂ ಆತ್ಮತೃಪ್ತಿಯ ಧೋರಣೆ ಈ ಚಳುವಳಿಯಿಂದ ಬಯಲಾಗಿದೆ" ಎಂದು ಹೇಳಿದೆ.

1959ರ ಆಗಸ್ಟ್ 31 ಮತ್ತು ಸೆಪ್ಟೆಂಬರ್ ಕೊನೆಯ ವರೆಗಿನ ಅವಧಿಯಲ್ಲಿ ಈ ಎಲ್ಲ ಘಟನೆಗಳು ನಡೆದವು. ಕಾಂಗ್ರೆಸ್ ಸರಕಾರ ಸೆಪ್ಟೆಂಬರ್ ಎರಡ ರಂದು ಸೇನೆಯನ್ನು ಕೂಡ ಕರೆಸಿ ಕಲ್ಕತ್ತದಲ್ಲಿ ನಿಯೋಜಿಸಿತು. ಧ್ವಜ ಪಥ ಸಂಚಲನಗಳು ಆರಂಭವಾದವು. ಸೆ.2 ರವರೆಗೆ ಪೋಲೀಸರ ದೌರ್ಜನ್ಯಕ್ಕೆ 12 ಜನರು ಬಲಿಯಾಗಿದ್ದರು. ಹೌರಾದಲ್ಲಿ ಕೂಡ ಸೈನಿಕರನ್ನು ನಿಯೋಜಿಸ ಲಾಯಿತು. ಹೌರಾ ಮತ್ತು 24 ಪರಗಣಗಳಲ್ಲಿ ಪೊಲೀಸ್ ಗೋಲಿಬಾರುಗಳಲ್ಲಿ ಕನಿಷ್ಟ 15ಜನರು ಮೃತರಾಗಿ 150 ಜನರು ಗಾಯಗೊಂಡರು. ಸಮಾಜ ವಿರೋಧಿ ಶಕ್ತಿಗಳ ವಿರುದ್ಧ ಹೋರಾಡುವ ಹೆಸರಲ್ಲಿ ರಾಜ್ಯ ಸರಕಾರ ಕೊಲೆಗಡುಕತನಕ್ಕೆ ಇಳಿದಿದೆ ಎಂದು ಹೇಳಿಕೆಯೊಂದರಲ್ಲಿ ನಾನು ಕಟುವಾಗಿ ಟೀಕಿಸಿದೆ.

80 ಹುತಾತ್ಮರು:

ಆಹಾರ ಚಳುವಳಿಯಲ್ಲಿ ಒಟ್ಟು 80 ಮಂದಿ ಹುತಾತ್ಮರಾದರು 200 ಜನರು ನಾಪತ್ತೆಯಾದರು. ಕಲ್ಕತ್ತದಲ್ಲಿ ಅವಿಸ್ಮರಣೀಯವಾದ ಮೌನ ರ‍್ಯಾಲಿಯೊಂದನ್ನು ನಡೆಸಲಾಯಿತು.

ಪೊಲೀಸ್ ದೌರ್ಜನ್ಯಗಳ ಬಗ್ಗೆ ಸಾರ್ವಜನಿಕ ವಿಚಾರಣೆ ನಡೆಯಬೇಕು, ಹುತಾತ್ಮರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಮತ್ತು ರಾಜ್ಯದ ಆಹಾರ ಮಂತ್ರಿ ಈ ಕ್ಷಣವೇ ರಾಜೀನಾಮೆ ನೀಡಬೇಕು ಎಂಬುದು ಈ ಮಹಾನ್ ರ‍್ಯಾಲಿಯ ಪ್ರಮುಖ ಕೇಳಿಕೆಗಳಾಗಿದ್ದವು. ಒಟ್ಟು 1859 ಚಳುವಳಿಕಾರರನ್ನು ಬಂಧಿಸಲಾಯಿತು.

ಸೆ. 21 ರಂದು, ಹುತಾತ್ಮರ ಸ್ಮರಣೆಗಾಗಿ ಒಂದು ನಿಮಿಷ ಮೌನ ಆಚರಿಸಲು ಕಾಂಗ್ರೆಸ್ ಮತ್ತು ಪಿಎಸ್‌ಪಿ ಸದಸ್ಯರು ನಿರಾಕರಿಸಿದರು. ಗೋಲಿಬಾರ್ ಹತ್ಯೆಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕೆಂಬ ಬೇಡಿಕೆಯನ್ನು ಮುಖ್ಯಮಂತ್ರಿ ತಳ್ಳಿಹಾಕಿದರು. ಸತ್ತವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಲು ಪೊಲೀಸ್ ಸಚಿವ ಕಾಳಿ ಮುಖರ್ಜಿ ಬಯಸಲಿಲ್ಲ. ಮುಖರ್ಜಿಯ ಈ ಧೋರಣೆಯಿಂದ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು.

ಜನತೆಗೆ ಆಜೀವ ಪರ್ಯಂತದ ಪಾಠ ಕಲಿಸಲು ಕಾಂಗ್ರೆಸ್ ಸರಕಾರ ಮುಂದಾಗಿದೆ ಎಂದು ನಾನು ಆರೋಪಿಸಿದೆ.

ಸೆಪ್ಟೆಂಬರ್ 22 ರಂದು ರಾಜ್ಯದ ನಾನಾ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಬಂಧನಕ್ಕೆ ಒಳಗಾದರು. ಸೆ. 26 ರಂದು ವೆಲ್ಲಿಂಗ್ಟನ್ ಚೌಕದಲ್ಲಿ ಆಹಾರ ಚಳುವಳಿಯ ಹುತಾತ್ಮರ ಸ್ಮರಣೆಗೆ ಒಂದು ಸ್ಮಾರಕವನ್ನು ಸ್ಥಾಪಿಸಲಾಯಿತು.

ಪ್ರತಿವರ್ಷ ಆಗಸ್ಟ್ 31 ನ್ನು ಹುತಾತ್ಮರ ದಿನವಾಗಿ ಆಚರಿಸಲು ನಿರ್ಧರಿಸಲಾಯಿತು. ಅಂದಿನಿಂದಲೂ ಅದನ್ನು ಆಚರಿಸಲಾಗುತ್ತಿದೆ.

ಪ್ರತಿಪಕ್ಷಗಳು ಸೆಪ್ಟೆಂಬರ್ 28 ರಂದು ಕಾಂಗ್ರೆಸ್ ಸರಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಿದವು. ಸಹಜವಾಗಿಯೇ ಅದು ಸೋತು ಹೋಯಿತು.

ಒಟ್ಟಿನಲ್ಲಿ ಹೇಳುವುದಾದರೆ, 1959 ರಲ್ಲಿ ಎಡಪಕ್ಷಗಳು ಮತ್ತು ಇತರ ಸಂಘಟನೆಗಳು ನಡೆಸಿದ ಆಹಾರ ಚಳುವಳಿ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥ ಆಂದೋಲನ.

(ಮುಂದಿನ ಸಂಚಿಕೆಯಲ್ಲಿ: ಕೇರಳದ ಕಮ್ಯುನಿಸ್ಟ್ ಸರಕಾರದ ವಜಾ)

'ಐಕ್ಯರಂಗ' ಕ್ಕೆ ವರದಿ ಕಳಿಸುವವರ ಗಮನಕ್ಕೆ

ರಾಜ್ಯದ ವಿವಿಧ ಕಡೆಗಳಲ್ಲಿ ದುಡಿಯುವ ಜನಗಳ ಹೋರಾಟದ ವರದಿಗಳು ನಮಗೆ ಬರುತ್ತಿರುತ್ತವೆ. ಆದರೆ ಇವುಗಳನ್ನು ಪ್ರಕಟಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಮುಖ್ಯಕಾರಣ ಈ ವರದಿಗಳ ಸ್ವರೂಪ. ಬೇರೆ ದಿನಪತ್ರಿಕೆಗಳಿಗೆ ಕಳಿಸುವ ಸುದ್ದಿಗಳನ್ನೇ ನಮ್ಮಂತಹ ಪತ್ರಿಕೆಗೆ ಕಳಿಸಿದರೆ ನಮ್ಮ ಓದುಗರಿಗೆ ಅದರಿಂದ ಪ್ರಯೋಜನವಾಗದು. ನಮಗೆ ಕಳಿಸುವ ಇಂತಹ ವರದಿಗಳಲ್ಲಿ ನಿರ್ದಿಷ್ಟ ಹೋರಾಟದ/ಪ್ರತಿಭಟನೆಯ ಹಿನ್ನೆಲೆಯಲ್ಲಿಯ ಸಮಸ್ಯೆಯ ಹಾಗೂ ಹೋರಾಟ/ಪ್ರತಿಭಟನೆಯನ್ನು ಹೇಗೆ ಸಂಘಟಿಸಲಾಯಿತು ಎಂಬ ಒಂದು ಚಿತ್ರ ರಾಜ್ಯದ ಇತರ ಓದುಗರಿಗೂ ಸಿಗುವಂತೆ ಆಕರ್ಷಕವಾಗಿ ಬರೆದು ಕಳಿಸಿದ ವರದಿಗಷ್ಟೇ ಇನ್ನು ಮುಂದೆ ಆದ್ಯತೆ ನೀಡಲಾಗುವುದು ಎಂಬುದನ್ನು ಗಮನಿಸಬೇಕಾಗಿ ಕೋರಿಕೆ.

- ಸಂಪಾದಕರು


ಪಿ.ಆರ್.ಪರಮೇಶ್ವರನ್ ನಿಧನ

ತಮಿಳುನಾಡು ಸಿಪಿಐ(ಎಂ)ನ ಪ್ರಮುಖ ಮುಖಂಡರಲ್ಲೊಬ್ಬರಾದ ಪಿ.ಆರ್. ಪರಮೇಶ್ವರನ್ ಜುಲೈ 17 ರಂದು ನಿಧನರಾದರು. ಹಲವು ಕಾಲದಿಂದ ಅಸೌಖ್ಯದಿಂದ ಹಾಸಿಗೆ ಹಿಡಿದಿದ್ದರು.

ತಮಿಳುನಾಡಿನ ಚೆನ್ನೈನ ಕಾರ್ಮಿಕ ಮುಖಂಡರಾಗಿದ್ದ ಕಾ. ಪಿ.ಆರ್.ಪಿ.ಉತ್ತಮ ಸಂಘಟಕರಾಗಿದ್ದುದು ಮಾತ್ರವಲ್ಲದೆ ಚೆನ್ನೈ(ಹಿಂದಿನ ಮದ್ರಾಸು) ನಗರದಲ್ಲಿ ಪಕ್ಷ ಮತ್ತು ಕಾರ್ಮಿಕ ಸಂಘಟನೆಯನ್ನು ಕಟ್ಟಲು ಶ್ರಮವಹಿಸಿದರು.

ಬಡ ಕುಟುಂಬದಿಂದ ಬಂದ ಕಾಂ. ಪರಮೇಶ್ವರನ್ 1946 ರಲ್ಲಿ ಪಕ್ಷವನ್ನು ಸೇರಿದ್ದು, 1984 ರಲ್ಲಿ ಕೇಂದ್ರ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡು, 1998 ರಲ್ಲಿ ಕಲ್ಕತ್ತ ಅಧಿವೇಶನದವರೆಗೆ ಮುಂದುವರಿದರು. ಸಿಪಿಐ(ಎಂ)ಸ್ಥಾಪನೆಗೊಂಡಂದಿನಿಂದ ತಮಿಳುನಾಡು ರಾಜ್ಯ ಸಮಿತಿ ಸದಸ್ಯರಾಗಿದ್ದ ಅವರು, ಮದರಾಸು(ಚೆನ್ನೈ) ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಯನ್ನು ಕಟ್ಟಲು ಅತ್ಯಂತ ಶ್ರಮವಹಿಸಿದರು. ಮಧ್ಯಮ ವರ್ಗದ ನೌಕರರ ಮಧ್ಯೆ ಸಾಮೂಹಿಕ ಸಂಘಟನೆ ಮತ್ತು ಚಳುವಳಿ ನಡೆಸಲು ಅವರು ನೀಡಿದ ಮಾರ್ಗದರ್ಶನ ಅಪೂರ್ವವಾದುದು.

ಕಾರ್ಯಕರ್ತರ ಸೈದ್ಧಾಂತಿಕ ಮಟ್ಟವನ್ನು ಎತ್ತರಿಸಲು ತೀವ್ರ ಗಮನ ನೀಡುತ್ತಿದ್ದ ಕಾಂ.ಪಿ.ಆರ್.ಪಿ. ಉತ್ತಮ ಬರಹಗಾರರೂ ಆಗಿದ್ದರು. ತತ್ವಜ್ಞಾನ ಮತ್ತು ಚರಿತ್ರೆ ಅವರ ವಿಶೇಷ ಆಸಕ್ತಿಯ ವಿಷಯಗಳಾಗಿದ್ದವು. ಅವರು ತಮಿಳು ಸೈದ್ಧಾಂತಿಕ ಪತ್ರಿಕೆ 'ದಿ ಮಾರ್ಕ್ಸಿಸ್ಟ್' ನ ಸಂಪಾದಕರಾಗಿದ್ದರು. ಪತ್ನಿ, ಮಗ ಮತ್ತು ಮಗಳನ್ನು ಅಗಲಿದ ಅವರು ಅಪಾರ ಅಭಿಮಾನಿಗಳನ್ನು ಬಿಟ್ಟು ಹೋಗಿದ್ದಾರೆ.



ಕಾ.ಪಿ.ಆರ್.ಪರಮೇಶ್ವರನ್ ಅವರ ನಿಧನದಿಂದಾಗಿ ಪಕ್ಷಕ್ಕೆ ಅದರಲ್ಲೂ ತಮಿಳುನಾಡು ರಾಜ್ಯ ಘಟಕಕ್ಕೆ ತೀವ್ರ ನಷ್ಟವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಶ್ರದ್ಧಾಂಜಲಿಯನ್ನು ತಿಳಿಸಿದೆ.

ಬಾಳಾ ಠಾಕ್ರೆ ಬಂಧನಕ್ಕೆ ಕರೆ

ನ್ಯಾಯಮೂರ್ತಿ ಶ್ರೀ ಕೃಷ್ಣಾ ಆಯೋಗ ಗುರುತಿಸಿರುವ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಬೇಕು, ಶಿವಸೇನಾ ಮುಖ್ಯಸ್ಥರಾದ ಬಾಳ ಠಾಕ್ರೆ ಮೇಲಿನ ಮೊಕದ್ದಮೆಯನ್ನು ಸಾಮಾನ್ಯ ಪ್ರಜೆಯೊಬ್ಬರ ಮೇಲೆ ಕಾನೂನುಕ್ರಮ ಜರುಗಿಸುವಂತೆ ಮುಂದುವರೆಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ ಕಾರಟ್ ಬೆಂಗಳೂರಿನಲಿ ಪತ್ರಿಕಾ ಗೋಷ್ಠಿಯಲ್ಲಿ ಒತ್ತಾಯಿಸಿದರು.

ಸಾರ್ವಜನಿಕ ಉದ್ದಿಮೆ ಇಂಡಿಯನ್ ಏರ್‌ಲೈನ್ಸ್ ಉಳಿಸಿ

ಲಾಭಕರ ಸಾರ್ವಜನಿಕ ಉದ್ದಿಮೆಗಳೂ ಸೇರಿದಂತೆ ಸಾರ್ವಜನಿಕ ವಲಯದ ಶೇರುಗಳ ಮಾರಾಟ ಹಾಗೂ ಖಾಸಗೀಕರಣಕ್ಕೆ ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿದ ಅವರು ಸಾರ್ವಜನಿಕ ಉದ್ದಿಮೆಗಳ ಕುರಿತು ಸರ್ಕಾರದ ನಿಲುಮೆಯನ್ನು ಸಂಸತ್ತಿನ ಮುಂದಿಟ್ಟು ವಿವರವಾದ ಚರ್ಚೆಗೆ ಅನುವುಗೊಳಿಸಬೇಕೆಂದು ಒತ್ತಾಯಿಸಿದರು, ಅದರಲ್ಲಿಯೂ 'ಇಂಡಿಯನ್ ಏರಲೈನ್ಸ್' ಅನ್ನು ವಿದೇಶಿ ಕಂಪನಿಗೆ ಮಾರಾಟ ಮಾಡ ಹೊರಟಿರುವುದು ನಾಚಿಕೆಗೇಡು ಎಂದರು. ಹರತಾಳಗಳನ್ನು ರದ್ದುಗೊಳಿಸಿ ಹರತಾಳಕ್ಕೆ ಕರೆಕೊಡುವ ರಾಜಕೀಯ ಪಕ್ಷಗಳ ನೊಂದಾವಣೆಯನ್ನು ರದ್ದು ಮಾಡಬೇಕೆಂಬ ಕೇರಳದ ಉಚ್ಚನ್ಯಾಯಾಲಯದ ತೀರ್ಪನ್ನು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕು ಗೊಳಿಸುವ ಕ್ರಮವಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ ಮತ್ತು ಆ ತೀರ್ಪನ್ನು ತಿರಸ್ಕರಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಲಿದೆ. ಅದೇ ಸಂದರ್ಭದಲ್ಲಿ ಪ್ರಜಾಸತ್ತಾತ್ಮಕ ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳ ಸಾಮೂಹಿಕ ಪ್ರತಿಭಟನಾ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರ ವ್ಯಾಪಿ ಪ್ರಚಾರಾಂದೋಲನವನ್ನು ಸಿಪಿಐ(ಎಂ) ನಡೆಸಲಿದೆ ಎಂದು ತಿಳಿಸಿದರು. ಕೇರಳದ ಉಚ್ಚ ನ್ಯಾಯಲಯನ್ನೊಳಗೊಂಡು ಇತರ ರಾಜ್ಯಗಳ ಕೆಲವು ಉಚ್ಚನ್ಯಾಯಾಲಯಗಳ ಈ ರೀತಿ ಕ್ರಮಗಳನ್ನು ನ್ಯಾಯಾಲಯದ ಸರ್ವಾಧಿಕಾರ ಧೋರಣೆ ಎಂದು ಟೀಕಿಸಿದರು.

ಹರತಾಳಗಳನ್ನು ರದ್ದುಗೊಳಿಸುವ ವಿರೋಧಿಸಿ

ಕೇಂದ್ರ-ರಾಜ್ಯ ಸಂಬಂಧಗಳ ಕುರಿತು ಸರ್ಕಾರಿಯಾ ಆಯೋಗದ ವರದಿಯನ್ನು ಕೇಂದ್ರ ಸರ್ಕಾರ ಜಾರಿಗೆ ತರಬೇಕು, ಸ್ವಾಯತತ್ತೆಯ ಪ್ರಶ್ನೆ ಕುರಿತು ಸಂವಿಧಾನದ 370 ನೇ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಸರ್ಕಾರದೊಂದಿಗೆ ಮಾತುಕತೆ ಮುಂದುವರಿಯಬೇಕು ಕೆಲವು ಪ್ರಸ್ತಾಪಗಳ ಬಗ್ಗೆ ಭಿನ್ನಾಭಿಪ್ರಾಯ ವಿರಬಹುದಾದರೂ ಸಾರಾಸಗಟಾಗಿ ತಿರಸ್ಕರಿಸಬಾರದು. ಎಲ್ಲಾ ರಾಜ್ಯಗಳಿಗೂ ಹೆಚ್ಚೆಚ್ಚು ಸ್ವಾಯತ್ತತೆ ಇರಬೇಕೆಂದರು.


ಸಮಕಾಲೀನಗೊಳಿಸಿದ ಪಕ್ಷದ ಕರಡು ಕಾರ್ಯಕ್ರಮ ಕುರಿತು ಚರ್ಚಿಸಲು ತಿರುವಂತಪುರದಲ್ಲಿ ಅಕ್ಟೋಬರ್‌ನಲ್ಲಿ ಪಕ್ಷದ ವಿಶೇಷ ಅಧಿವೇಶನ ನಡೆಯಲಿದೆ ಎಂದರು ಅದಕ್ಕೆ ಪೂರ್ವ ಭಾವಿಯಾಗಿ ಕರಡುವರದಿ ಕುರಿತು ಕರ್ನಾಟಕದಲ್ಲಿನ ಪಕ್ಷದ ಮುಖಂಡರಿಗೆ ವಿವರಿಸಲು ಅವರು ಬೆಂಗಳೂರಿಗೆ ಆಗಮಿಸಿದ್ದರು. ಪತ್ರಿಕಾ ಗೋಷ್ಠಿಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಹಾಜರಿದ್ದರು.



ಕೃಪೆ: ಜನವಾಹಿನಿ

ವಾಜಪೇಯಿ ಸರ್ಕಾರದ ನಿಸ್ಸತ್ವ ಬಯಲು ಜೇಠ್‌ಮಲಾನಿ ರಾಜೀನಾಮೆ ಪ್ರಹಸನ

ಬಾಳಾಠಾಕ್ರೆಯನ್ನು ಸಮರ್ಥಿಸಲು ಹೋದ ಕೇಂದ್ರ ಕಾನೂನು ಸಚಿವ ಜೇಠ್ಮಲಾನಿಯವರ ಕ್ರಿಯೆಯಿಂದಾಗಿ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ನ ಟೀಕೆಗೊಳಗಾಗಬೇಕಾಯಿತು. ಕೇಂದ್ರ ಸಚಿವ ಸಂಪುಟದಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ ಎಂಬ ಕೋರ್ಟಿನ ಟೀಕೆಗೆ ಜೇಠ್ಮಲಾನಿ ಖಾರವಾಗಿ ಹಾಗೂ ಒರಟಾಗಿ ಪ್ರತಿಕ್ರಿಯಿಸಿದರು. ಈ ಟೀಕೆಗಳನ್ನು ಮಾಡುವಾಗ ಕಾನೂನುಬಲ್ಲವರ ಬಗ್ಗೆ ಮಾತನಾಡುತ್ತಿದ್ದೇನೆಂಬುದು ಸುಪ್ರೀಂಕೋರ್ಟ್‌ಗೆ ಗೊತ್ತಿರಬೇಕಾಗಿತ್ತು ಎಂದು ಧಿಮಾಕು ತೋರಿಸಿದರು.



ಜೇಠ್ಮಲಾನಿ

ನ್ಯಾಯಾಂಗದ ಬಗ್ಗೆ ಈ ಟೀಕೆ ಸರ್ಕಾರದ ಅತ್ಯುನ್ನತ ವಲಯದಿಂದ-ಕಾನೂನು ಸಚಿವಾಲಯದಿಂದಲೇ ಬಂದಾಗ ಜೇಠ್ಮಲಾನಿಯವರ ರಾಜೀನಾಮೆ ಪಡೆಯುವುದು ಪ್ರಧಾನಿಗೆ ಅನಿವಾರ್ಯವಾಗಿತ್ತು. ಕೊನೆಗೆ ಬೆಳಗ್ಗೆ ರಾಜೀನಾಮೆ ಕೇಳಿ ಸಂಜೆಯಾಗುವ ವೇಳೆಗೆ ರಾಜೀನಾಮೆ ಅಂಗೀಕಾರವಾದ ಪ್ರಕಟಣೆಯೂ ಹೊರಬಿದ್ದು ಮಿಂಚಿನ ವೇಗದಲ್ಲೆಂಬಂತೆ ಇಡೀ ಪ್ರಕರಣ ನಡೆದುಹೋಯಿತು.

ಪುಂಖಾನುಪುಂಖ ಆಪಾದನೆಗಳು

ನಂತರದ ಘಟನೆಗಳು ಇಡೀ ದೇಶಕ್ಕೆ ದಿಗ್ಭ್ರಮೆಯಾಗುವಂತಹ ಘಟನೆಗಳನ್ನು ಹೊರತಂದಿವೆ. ಪತ್ರಿಕಾಗೋಷ್ಠಿಯ ಮೂಲಕ ತಮ್ಮ ರಾಜೀನಾಮೆಗೆ ಕಾರಣವನ್ನು ಪ್ರಕಟಿಸುವಾಗ ರಾಜ್ಯ ಸಭೆಯ ಸಭಾಪತಿ ಇದು ಬಹಿರಂಗಗೊಳಿಸಬಾರದ ರಹಸ್ಯ ಎಂದು ನಿಷೇಧಿಸಿದ್ದರೂ ಸೇರಿಸಿ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರ ಹಾಗೂ ಕೇಂದ್ರ ಸರ್ಕಾರದ ಅಡ್ವೋಕೇಟ್ ಜನರಲ್ ಸೋಲಿ ಸೋರಾಬ್ಜಿಯವರ ಮೇಲೆ ಅಕ್ರಮಗಳ ಆರೋಪವನ್ನು ಹೊರಿಸಿದ್ದಾರೆ. ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರ ಪತ್ನಿ ಮತ್ತು ಪತ್ನಿಯ ತಾಯಿಯವರಿಗೆ ಭೂಮಿ ಪ್ರಕರಣವೊಂದರಲ್ಲಿ ಕೆಳನ್ಯಾಯಾಲಯಗಳು ಅನುಕೂಲಕರ ತೀರ್ಪು ನೀಡಿ ಕಾಯಿದೆ ಉಲ್ಲಂಘಿಸಿದೆ ಎಂಬುದು ಒಂದು ಆರೋಪ. ಇದನ್ನು ಸುಪ್ರೀಂಕೋರ್ಟ್ ನ್ಯಾಯಾವಾದಿಗಳ ಒಂದು ಸಮಿತಿ ತನಿಖೆ ಮಾಡಬೇಕೆಂದು ನಿರ್ಧರಿಸಿದೆ.

ಅದೇ ರೀತಿ ಅಡ್ವೋಕೇಟ್ ಜನರಲ್‌ರವರು ಭೋಪೋರ್ಸ್ ಆರೋಪಿ ಹಿಂದೂಜಾಗಳಿಗೆ ಕಾನೂನು ಸಲಹೆ ನೀಡಿದ್ದಾರೆ, ಸರ್ಕಾರದ ವಿವಿಧ ಅಂಗ ಸಂಸ್ಥೆಗಳಿಂದ ಲಕ್ಷಗಟ್ಟಲೆ ಫೀಸ್ ಪಡೆದಿದ್ದಾರೆ ಎಂದೆಲ್ಲಾ ಆರೋಪ ಮಾಡಿದ್ದಾರೆ.

ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರವೂ ಈ ರಹಸ್ಯ ದಾಖಲೆಗಳು, ಪತ್ರಗಳು ಕಾನೂನು ಸಚಿವರ ಬಳಿ ಹೇಗೆ ಉಳಿದವು ಎಂಬ ಒಂದು ಪ್ರಶ್ನೆ ಅದರಜೊತೆಗೆ ಜೇಠ್ಮಲಾನಿ ಹಾಗೂ ಅಡ್ವೋಕೇಟ್ ಜನರಲ್ ನಡುವೆ ನಿರಂತರ ವಿರಸಕ್ಕೆ ಜೇಠ್ಮಲಾನಿಯವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಬೆಲೆ ಬಾಳುವ ಆಸ್ತಿಯೊಂದರ ಬಗ್ಗೆ ತೋರಿಸಿದ ಪಕ್ಷಪಾತವೇ ಕಾರಣವೆಂದು ಬಹಿರಂಗವಾಗಿದೆ.

ಸರ್ಕಾರದ ಉನ್ನತ ವಲಯದ ಅಧಿಕಾರಿಗಳು, ಸಚಿವರುಗಳು ಹಾಗೂ ನ್ಯಾಯಾಲಯದ ಉನ್ನತಪೀಠಗಳಲ್ಲಿರುವ ವ್ಯಕ್ತಿಗಳ ಮೇಲೆ ಬಂದಿರುವ ಈ ಆಪಾದನೆಗಳು ನಿಜಕ್ಕೂ ಗಂಭೀರವಾದ ವಿಷಯ. ಈ ಬಗ್ಗೆ ಪೂರ್ಣ ತನಿಖೆಯಾಗಬೇಕು ಮತ್ತು ದೇಶದ ಜನಕ್ಕೆ ಏನು ನಡೆಯುತ್ತಿದೆಯೆಂಬುದರ ಪೂರ್ಣ ವಿವರ ದೊರೆಯಬೇಕು.

ಆದರೆ ವಾಜಪೇಯಿ ಸರ್ಕಾರ ಇದನ್ನು ತಿಪ್ಪೆ ಸಾರಿಸಲು, ಆ ಮೂಲಕ ತನ್ನ ಮುಖಭಂಗವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದೆ. ಇದಕ್ಕೆ ಯಾವ ರೀತಿಯೂ ಅವಕಾಶ ನೀಡಬಾರದು. ಸಂಸದೀಯ ರಂಗದಲ್ಲಿ ಪೂರ್ಣ ಚರ್ಚೆಯಾಗುವ ಮೂಲಕ ಸತ್ಯ ಸಂಗತಿ ಜನಕ್ಕೆ ತಿಳಿಯಬೇಕು.

○



ಒಂದು ಕೇಜಿಗೆ ಒಂದು ರೂನಂತೆ ಮಾರಾಟವಾಗುತ್ತಿರುವ ಟೊಮ್ಯಾಟೋ ರೈತರನ್ನು ಕಂಗಾಲು ಮಾಡಿದೆ. ಅಡಿಕೆ, ತೆಂಗು, ತೊಗರಿ, ಹತ್ತಿ, ನೆಲಗಡಲೇ(ಶೇಂಗಾ), ಹಾಲು ಮತ್ತಿತರ ಅನೇಕ ಕೃಷಿ ಉತ್ಪಾದನೆಗಳ ಬೆಲೆ ಕುಸಿದಿದೆ

ಬೆಲೆಯೇರಿಕೆ

ಯುಗಾದಿ ಕಳೆದರೇನು ಮರಳಿದರೆ ಏನು
ಬಡಜನರ ಬಾಯಲ್ಲಿ ಸುಂದೀತೆ ಜೇನು?
ಸರಕಾರ ಹಿಚುಕುತಿದೆ ಬಡಜನರ ಕತ್ತು.
ಹಬ್ಬ ಹರಿದಿನಗಳೆಲ್ಲ ಉಳ್ಳವರಸೊತ್ತು
- ವಿಡಂಬಾರಿ

ಗ್ರಾಮಾಂತರದಲ್ಲಿ ಶಿಕ್ಷಣದ ಪರಿಸ್ಥಿತಿ

ರಾಜಶೇಖರಮೂರ್ತಿ

"ಅವ್ವ, ಮೇಷ್ಟ್ರು ಹೊಡಿತಾರೆ ಬಾ ಹೇಳು, ಇನ್ನೊಂದು ದಿನ ನಮ್ ಹುಡ್ಗ ಇಸ್ಕೂಲ್‌ಗೆ ತಪ್ಪಿಸಿಕೊಳಲ್ಲ ಅಂತ"

"ನನ್ಗೆ ಕೈ ತುಂಬಾ ಕೆಲ್ಸಾದೆ, ಪುರಸತ್ ಇಲ್ಲ ಹೋಗ್ಲಾ"

"ನೀನೇ ನೆನ್ನೆ ಹೇಳ್ದೆ ನಾಳೇಕೆ ನಿಮ್ ಮೇಷ್ಟ್ರುಗೆ ಹೇಳ್ತೀನಿ, ದನ ಮೇಸಕ್ಕೆ ಹೋಗಂತ, ಬಾ ಹೇಳೀಗ"

"ಲೇ ಮೂರು ಪರ್ಲಾಂಗು ಇರೋ ಆ ಇಸ್ಕೂಲ್‌ಗೆ ನಾನ್ ಬರಕೊದ್ರೆ ಹಿಂದಿರುಗಿ ಬರಾಕೆ ಹೊತ್ತು ನೆತ್ತಿಗೇರ್ತದೆ ಸುಂದ್ಗೆ ಕೂಳಿರಲ್ಲ ನೀನೇ ಹೋಗ್, ಇನ್ನೊಂದು ದಪಾ ತಪ್ಪಿಸಿಕೊಳ್ಳಲ್ಲ ಅನ್ಲ".

ಮೇಷ್ಟ್ರ ರೂಪ ಮನಸ್ಸಿನಲ್ಲಿ ಬಂದ ತಕ್ಷಣ ಭಯ, ಅವರು ಹೊಡೆಯಲು ಉಪಯೋಗಿಸುವ ರೂಲ್ ದೊಣ್ಣೆಯ ನೆನಪು, ಕಣ್ಣಿನಿಂದ ಹೊರಹೊಮ್ಮಿದ ದುಃಖದ ಕಣ್ಣೀರು.

"ಅದ್ಯಾಕ್ ಅಂಗ್ ಅಳ್ತಿ ಹೇಣ್ಣು ಮುಂಡೇದೆ, ಬತ್ತೀನಿ ನಡಿ" ಅವ್ವನ ಆಸರೆ, ಮನದಲ್ಲಿ ಮೇಷ್ಟ್ರು ಇವತ್ತು ಹೊಡೆಯಲಾರರು ಎಂಬ ಧೈರ್ಯ, ಅವ್ವನ ಕೈ ಹಿಡಿದು ಶಾಲೆ ಹತ್ತಿರ ನಡಿದು ಅವಳ ಮಾಸಿದ ಸೀರೆಯ ಸೆರಗಿನ ಹಿಂದೆ ನಿಂತು ಒಮ್ಮೆ ಮೇಷ್ಟ್ರನ್ನು, ಒಮ್ಮೆ ಗೆಳೆಯರನ್ನು ನೋಡುತ್ತಿದ್ದೆ.

"ಮೇಷ್ಟ್ರೆ ನೆನ್ನೆ ಒಸಿ ಕೆಲ್ಸ ಇತ್ತು, ನಮ್ಮೋನ್ ಬಂದಿರಲಿಲ್ಲ ಇವತ್ತು ಹೋಗೊ ಅಂದ್ರೆ ನೀವು ಹೊಡಿತೀರಿ ಅಂತ....."

"ಏನಮ್ಮ ಅವನ್ನ ಹೊಲದ ಕೆಲ್ಸಕೋ ಅಥವಾ ದನ-ಕುರಿ ಮೇಸಕೊ ಹಾಕಿಕೊಳ್ಳಿ, ಒಂದು ದಿನ

ಮೇಷ್ಟ್ರ ರೂಪ ಮನಸ್ಸಿನಲ್ಲಿ ಬಂದ ತಕ್ಷಣ ಭಯ, ಅವರು ಹೊಡೆಯಲು ಉಪಯೋಗಿಸುವ ರೂಲ್ ದೊಣ್ಣೆಯ ನೆನಪು, ಕಣ್ಣಿನಿಂದ ಹೊರಹೊಮ್ಮಿದ ದುಃಖದ ಕಣ್ಣೀರು.

ಬರೋದು ಒಂದು ವಾರ ತಪ್ಪಿಸಿ ಕೊಳ್ಳೋದು ಮಾಡಿದ್ರೆ, ಇನ್ನೊಂದು ದಿವಸ ಸೇರಿಸಿಕೊಳ್ಳೋದಿಲ್ಲ"

"ಇಲ್ಲಾ ಮೇಷ್ಟ್ರೆ ಇನ್ನೊಂದು ದಿನ ಕೆಲ್ಸಕ್ಕೆ ಅಟ್ಟಲ್ಲ ಸರಿಯಾಗಿ ಇಸ್ಕೂಲ್‌ಗೆ ಕಳಿಸ್ತೀನಿ" ಅಂತೇಳಿ ಅವ್ವ ಹೊಲದತ್ತ ಓಡಿ ಹೊಗುತ್ತಿದ್ದಳು. ನಾನು ಹುಡ್ಗರ ಜೊತೆ ಸೇರಿಕೊಳ್ಳುತ್ತಿದ್ದೆ.

ನಾಲ್ಕೈದು ಹಳ್ಳಿಗಳಿಗೆ ಒಂದೇ ಪ್ರಾಥಮಿಕ ಪಾಠಶಾಲೆ. ಒಬ್ಬರೇ ಮೇಷ್ಟ್ರು, ಅವರ ಊರಿಂದ ಸ್ಕೂಲ್‌ಗೆ ಬಸ್ಸಿನ ವ್ಯವಸ್ಥೆ ಇರಲಿಲ್ಲ. ಕೆಲವೊಮ್ಮೆ ಸೈಕಲ್ ಅಥವಾ ನಡೆದುಕೊಂಡು 5-6 ಕಿ.ಮೀ ದೂರದಿಂದ ಬರುತ್ತಿದ್ರು. ಮೇಷ್ಟ್ರು ಸ್ಕೂಲ್ ಬಾಗಿಲು ಬೇಗ ತೆಗೆದು ಶಾಲೆಯ ವರಾಂಡದಲ್ಲಿ ನಿಲ್ಲುತ್ತಿದ್ದರು. ಶಾಲೆಯ ಅಂಗಳದೊಳಗೆಲ್ಲಾ ಗಿಣಿಗಳ, ಗುಬಚ್ಚಿಗಳ, ಇಲಿಗಳ, ಇನ್ನಿತರ ಪ್ರಾಣಿ-ಪಕ್ಷಿಗಳ ಗಲೀಜು ಹರಡಿರುತ್ತಿತ್ತು. ದಿನಕ್ಕೆ ಇಬ್ಬರಂತೆ ಶಾಲೆಯನ್ನು ಗುಡಿಸಿ ಸ್ವಚ್ಛಗೊಳಿಸುತ್ತಿದ್ದವು. 1 ರಿಂದ 4ನೇ ತರಗತಿಯವರೆಗೆ ಒಟ್ಟು 50 ಹುಡುಗರು 10 ಹುಡುಗಿಯರು ಮಾತ್ರ ಇದ್ದೆವು. ನಾವು ಕೂರಲು ಬೆಂಚುಗಳು ಇರಲಿಲ್ಲ. ಮೇಷ್ಟ್ರುಗೆ ಒಂದೇ ಒಂದು ಹಳೆಯ ಮರದ ಕುರ್ಚಿ ಮತ್ತು ಟೇಬಲ್ ಇದ್ದವು. ಶಾಲೆಗೆ ಇನ್ಸ್‌ಪೆಕ್ಟರ್ ಆಗಲಿ ಅಥವಾ ಯಾರಾದರೂ ದೊಡ್ಡ ಮನುಷ್ಯರೆನಿಕೊಂಡವರು ಬಂದರೆ ನಮ್ಮ ಮೇಷ್ಟ್ರು ಕುರ್ಚಿ ಅವರಿಗೆ ನೀಡಿ ನಿಲ್ಲುತ್ತಿದ್ದರು. ಒಂದೇ ಒಂದು ಚಿಕ್ಕದಾದ ಬೋರ್ಡ್, ಅದರಲ್ಲಿ 1 ರಿಂದ 12 ರವರೆಗೆ ಮಗ್ಗಿ ಬರೆಯಲು ಸಾಕಾಗುತ್ತಿರಲಿಲ್ಲ.

ಮೇಷ್ಟ್ರು 4ನೇ ತರಗತಿಗೆ ಪಾಠ ಮಾಡುವಾಗ "ಉಳಿದವರೆಲ್ಲಾ 20 ರ ತನಕ ಮಗ್ಗಿ ಬರೀರಿ" ಎಂದು ಹೇಳುತ್ತಿದ್ದರು. ನಮಗೆ ಖಾತರಿಯಾಗುತ್ತಿತ್ತು, ಮೇಷ್ಟ್ರು ನಮಗೆ ಯಾವ ಪಾಠ ತೆಗೆದುಕೊಳ್ಳುವುದಿಲ್ಲವೆಂದು, ಒಬ್ಬರು ಬರೆದುದ್ದನ್ನು ಇನ್ನೊಬ್ಬರು ನೋಡಿಕೊಳ್ಳುತ್ತಾ ಎಲ್ಲರೂ ಬರೆಯುತ್ತಿದ್ದೆವು. ಹೀಗೆ ಯಾವ ತರಗತಿಗೆ ಪಾಠ ಮಾಡುತ್ತಾರೋ ಆ ತರಗತಿ ಬಿಟ್ಟು ಉಳಿದ ತರಗತಿಯ ವಿದ್ಯಾರ್ಥಿಗಳಿಗೆ ಯಾವುದಾದರೂ ಬರೆಯಲು ಹೇಳುತ್ತಿದ್ದರು. ಕೊನೆಗೆ ಬರೆದುದ್ದನ್ನು ನೋಡುತ್ತಲೂ ಇರಲಿಲ್ಲ. ನಾವು ಕಿಟಕಿಯ ಒಳಗೆ ನುಗ್ಗಿ ಬರುತ್ತಿದ್ದ ಬಿಸಿಲಿನ ನೆರಳನ್ನು ಪ್ರತಿ ದಿನ ತಪ್ಪದೇ ನೋಡುತ್ತಿದ್ದೆವು. ಆ ನೆರಳು ಬೋರ್ಡಿನ ಕೆಳಗೆ ಬಂತೆಂದರೆ ಶಾಲೆ ಬಿಡುವ ಸಮಯವೆಂದು ನಮಗೆ ಅರಿವಾಗುತ್ತಿತ್ತು. ಸಾರ್ ಹೊತ್ತಾಯಿತೆಂದು ನಾವೆಲ್ಲಾ ಕೂಗಿ ಕೊಳ್ಳುತ್ತಿದ್ದೆವು. ಲಾಂಗ್ ಬೆಲ್ ಹೊಡೆಸುತ್ತಿದ್ದರು. ಕೈಯಲ್ಲಿದ್ದ ಸ್ಲೇಟ್‌ನ್ನು ಎಡಗೈಯಲ್ಲಿ ಹಿಡಿದು ಓಡುತ್ತಾ ಬಂದು ಮನೆಯಲ್ಲಿ ಬಿಸಾಕಿ ಅವ್ವ ಅಪ್ಪ ಹೋಗಿರುವ ಹೊಲದಕಡೆ ಓಡುತ್ತಿದ್ದೆ. ಮೊದಲೇ " ಇಸ್ಕೂಲ್ ಬಿಡುತ್ತಿದಂಗನೇ ಹೊಲತ್ತಾಕೆ" ಬರಬೇಕೆಂದು ಅವ್ವ ತಾಕೀತು ಮಾಡಿ ಹೋಗಿರುತ್ತಿದ್ದಳು.

ಅವಳು ಹೇಳಿದ ಕೆಲಸ ಮಾಡಿ ತಲೆಯ ಮೇಲೆ ಹೊರಿಸಿದ ಸೌದೆ ಅಥವಾ ಹಸುಗಳಿಗೆ ಹುಲ್ಲು ಅಥವಾ ಇನ್ನಾವುದೋ ವಸ್ತುಗಳನ್ನು ಮನೆಗೆ ತರುವಷ್ಟರಲ್ಲಿ ಹೊತ್ತು ಮುಳುಗುತ್ತಿತ್ತು. ಊರೆಲ್ಲಾ ಕತ್ತಲೆ. ಮನೆಗಳಲ್ಲಿ ಮಾತ್ರ ಸೀಮೇ ಎಣ್ಣೆಬುಡ್ಡಿಯ ದೀಪಗಳು.

ನಮ್ಮ ಮನೆಯಲ್ಲಿ ಎರಡು ಸೀಮೆ ಎಣ್ಣೆ ದೀಪಗಳಿದ್ದವು, ಅದರಲ್ಲಿ ಒಂದು ರಿಪೇರಿ, ಇನ್ನೊಂದರಲ್ಲಿ ನಾನು ಓದ ಬೇಕಿತ್ತು. ಅವ್ವ ಅದರಲ್ಲೇ ಕೋಣೆಯಲ್ಲಿ ಅಡಿಗೆ ಕೆಲಸ ಮಾಡಲು ದೀಪ ಬೇಕಿತ್ತು. ಕೈಗೂಸಾದ ನನ್ನ ತಂಗಿ ಅತ್ತರೆ ಅವಳನ್ನು ಸಮಾಧಾನ ಪಡಿಸಲು ದೀಪ ಬೇಕಿತ್ತು. ಅಪ್ಪನಿಗೆ ಬೀಡಿ ಸೇದಲು ದೀಪ ಬೇಕಿತ್ತು. ಕೆಲವೊಮ್ಮೆ ನಾನು ಅವ್ವನ ಅಪ್ಪಣೆ ಇಲ್ಲದೆ ದೀಪದ ಮುಂದೆ ಓದಲು ಕುಂತರೆ "ಸೀಮೆ ಎಣ್ಣೆ ಇಲ್ಲಕಣೋ, ಇರೋದು ಒಂದೇ ಬುಡ್ಡಿ ಇನ್ನಾ ಒಂದೆರಡು ವಾರ ತಳ್ಳಬೇಕು ಅಲ್ಲಿಗಂಟ ಸೀಮೆಎಣ್ಣೆ ಸಿಗಲ್ಲ, ಹೊತ್ತಾರೆಕೆ ಓದಿವಂತೆ ಮಲುಗ್ಲಾ" ಎಂದು ಹಲುಬುತ್ತಿದ್ದಳು. ಬೆಳಿಗ್ಗೆ ಎದ್ದ ಮೇಲೆ ಮತ್ತೆ ಹೊಲಮನೆ ಕೆಲಸಕ್ಕೆ ಹಚ್ಚುತ್ತಿದ್ದಳು.

ಆ ಕೆಲಸನೆಲ್ಲಾ ಮುಗಿಸಿ ನೆನ್ನೆ ಬಿಸಾಕಿದ ಸ್ಲೇಟ್ ತೆಗೆದುಕೊಂಡು ಶಾಲೆಗೆ ಹೋದರೆ ಯಾಕೆ ಬಳಪ ತಂದಿಲ್ಲ ಎಂದು ಕೈ ಬೆರಳುಗಳ ಗಿಣ್ಣಿನ ಮೇಲೆ ಏಟು, ಏಟಿನ ನೋವಿನಿಂದ ಕಣ್ಣೀರು.

ಒಮ್ಮೆ ಜೋರಾಗಿ ಮಳೆ ಬಂದು ಹೆಂಚುಗಳೆಲ್ಲಾ ಗಾಳಿಗೆ ಹಾರಿ ಶಾಲೆಯೆಲ್ಲಾ ನೀರು ತುಂಬಿತ್ತು. ನಮಗೆಲ್ಲಾ ತಲೆಗೆ ಕೈ ಕಾಲುಗಳಿಗೆ ಹೊಡೆತಗಳು, ಗೋಡೆಗೆ ನೇತಾಗಿದ್ದ ದೇವರ ಫೋಟೋಗಳು, ಗಣ್ಯವ್ಯಕ್ತಿಗಳ ಫೋಟೋಗಳು ಚೂರಾಗಿದ್ದವು. ಶಾಲೆ ರಿಪೇರಿ ಮಾಡಿಸಲು ತಿಂಗಳು ಕಳೆದವು. ಆಗ ಮಾಷ್ಟ್ರು ಸ್ಕೂಲ್‌ನಿಂದ ಪರ್ಲಾಂಗ್ ದೂರದಲ್ಲಿದ್ದ ಅಲಸಿನ ಮರದ ಕೆಳಗೆ ಪಾಠ ಮಾಡುತ್ತಿದ್ದರು. ಆಗ ನಾನು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದೆ. ಹೀಗೇ ಸಾಗಿತು ನನ್ನ ಶಿಕ್ಷಣದ ಕಥೆ.


ಇದು ಬರೀ ನನ್ನ ಅನುಭವ ಮಾತ್ರ ಅಲ್ಲ. ಕನ್ನಡಮ್ಮನ ಲಕ್ಷಾಂತರ ಗ್ರಾಮಾಂತರ ವಿದ್ಯಾರ್ಥಿಗಳ ಅನುಭವ. ಬೆಳಿಗ್ಗೆ ಎದ್ದು ಹಳ್ಳಿಗಾಡಿನಲ್ಲಿ ತಮ್ಮ ಜೀವನಾಡಿಯಾದ ವ್ಯವಸಾಯದ ಎಲ್ಲಾ ಕೆಲಸಗಳಲ್ಲೂ ತೊಡಗಿಸಿಕೊಂಡು ಕುಡಿಯಲು ನೀರಿಲ್ಲದೆ, ತಿನ್ನಲು ಅನ್ನವಿಲ್ಲದೆ, ಓದಲು ಬೆಳಕಿಲ್ಲದೆ ದರಿದ್ರ ಸ್ಥಿತಿಯಲ್ಲಿಯೇ ಹೊಟ್ಟೆ ತುಂಬಿಸಿ ಕೊಳ್ಳಲು ಕಷ್ಟ ಪಡುವ ಹಳ್ಳಿಯ ವಿದ್ಯಾರ್ಥಿಗಳ ಪಾಡು ಅನುಭವವಿರುವ ನಮಗೇ ಗೊತ್ತು.

ದಿನ ಬೆಳ್ಗೆಗೆ ಎದ್ದರೆ "ಇವತ್ತು ಮಾರುಕಟ್ಟೆಗೆ ತರಕಾರಿ ಹಾಕಿ ಬಂದು ಸ್ಕೂಲ್‌ಗೆ ಹೋಗು", "ಚೆನ್ನಾಗಿ ಮಳೆಬಿದ್ದದೆ ಹೊಲ ಬಿತ್ತಬೇಕು ಶಾಲೆಗೆ ಇವತ್ತು ಹೊಗಬೇಡ, ಅಪ್ಪ ತಾಶೀಲ್ದಾರ್ ಕಛೇರಿಗೆ ಹೊಗಕ್ಕ ಅತ್ತಾರ ನೀ ಹೊಲದಕಡೆ ಹೋಗಿ ಗದ್ದೆಗೆ ನೀರು ಕಟ್ಟು", "ಲೇ ಅಮ್ಮಣಿ ನೀನು ಡೈರಿಗೆ ಹಾಲಾಕಿ ಸ್ಕೂಲ್‌ಗೆ ಹೋಗು", "ಹೆಣ್ಮಕ್ಕಳು ಎಷ್ಟು ಓದಿದ್ರೂ ಮಡ್ಕೆ ಕೆರೆಯೋದು ತಪ್ಪಲ್ಲಾ, ಬದುಕ ಮಾಡೋದಾ ಕಲಿ". ಹೀಗೆ ನಿರಂತರ ಜೀವನದ ಬದುಕಿನ ಕೆಲಸಗಳ ಜೊತೆಯಲ್ಲಿ 5-6 ಕೀ. ಮೀ ದೂರವಿರುವ ಶಾಲೆಗಳಿಗೆ ನಡೆದುಕೊಂಡೇ ಹೋಗುತ್ತಿರುವ ಗ್ರಾಮಾಂತರ ವಿದ್ಯಾರ್ಥಿಗಳ ದುಸ್ಥಿತಿ ಕಣ್ಣಿಗೆ ಕಟ್ಟುವಂತಿದೆ.

ನಗರದಲ್ಲಿ ಕೇಂದ್ರೀಕೃತವಾಗಿರುವ ಈ ಶಿಕ್ಷಣ ಸಂಸ್ಥೆಗಳಿಗೆ ಕನ್ನಡ ಮಾಧ್ಯಮದಲ್ಲಿ ಓದಿಬಂದು ನಗರದಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಓದಿರುವ ವಿದ್ಯಾರ್ಥಿಗಳ ಜೊತೆ ಪೈಪೋಟಿ ನಡೆಸುವ ಸಾಮಾರ್ಥ್ಯ ಇರುವುದಿಲ್ಲ. ಮೊದಲಿಗೆ ಹಳ್ಳಿ ವಿದ್ಯಾರ್ಥಿಗಳಿಗೆ ಅವಕಾಶಗಳೇ ಇರುವುದಿಲ್ಲ.

ಹೋಬಳಿ ಅಥವಾ ಹಳ್ಳಿಗಳಿಗೆ ಹೊಗುವುದು ಬೇಡ ಕೇವಲ ಬೆಂಗಳೂರಿನಿಂದ 30 ರಿಂದ 35 ಕೀ.ಮೀ. ದೂರವಿರುವ ದೊಡ್ಡಬಳ್ಳಾಪುರದಲ್ಲಿರುವ ಸರ್ಕಾರಿ ಹೈಸ್ಕೂಲ್ ಪರಿಸ್ಥಿತಿ, ದೇವನ ಹಳ್ಳಿಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜ್ ಮತ್ತು ಹೈಸ್ಕೂಲ್ ನೋಡಿದರೆ ಇಡೀ ಕರ್ನಾಟಕದ ಗ್ರಾಮೀಣ ಶಾಲಾ ಕಾಲೇಜುಗಳ ದುಸ್ಥಿತಿ ಕಣ್ಮುಂದೆ ಬಂದು ನಿಲ್ಲುತ್ತದೆ. ದೇವನಹಳ್ಳಿಯ ವಿದ್ಯಾರ್ಥಿಗಳು ಹೇಳುತ್ತಾರೆ. "ಸಾರ್ ಮಳೆ ಬಂದ್ರೆ ನಮಗೆ ಒಂದೊಂದು ವಾರ ರಜ ಸಾರ್. ಸ್ಕೂಲ್ ರೂಂಗಳು ತುಂಬಾ ನೀರು ತುಂಬಿಕೊಂಡಿರುತ್ತದೆ" ಅಂತ. ದೊಡ್ಡಬಳ್ಳಾಪುರದಲ್ಲಿ ಕಟ್ಟಡ ಮಾತ್ರ ಹೆಸರಿಗೆ ಇದೆ. ಆದರೆ ಒಳಗಡೆ ಪಿಯುಸಿ ಮತ್ತು ಜೆಓಸಿ ವಿದ್ಯಾರ್ಥಿ/ ವಿದ್ಯಾರ್ಥಿನಿಯರು ಧೂಳಿನ ಮೇಲೆ ಕುಳಿತಿದ್ದನ್ನು ಕಣ್ಣಾರೆ ನೋಡಿದ್ದೇನೆ. ಬೆಂಚುಗಳು ಮುರಿದು ಮೂಲೆಯಲ್ಲಿ ಬಿದ್ದಿವೆ.

ಇನ್ನು ಸಾರಿಗೆಯ ಸ್ಥಿತಿಯಂತೂ ಚಿಂತಾಜನಕವಾಗಿದೆ. ಒಂದು ಉದಾಹರಣೆ-ದೊಡ್ಡ ಬಳ್ಳಾಪುರದಿಂದ ಚಿಕ್ಕಬಳ್ಳಾಪುರಕ್ಕೆ ಹೊಗುವ ರಸ್ತೆಯಲ್ಲಿ ಸಿಗುವ ಜೋಗುಂಡನಹಳ್ಳಿಗೆ ಒಮ್ಮೆ ಹೋಗುವಾಗ ನೋಡಿದೆ. ಸುಮಾರು 3-4 ಬಸ್ಸುಗಳಿಗೆ ಹೋಗುವ ಪ್ರಯಾಣಿಕರೆಲ್ಲಾ ಒಂದೇ ಖಾಸಗಿ ಬಸ್ಸಿಗೆ. ಕಂಕಳುಗಳಲ್ಲಿ ಎಳೆಗೂಸುಗಳನ್ನು ಹಿಡಿದಿರುವ ತಾಯಂದಿರು, ಆಸ್ಪತ್ರೆಗೆ ಹೋಗುತ್ತಿರುವ ಗರ್ಭಿಣಿಯರು, ಬಾಣಂತಿಯರು, ಸಂತೆಗೆಂದು ಬಂದ ರೈತರು. ಇವರೆಲ್ಲರ ಮಧ್ಯದಲ್ಲಿ ಶಾಲಾ ಕಾಲೇಜಿನ ವಿದ್ಯಾರ್ಥಿ/ ವಿದ್ಯಾರ್ಥಿನಿಯರು, ಇವರೆಲ್ಲಾ ಸೇರಿ ತಮ್ಮ ಮನೆಗಳಿಗೆ ಹೋಗಲೇ ಬೇಕು. ಈ ಬಸ್ ಬಿಟ್ಟರೆ ಇನ್ನು ರಾತ್ರಿಯ ಬಸ್ ಮಾತ್ರ. ಗ್ರಾಮಾಂತರದ ಜನ ಪಟ್ಟಣಗಳಿಂದ ತಮ್ಮ ಊರುಗಳಿಗೆ ಸೇರುವುದೇ ದೊಡ್ಡ ಕೆಲಸವಾಗಿರುತ್ತದೆ. ಹೀಗೆ ಕರ್ನಾಟಕದ ಯಾವ ಗ್ರಾಮಾಂತರ ಪ್ರದೇಶ ನೋಡಿದರೂ ಸಾರಿಗೆಯಲ್ಲಿ ಹಳ್ಳಿ ಜನರು ಸಂಕಷ್ಟಕ್ಕೀಡಾಗಿದ್ದಾರೆ.



ದೇಶ ಸ್ವಾತಂತ್ರ್ಯ ಕಂಡು 50 ವರ್ಷವಾಯಿತೆಂದು ಎಲ್ಲಾ ವಿದ್ಯಾರ್ಥಿಗಳ ಕೈಯಲ್ಲಿ ಸುವರ್ಣ ಮಹೋತ್ಸವ ಆಚರಿಸಿದ ಆಳುವ ವರ್ಗ ನಮ್ಮ ದೇಶದಲ್ಲಿ ಶೇ. 70 ರಷ್ಟು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಜನತೆಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳಾದ ನೀರು, ಸಾರಿಗೆ ವ್ಯವಸ್ಥೆ, ವಿದ್ಯುತ್, ಶಿಕ್ಷಣ ನೀಡುವಲ್ಲಿ ವಿಫಲರಾಗಿದ್ದಾರೆ. ಕನಕಪುರ ತಾಲ್ಲೂಕಿನ ಒಬ್ಬ ಬಡ ವಿದ್ಯಾರ್ಥಿ ಕಷ್ಟಪಟ್ಟು ಪಿಯುಸಿ ಮುಗಿಸಿ ಬಿಎ ಸೇರಿದ್ದ, ಆತನ ಊರಿಂದ ಡಿಗ್ರಿ ಕಾಲೇಜ್‌ಗೆ 40 ಕೀ ಮೀ ಹೊಗಬೇಕಿತ್ತು. ಬಸ್ ಪಾಸ್ ಪಡೆದುಕೊಂಡಿದ್ದ, ಅಕಸ್ಮಾತ್ ಬಸ್ ಪಾಸ್ ಕಳೆದುಕೊಂಡು ಮತ್ತೆ ನಕಲು ಬಸ್ ಪಾಸ್ ಪಡೆಯಲು ಹಣವಿಲ್ಲದೆ ಆತನ ಇಡೀ ವಿದ್ಯಾಭ್ಯಾಸ ಕುಂಠಿತಗೊಂಡಿತು. ಮತ್ತೊಬ್ಬ ದೊಡ್ಡಬಳ್ಳಾಪುರ ತಾಲ್ಲೂಕಿನ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪ್ರಥಮ ದರ್ಜೆಯಲ್ಲಿ ಪಾಸಾದರೂ ಪಿಯುಗೆ ಸೇರಲು ಆರ್ಥಿಕ ತೊಂದರೆಯಿಂದ ರೇಷ್ಮೇ ದಾರ ನೇಯುವ ದಿನಗೂಲಿ ಕೆಲಸಕ್ಕೆ ಸೇರಿದ್ದಾನೆ. ಹೀಗೆ ಲಕ್ಷಾಂತರ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣದ ಸೌಲಭ್ಯವಿಲ್ಲದೆ ವಂಚಿತರಾಗುತ್ತಿದ್ದಾರೆ.

ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳು ಬೆಂಗಳೂರು- ಮೈಸೂರು- ಮಂಗಳೂರು ಇತ್ಯಾದಿ ನಗರಗಳಲ್ಲಿ ಕೇಂದ್ರೀಕೃತವಾಗಿವೆ. ಇಂದು ಇಡೀ ದೇಶದಲ್ಲೇ ಕರ್ನಾಟಕ ಶಿಕ್ಷಣ ಸಂಸ್ಥೆಗಳಲ್ಲಿ ಮುಂದಿದೆ. ಆ ಶಿಕ್ಷಣ ಸಂಸ್ಥೆಗಳು ಬಹುತೇಕ ಬೆಂಗಳೂರು ನಗರದಲ್ಲೇ ಇವೆ. ಮೊದಲಿಗೆ ನಾವು ಪ್ರಾಥಮಿಕ ಹಂತ ಶಿಕ್ಷಣ ಸಂಸ್ಥೆಗಳ ಅಂಕಿ ಅಂಶಗಳನ್ನು ನೋಡೋಣ-ಬೆಂಗಳೂರು ನಗರ ಮತ್ತು ಬೆಂ.ಗ್ರಾಮಾಂತರದಲ್ಲಿರುವ ಪ್ರಾಥಮಿಕ, ಪ್ರೌಢಶಾಲೆಗಳು, ಪದವಿ ಪೂರ್ವ ಕಾಲೇಜು ಸಂಖ್ಯೆ ನೋಡೋಣ.

	ಬೆಂಗಳೂರು ನಗರ	ಬೆಂ.ಗ್ರಾಮಾಂತರ
ವಿಸ್ತೀರ್ಣ ಜನ ಸಂಖ್ಯೆ	4839162	1673194
ವಿಸ್ತೀಣ	2190 ಚ.ಕೀ.ಮೀ	51815 ಕೀ.ಮೀ

ಈ ಅಂಕಿ ಅಂಶಗಳು (Population census 1991) ಕರ್ನಾಟಕ ಸರ್ಕಾರದ ಪ್ರಕಟಣೆ.

1997-98 ನೇ ಸಾಲಿನಲ್ಲಿ

	ಪ್ರಾಥಮಿಕ ಶಾಲೆಗಳು	ಪ್ರೌಢಶಾಲೆಗಳು	ಪದವಿಪೂರ್ವ
ಬೆಂಗಳೂರು ನಗರ	2549	1030	233
ಬೆಂಗಳೂರು ಗ್ರಾಮಾಂತರ	2375	324	60

ಬೆಂ. ಗ್ರಾಮಾಂತರದಲ್ಲಿ 14 ಪದವಿ ಕಾಲೇಜುಗಳಲ್ಲಿ 6 ಮಾತ್ರ ಸರ್ಕಾರಿ ಪದವಿ ಕಾಲೇಜ್‌ಗಳು, ಇನ್ನುಳಿದ 8 ಖಾಸಗಿ ಅನುದಾನಿತ ಪದವಿ ಕಾಲೇಜ್‌ಗಳು.

ಈ ಪದವಿ ಕಾಲೇಜ್‌ಗಳಲ್ಲಿ 4 ಕಾಲೇಜ್‌ಗಳಲ್ಲಿ ಮಾತ್ರ ವಿಜ್ಞಾನದ ಕೋರ್ಸುಗಳಿರುವುದು ದೊಡ್ಡ ಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಕಾಲೇಜ್‌ಗಳಲ್ಲಿ. ತಲಾ ಒಂದೊಂದು ಕಾಲೇಜಿನಲ್ಲಿ 300 ವಿದ್ಯಾರ್ಥಿಗಳಿಗಿಂತ ಹೆಚ್ಚು ಇಲ್ಲ. ಈಗಾಗಲೇ ಗ್ರಾಮಾಂತರ ಪ್ರದೇಶದ 21 ಪಿಯುಸಿ ಕಾಲೇಜುಗಳನ್ನು ಮುಚ್ಚಲು ತೀರ್ಮಾನಿಸಿರುವ ಸರ್ಕಾರ ಈ ಪದವಿ ಕಾಲೇಜುಗಳನ್ನು ಮುಚ್ಚಲು ತಡ ಮಾಡುವುದಿಲ್ಲ. ಅಲ್ಲದೆ ಅನುದಾನಿತ ಖಾಸಗಿ ಕಾಲೇಜುಗಳಿಗೆ ಮೈಕ್ರೋ ಬಯಾಲಜಿ ಮತ್ತು ಕಂಪ್ಯೂಟರ್ ಕೋರ್ಸುಗಳನ್ನು ನೀಡಿ ಖಾಸಗಿಯವರು ಡೋನೇಷನ್ ವಸೂಲಿ ಮಾಡಲು ಸಹಕರಿಸುತ್ತಾರೆ.

ಇನ್ನು ಐಟಿಐ ಮತ್ತು ಪಾಲಿಟೆಕ್ನಿಕ್, ಡಿಫಾರ್ಮ, ಬಿಫಾರ್ಮ ಕೋರ್ಸುಗಳ ಕಾಲೇಜುಗಳು ಮತ್ತು ತಾಂತ್ರಿಕ ಇಂಜನಿಯರಿಂಗ್ ಕಾಲೇಜು ಮತ್ತು ಮೆಡಿಕಲ್ ಕಾಲೇಜುಗಳ ಪರಿಸ್ಥಿತಿ ನಿಮಗೆ ತಿಳಿದಿದೆ. ಒಂದೆರಡು ಕಾಲೇಜುಗಳಿದ್ದರೂ ಖಾಸಗಿಯವರದ್ದಾಗಿರುತ್ತದೆ. ಈ ಕಾಲೇಜುಗಳು ಗ್ರಾಮಾಂತರ ವಿದ್ಯಾರ್ಥಿಗಳ ಹೆಸರೇಳಿ ಸ್ಥಾಪನೆಯಾಗುತ್ತವೆ. ಆದರೆ ಹೊರ ರಾಜ್ಯದಿಂದ ಹಣ ತರುವ ವಿದ್ಯಾರ್ಥಿಗಳಿಗೆ ಮತ್ತು ಇಲ್ಲಿಯ ಶ್ರೀಮಂತ ಮಕ್ಕಳಿಗೆ ಈ ಕೋರ್ಸುಗಳು ಕಾಯ್ದಿರುತ್ತವೆ. ಉದಾ: ದೇವನಹಳ್ಳಿಯಲ್ಲಿರುವ ಖಾಸಗಿ ಡಿಫಾರ್ಮ ಕಾಲೇಜಿನಲ್ಲಿನ ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ನೋಡಿದರೆ ತಿಳಿಯುತ್ತದೆ.

ಬೆಂಗಳೂರು ನಗರದಲ್ಲಿ ಅತಿ ಹೆಚ್ಚಿನ ಖಾಸಗಿ

11 →



ಬಂದ್, ಹರತಾಳಗಳ ನಿಷೇಧ

ಪ್ರಜಾಪ್ರಭುತ್ವದ ಮೇಲೆ ನ್ಯಾಯಾಂಗದ ಅತಿಕ್ರಮಣ

ಪ್ರಕಾಶ್ ಕಾರಟ್
ಅನು: ಕೆ.ಮಹಾಂತೇಶ್

ಕೇರಳ ಉಚ್ಚ ನ್ಯಾಯಾಲಯವು ರಾಜಕೀಯ ಪಕ್ಷಗಳು ನಡೆಸುವ 'ಹರತಾಳ'ವು ಕಾನೂನುಬಾಹಿರ ಮತ್ತು ಅಸಂವಿಧಾನಿಕವೆಂದು ಜೂನ್ 18, 2000 ದಂದು ತೀರ್ಪು ನೀಡಿದೆ. ಇದು ಈ ಹಿಂದೆ ಇದೇ ನ್ಯಾಯಾಲಯವು 'ಬಂದ್' ಆಚರಣೆ, ಸಂವಿಧಾನ ವಿರೋಧಿಯೆಂದು ನೀಡಿದ್ದ ತೀರ್ಪಿನ ಪುನರಾವರ್ತನೆಯಷ್ಟೆ ಈಗಿನ ತೀರ್ಪು ಆಗಿದೆ. ನ್ಯಾಯಾಂಗದ ಈ ರೀತಿಯ ಮಧ್ಯ ಪ್ರವೇಶವನ್ನು ನಾವು ಐಕ್ಯತೆಯಿಂದ ಮತ್ತು ಪ್ರಜ್ಞಾಪೂರ್ವಕವಾಗಿ ಪ್ರತಿಭಟಿಸಬೇಕಿದೆ.

ರಾಜಕೀಯ ಪಕ್ಷದ ನೊಂದಾವಣಿ ರದ್ದತಿಗೆ ಯಾವುದೇ ಅವಕಾಶವಿಲ್ಲ

ಕೇರಳ ನ್ಯಾಯಾಲಯದ ತೀರ್ಪನ್ನೇ ಅನುಸರಿಸಿ ಭಾರತದ ಚುನಾವಣಾ ಆಯೋಗವು ಸಿಪಿಐ(ಎಂ) ಪಕ್ಷಕ್ಕೆ ನೋಟೀಸು ಜಾರಿ ಮಾಡಿ, 'ರಾಜಕೀಯ ಪಕ್ಷ'ದ ನೊಂದಾವಣೆಯನ್ನು ರದ್ದುಪಡಿಸಬಾರದೇಕೆ ಎಂದು ಕೇಳಿದೆ. 'ಹರತಾಳ'ವನ್ನು ಒತ್ತಾಯದಿಂದ ನಡೆಸಲು ಪ್ರೇರೇಪಿಸುವ ರಾಜಕೀಯ ಪಕ್ಷಗಳ ನೊಂದಾವಣೆಯನ್ನು ರದ್ದುಪಡಿಸಲು ನ್ಯಾಯಾಲಯವು ಕ್ರಮಕೈಗೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಈ ಕ್ರಮವನ್ನು ಕೈಗೊಂಡಿದೆ.

ಪ್ರಸ್ತುತ ಇರುವ ಕಾನೂನಿನ ಪ್ರಕಾರ ಚುನಾವಣಾ ಆಯೋಗವು ಜನತಾ ಪ್ರಾತಿನಿಧ್ಯ ಕಾಯ್ದೆ ಸೆಕ್ಷನ್ 29(ಎ) ಪ್ರಕಾರ ರಾಜಕೀಯ ಪಕ್ಷಗಳ ನೊಂದಾವಣೆಯನ್ನು ಮಾಡುತ್ತದೆ. ಆ ಪ್ರಕಾರವಾಗಿ ಭಾರತದ ಸಂವಿಧಾನಕ್ಕೆ ನಿಷ್ಠೆ ಹೊಂದಿ, ಸಮಾಜವಾದಿ ಮೌಲ್ಯಗಳನ್ನು, ಧರ್ಮನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ಪ್ರತಿಜ್ಞೆ ಮಾಡಿ ಜೊತೆಗೆ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯಲು ಬದ್ಧವಾಗಿರಬೇಕು. ರಾಜಕೀಯ ಪಕ್ಷದ ಸಂವಿಧಾನವು ಈ ಅಂಶಗಳನ್ನು ಒಳಗೊಂಡಿದ್ದರೆ ಅದು ನೊಂದಾವಣೆಗೆ ಅರ್ಹವಾಗುತ್ತದೆ.

ಹರತಾಳಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾದ ಅರ್ಜಿಯನ್ನು ವಿಚಾರಣೆ ನಡೆಸಿದ ಹೈಕೋರ್ಟ್‌ನ ವಿಭಾಗೀಯ ಪೀಠದ ಎದುರು ಚುನಾವಣಾ ಆಯೋಗುವ ಮಂಡಿಸಿದ ವಾದದ ಪ್ರಕಾರ, ಆಯೋಗಕ್ಕೆ ಪಕ್ಷದ ಮಾನ್ಯತೆ ನೀಡುವ ಅಧಿಕಾರ ಇದೆಯೆ ಹೊರತು ಅದನ್ನು ರದ್ದುಪಡಿಸುವ ಅವಕಾಶ ಇಲ್ಲ. ಆದ್ದರಿಂದ ಪ್ರಸಕ್ತ ಕಾನೂನು ಪ್ರಕಾರ ಚುನಾವಣಾ ಆಯೋಗಕ್ಕೆ ಯಾವುದೇ ರಾಜಕೀಯ ಪಕ್ಷದ ನೊಂದಾವಣೆಯನ್ನು ರದ್ದು ಮಾಡುವ ಅವಕಾಶವಿಲ್ಲ.

ಹೀಗಿದ್ದಾಗ್ಯೂ ಕೇರಳ ಉಚ್ಚ ನ್ಯಾಯಾಲಯವು ಚುನಾವಣಾ ಆಯೋಗದ ಈ ನಿಲುವೆಯನ್ನು 'ರಿಟ್ ಮ್ಯಾಂಡಮಾಸ್' ಮೂಲಕ ತಳ್ಳಿ ಹಾಕಿ ಹರತಾಳಗಳನ್ನು ಬಲತ್ಕಾರ ವಾಗಿ ಆಚರಿಸುತ್ತಿರುವ ರಾಜಕೀಯ ಪಕ್ಷಗಳ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದೆ.

'ಕೊಚಿನ್'ನ ಒಂದು ಸಂಘಟನೆಯು ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ಹಿನ್ನೆಲೆಯಲ್ಲಿ ಈ ರೀತಿಯ ತೀರ್ಪು ಹೊರಬಂದಿದೆ. ನಂತರದಲ್ಲಿ ಅದೇ ಸಂಘಟನೆಯು, 1998 ಸೆಪ್ಟೆಂಬರ್ 23 ರಂದು ಸಿಪಿಐ(ಎಂ) ಪಕ್ಷವು ಹರತಾಳಕ್ಕೆ ಕರೆ ನೀಡಿತ್ತು ಎಂದು ದೂರಿ ಅದನ್ನು 'ರಾಜಕೀಯ ಪಕ್ಷ'ದ ಸ್ಥಾನದಿಂದ ಅಮಾನ್ಯ ಮಾಡಬೇಕೆಂದು - ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಹೈಕೋರ್ಟ್ ತೀರ್ಪನ್ನು ಆಧಾರವಾಗಿಟ್ಟುಕೊಂಡು ಸಿಪಿಐ(ಎಂ) ಗೆ ನೋಟೀಸನ್ನು ಜಾರಿ ಮಾಡಿದೆ.

'ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಬ್ರಿ ಮಸೀದಿ ವಿವಾದ ವಿಚಾರಣೆಯಲ್ಲಿರುವಾಗಲೇ 1992 ಲ್ಲಿ ಬಾಬ್ರಿ ಮಸೀದಿಯನ್ನೇ ನಾಶ ಮಾಡಿದರು. ಅಸಂಖ್ಯಾತ ಸಂವಿಧಾನ ವಿರೋಧಿ ಕೃತ್ಯಗಳು ದೇಶಾದ್ಯಂತ ನಿರಂತರವಾಗಿ ನಡೆದುಹೋದವು. ಸಂತೋಷವಾಗಿ ಜೀವನ ನಡೆಸುತ್ತಿದ್ದ ನಾಗರೀಕರ ಬದುಕಿನ ಹಕ್ಕಿನ ಮೇಲೆ ಧಾಳಿಗಳಾದವು. ಆದರೆ ಇವ್ಯಾವು ನ್ಯಾಯಾಲಯದ ದೃಷ್ಟಿಯಲ್ಲಿ ಅಸಂವಿಧಾನಿಕವಲ್ಲ!

ಜನಸಮುದಾಯದ ಪ್ರತಿಭಟನೆಯ ಹಕ್ಕಿನ ಉಲ್ಲಂಘನೆ

ಈ ಎಲ್ಲದರ ಒಟ್ಟು ಪರಿಣಾಮವೇನು?

ಈ ಮೊದಲು 'ಬಂದ್' ವಿರುದ್ಧ ಮತ್ತು ಇತ್ತೀಚೆಗೆ 'ಹರತಾಳ' ಆಚರಣೆಯ ವಿರುದ್ಧ ನೀಡಿರುವ ತೀರ್ಪಿನ ಒಟ್ಟಾರೆ ಫಲಿತಾಂಶವೆಂದರೆ ಜನಸಮುದಾಯವನ್ನು ಸಂಘಟಿಸಲು ರಾಜಕೀಯ ಪಕ್ಷಕ್ಕಿರುವ ಹಕ್ಕಿನ ಉಲ್ಲಂಘನೆಯಾಗಿದೆ.

ಈ ರೀತಿಯಲ್ಲಿ ಉನ್ನತ ನ್ಯಾಯಾಂಗವು ಜನರ ಪ್ರತಿಭಟನೆಯನ್ನು ಯಾವುದೋ ಪ್ರಭಾವಕ್ಕೆ ಒಳಗಾಗಿ ನಿಷೇಧ ಹೂಡುವುದರ ಮೂಲಕ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಭಂಗವನ್ನು ಉಂಟು ಮಾಡಹೊರಟಿದೆ. ಪ್ರತಿನಿತ್ಯವೂ ರಾಜಕೀಯ ಪಕ್ಷಗಳು ದೇಶಾದ್ಯಂತ ಒಂದಲ್ಲ ಒಂದು ಕಡೆಗಳಲ್ಲಿ ಪೋಲೀಸ್ ದಬ್ಬಾಳಿಕೆ, ಸರ್ಕಾರದ ಜನವಿರೋಧಿ ನೀತಿಗಳನ್ನು ಪ್ರತಿಭಟಿಸಿ ಬಂದ್‌ಗಳನ್ನು, ಮುಷ್ಕರಗಳನ್ನು ನಡೆಸುತ್ತಲೇ ಇವೆ. ಈ ತೀರ್ಪಿನ ಪ್ರಕಾರ ರಾಜಕೀಯ ಪಕ್ಷಗಳು ನಡೆಸುತ್ತಿರುವ ಎಲ್ಲಾ ಚಟುವಟಿಕೆಗಳು ಕಾನೂನುಬಾಹಿರ ಮಾತ್ರವಲ್ಲ ಅಸಂವಿಧಾನಿಕವಾದಂತಾಗುತ್ತದೆ. ಅಂದರೆ ಕೇರಳ ಹೈಕೋರ್ಟ್‌ನ ಪ್ರಕಾರ ಹರತಾಳಗಳು ನಾಗರೀಕರ ಹಕ್ಕುಗಳನ್ನು ಮೊಟಕುಗೊಳಿಸುತ್ತವೆ.

ಈ ರೀತಿಯ ತೀರ್ಪುಗಳು ಹೊರಬರುತ್ತಿರಲು ಕಾರಣವೆಂದರೆ . ನ್ಯಾಯಾಂಗದ ಕಾರ್ಯಕಲಾಪಗಳಲ್ಲಿ ಅಧಿಕಾರಯುತವಾಗಿ ನುಸುಳಿರುವ ದೊಡ್ಡ ವ್ಯಾಪಾರಸ್ಥರ, ಬಹುರಾಷ್ಟ್ರೀಯ ಕಂಪನಿಗಳ ಹಿತಗಳನ್ನು ಕಾಯುವ ಅಧಿಕಾರಶಾಹಿಗಳು ಕೋರ್ಟಿನಲ್ಲಿ ಇತ್ತೀಚೆಗೆ ಹೊರಬರುತ್ತಿರುವ ತಡೆಯಾಜ್ಞೆಗಳು, ಕಾರ್ಮಿಕರನು ಕಿತ್ತೊಗೆಯುವುದು ಕಾರ್ಮಿಕ ಸಂಘಗಳ ರಚನೆ ಮತ್ತು ಶಾಂತಿಯುತ ಪ್ರದರ್ಶನಗಳನ್ನು ಸಂಘಟಿಸುವುದರ ವಿರುದ್ಧ ನ್ಯಾಯಾಂಗದ ಈ ಪ್ರಕ್ರಿಯೆಗಳು ಪುನರಾವರ್ತನೆಯಾಗುತ್ತಿವೆ. ಅವುಗಳಲ್ಲಿ ದೊಡ್ಡ ಬಂಡವಾಳಿಗರ ಕೈಗಳೇ ಮೇಲಾಗುತ್ತಿವೆ.

ನ್ಯಾಯಾಂಗದ ಈ ಕ್ರಿಯಾಶೀಲ ಅಪಾಯ ಕೇವಲ 'ಬಂದ್' ಮತ್ತು 'ಹರತಾಳ'ಕ್ಕೆ ಮಾತ್ರ ಸೀಮಿತವಾಗಿದೆ ಎಂದು ಹೇಳುವಂತಿಲ್ಲ. ಸಾರ್ವಜನಿಕ ಸಭೆಗಳನ್ನು, ರ್‍ಯಾಲಿಗಳನ್ನು ನಿಷೇಧಿಸುವ ಗುರಿ ಇದ್ದಂತಿದೆ. ಈಗಾಗಲೇ ದೆಹಲಿ ಉಚ್ಚ ನ್ಯಾಯಾಲಯವು ಪೋಲೀಸ್ ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ರಸ್ತೆಗಳಲ್ಲಿ ನಡೆಸಲಾಗುತ್ತಿರುವ ಪ್ರದರ್ಶನಗಳನ್ನು, ರ್‍ಯಾಲಿಗಳನ್ನು ತಡೆಯಲು ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ಸೂಚಿಸಿದೆ.

ದೆಹಲಿಯ ಸಂಚಾರಿ ಪೋಲೀಸರು ಕೋರ್ಟಿನ ಮುಂದೆ ಒಂದು ಮನವಿಯನ್ನು ಸಲ್ಲಿಸಿ, ಬೆಳಿಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ ಮಾತ್ರ ರ್‍ಯಾಲಿ ಮತ್ತು ಪ್ರದರ್ಶನಕ್ಕೆ ಅವಕಾಶ ನೀಡುವ ಪ್ರಸ್ತಾವನೆಯನ್ನು ಮುಂದಿಟ್ಟಿದ್ದಾರೆ. ಸಂಜೆ ವೇಳೆಯಲ್ಲಿ ಅವಕಾಶ ನೀಡಿದರೆ ಕೆಲಸ ಮುಗಿಸಿದ ಜನರು ಪ್ರದರ್ಶನಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳುವುದರಿಂದ ಸಂಚಾರಕ್ಕೆ ಅಡ್ಡಿಯುಂಟಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ಈ ಪ್ರಸ್ತಾಪವೇನಾದರೂ ಜಾರಿಯಾಯಿತೆಂದರೆ ಬಹುತೇಕ ಕೆಲಸ ಮಾಡುತ್ತಿರುವ ಯಾರೊಬ್ಬರೂ ಪ್ರತಿಭಟನಾ ಪ್ರದರ್ಶನಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದೇ ಇಲ್ಲ. ಹಾಗೇನಾದರೂ ಪಾಲ್ಗೊಳ್ಳಲೇಬೇಕಾದರೆ ಅವರು ಕೆಲಸಕ್ಕೆ ರಜೆ ಪಡೆಯಬೇಕು. ಇಲ್ಲವೇ ಸಂಬಳವನ್ನು ಕಳೆದುಕೊಳ್ಳಬೇಕಾಗುತ್ತದೆ. ಇದೇ ಪ್ರಸ್ತಾಪದಲ್ಲಿ ಹೇಳಿರುವ ಇನ್ನೊಂದು ಹಾನಿಕಾರಕ ಅಂಶವೆಂದರೆ ಪ್ರದರ್ಶನದ ವೇಳೆಗಳನ್ನು ನಿರ್ಬಂಧ ಗೊಳಿಸುವುದು ಮತ್ತು ಆ ಸಂದರ್ಭಗಳಲ್ಲಿ ಬಳಸುವ ಧ್ವನಿವರ್ದಕಗಳನ್ನು ಕೇವಲ

ಸಿಪಿಐ(ಎಂ) ಪಕ್ಷವು ನ್ಯಾಯಾಂಗದ ಅಧಿಕಾರಶಾಹಿವಾದವನ್ನು ಒಂದು ಸವಾಲಾಗಿ ತೆಗೆದುಕೊಳ್ಳಲು ತೀರ್ಮಾನಿಸಿದೆ.

'ಬಾಕ್ಸ್'ನಂತಹ ಒಂದು ಲೌಡ್‌ಸ್ಪೀಕರ್‌ಗೆ ಸೀಮಿತಗೊಳಿಸಬೇಕು ಎಂಬುದು. ಕಲ್ಕತ್ತ ಉಚ್ಚ ನ್ಯಾಯಾಲಯವು ಸಹಾ ಬೀದಿಗಳಲ್ಲಿ ಪ್ರದರ್ಶನ ಗಳನ್ನು ಸೀಮಿತಗೊಳಿಸಬೇಕು ಎಂಬ ಮನವಿಯನ್ನು ಪುರಸ್ಕರಿಸಿದೆ. ಈಗಾಗಲೇ ಪ್ರದರ್ಶನಗಳು ಮತ್ತು ರ್‍ಯಾಲಿಗಳ ಮೇಲೆ ಜಿಲ್ಲಾ ಆಡಳಿತಗಳು ಅಡೆ-ತಡೆಗಳನ್ನು ಹೇರತೊಡಗಿವೆ. ಲೌಡ್‌ಸ್ಪೀಕರ್ ಬಳಸಲು, ಪ್ರತಿಭಟನೆ ಮಾರ್ಗ ಮತ್ತು ಸಭೆಗಳನ್ನು ನಡೆಸುವ ಮೈದಾನಕ್ಕೆ ಅನುಮತಿ ಪಡೆಯಲು ಹಲವಾರು ತಡೆಗಳನ್ನು ಎದುರಿಸಬೇಕಾಗಿದೆ. ಈ ಎಲ್ಲಾ ಚಟುವಟಿಕೆ ಗಳನ್ನು ಕುಂಠಿತಗೊಳಿಸುವುದು ಮತ್ತು ಸಂವಿಧಾನಿಕ ಹಕ್ಕುಗಳನ್ನು ಮೊಟಕುಗೊಳಿಸುವುದು.

ಪ್ರತಿಭಟನಾ, ಪ್ರದರ್ಶನಗಳು ದಿನನಿತ್ಯದ ಘಟನೆಗಳಾಗಿವೆ

ಕೇಂದ್ರ ಸರ್ಕಾರವು ಸಂವಿಧಾನದ 356 ನೇಕಲಂನ್ನು ದುರ್ಬಳಕೆ ಮಾಡಿ ಬಿಹಾರದ

ಪುಟ 11 ಕ್ಕೆ

ಶಿಕ್ಷಣ ಸಂಸ್ಥೆಗಳಿವೆ. ದೇಶದ ಬಹುಜನರು ಬೆಂಗಳೂರು ನಗರಕ್ಕೆ ಹಣ ಸಮೇತ ಲಗ್ಗೆ ಇಡುತ್ತಿದ್ದಾರೆ. ಕೇವಲ ನಗರದಿಂದ 30 ಕೀ.ಮೀ. ದೂರವಿರುವ ಈ ನಾಡಿನ ವಾರಸುದಾರರು-ಗ್ರಾಮಾಂತರ ವಿದ್ಯಾರ್ಥಿಗಳು ಬಾಯಿ ಬಾಯಿಬಿಡುವಂತೆ ಆಗಿದೆ. 1999-2000 ದಲ್ಲಿ ಶೈಕ್ಷಣಿಕ ವರ್ಷದಲ್ಲಿ ಡಾಕ್ಟರ್ ಮತ್ತು ಇಂಜಿನಿಯರಿಂಗ್ ಕೋರ್ಸುಗಳಿಗೆ ಲಿಖಿತ ಪರೀಕ್ಷೆ ನಡೆದಾಗ ಹೊರರಾಜ್ಯದ ವಿದ್ಯಾರ್ಥಿಗಳ ದಂಡೇ ಬಂದಿತ್ತು, ವಿಶೇಷ ರೈಲು ವ್ಯವಸ್ಥೆ ಮಾಡಲಾಗಿತ್ತು. ಮಾಧ್ಯಮಗಳಲ್ಲಿ ಸುದ್ದಿಯೇ ಸುದ್ದಿ. ಆದರೆ ಗ್ರಾಮಾಂತರ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಶಿಕ್ಷಣವೂ ಕೂಡ ಸಿಗದಂತ ಸ್ಥಿತಿಗೆ ತಲುಪಿಸುತ್ತಿರುವುದರ ಬಗ್ಗೆ ಯಾವ ಪತ್ರಿಕೆಯೂ ಸೊಲ್ಲೆತ್ತಲಿಲ್ಲ. ಗ್ರಾಮಾಂತರ ವಿದ್ಯಾರ್ಥಿಗಳಿಗೆ, ಅದರಲ್ಲೂ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಡಾಕ್ಟರ್, ಇಂಜಿನಿಯರಿಂಗ್, ಲಾಯರ್ಸ್, ಪ್ರಾಧ್ಯಾಪಕರ ಹುದ್ದೆಗಳಿಗೆ ಕೇವಲ ಕನಸಷ್ಟೇ. ಬರೀ ನಗರದಲ್ಲಿ ಕೇಂದ್ರೀಕೃತವಾಗಿರುವ ಈ ಶಿಕ್ಷಣ ಸಂಸ್ಥೆಗಳಿಗೆ ಕನ್ನಡ ಮಾಧ್ಯಮದಲ್ಲಿ ಓದಿಬಂದು ನಗರದಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಓದಿರುವ ವಿದ್ಯಾರ್ಥಿಗಳ ಜೊತೆ ಪೈಪೋಟಿ ನಡೆಸುವ ಸಾಮಾರ್ಥ್ಯ ಇರುವುದಿಲ್ಲ. ಮೊದಲಿಗೆ ಹಳ್ಳಿ ವಿದ್ಯಾರ್ಥಿಗಳಿಗೆ ಅವಕಾಶಗಳೇ ಇರುವುದಿಲ್ಲ. ಇದಕ್ಕೆ ಸೂಕ್ತ ಉಹಾಹರಣೆ ನಗರ ಪ್ರದೇಶದಲ್ಲಿ ಶೇ। 60 ಕ್ಕಿಂತಲ್ಲೂ ಹೆಚ್ಚು ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗುತ್ತಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಕೇವಲ ಬೆರಳೆಣಿಕೆಯಷ್ಟು ಮಾತ್ರ ಪ್ರಥಮ ದರ್ಜೆಯಲ್ಲಿ ಪಾಸಾಗುತ್ತಾರೆ. ಇದಕ್ಕೆ ಸಮಾನ ರೀತಿ ಶಿಕ್ಷಣ ನೀಡದದೇ ಇರುವುದು ಕಾರಣವಲ್ಲವೇ?. ಅವಕಾಶ ಶಿಕ್ಷಣ ವಿದ್ಯಾರ್ಥಿಗಳು ಅತ್ಯುನ್ನತ ಸ್ಥಾನಕ್ಕೆ ಹೋಗಿಲ್ಲವೇ?. ಅವಕಾಶ ವಂಚಿತರು ಗ್ರಾಮೀಣ ಪ್ರದೇಶದವರೇ ಹೆಚ್ಚಿನ ಸಂಖ್ಯೆಯವರಾಗಿದ್ದಾರೆ. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಮಾನ ಶಿಕ್ಷಣದ ವ್ಯವಸ್ಥೆ ಕಲ್ಪಿಸಬೇಕಾದದು ಸರ್ಕಾರದ ಜವಾಬ್ದಾರಿಯಲ್ಲವೇ?. ಓದಲು ಕನ್ನಡದಲ್ಲಿ ಸರಿಯಾಗಿ ಪುಸ್ತಕಗಳೇ ಸಿಗದಿರುವಾಗ ಇಂಗ್ಲೀಷ್ ಮಾಧ್ಯಮದ ಪುಸ್ತಕಗಳನ್ನು ಓದಿ, ಅರ್ಥ ಮಾಡಿಕೊಂಡು, ಪ್ರಶ್ನೆಗಳಿಗೆ ಉತ್ತರಿಸಿ ಉತ್ತಮ ಅಂಕಗಳಿಸಲು ಗ್ರಾಮೀಣ ವಿದ್ಯಾರ್ಥಿ ಪ್ರತಿಭೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸ್ ಮಾಡಲು ಸಾಧ್ಯವೇ?. ಗ್ರಾಮಾಂತರ ವಿದ್ಯಾರ್ಥಿಗಳು ಶೇ. 50-60 ಅನುತ್ತೀರ್ಣರಾಗಲು ಕಾರಣವೇನೆಂಬುದು ಸರ್ಕಾರದ ಕಣ್ಣಿಗೆ ಕಾಣುತ್ತಿಲ್ಲವೆ?. ಇದಕ್ಕೆ ಹೊಣೆ ಯಾರು?. ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಯಾಕೆ ಮಾಡಿಲ್ಲ. 50 ವರ್ಷಗಳಿಂದ ಕಿಸಿದಿದ್ದೇನು? ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ವೈಜ್ಞಾನಿಕವಾಗಿ ಗ್ರಾಮೀಣ ಪ್ರದೇಶ ಮುಂದಕ್ಕೆ ಬಾರದ ಹೊರತು ದೇಶದ ಉದ್ದಾರ ಸಾಧ್ಯವಿಲ್ಲ.

ಕೈಗಾರಿಕೆ-ವಾಣಿಜ್ಯ - ಉದ್ದಿಮೆ, ಮಾಹಿತಿ ತಂತ್ರಜ್ಞಾನ, ಇಂಟರ್‌ನೆಟ್, ಕಂಪ್ಯೂಟರ್, ಹೈಟೆಕ್ ಎಂದು ಬೊಬ್ಬೆ ಇಡುತ್ತಿರುವ ಸರ್ಕಾರಗಳು ಭಾರತ ದೇಶದ ಜನರಲ್ಲಿ ವಿಶಿಷ್ಟ ಪರಂಪರೆಯ ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಬದುಕಿನ ಜೊತೆಯಲ್ಲೇ ಬೆಸೆದುಕೊಂಡು ಬಂದಿರುವ ಕೃಷಿ ಆಧಾರಿತ ದೇಶದಲ್ಲಿ ತಂತ್ರಜ್ಞಾನವನ್ನು ಯಾವ ರೀತಿ ಬಳಸಿದರೆ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂಬುದನ್ನು ಮರೆತು ಕೇವಲ ಶ್ರೀಮಂತರ ಸ್ವತ್ತನ್ನಾಗಿಸುತ್ತಿರುವ ಮರ್ಮವೇನೆಂದು ನಾವು ಅರಿಯಬೇಕಿದೆ. ○



ಭಾರತದಲ್ಲಿ ಔಷಧಿ ಸ್ಥಿತಿಗತಿ

ಪ್ರಕಾಶ್ ಸಿ.ರಾವ್

ಇತ್ತೀಚೆಗೆ ನಾವು ಸ್ವಾತಂತ್ರ್ಯ ಪಡೆದ 50 ವರ್ಷಗಳ ಆಚರಣೆಯಲ್ಲಿ ಔಷಧಿ ಕ್ಷೇತ್ರದಲ್ಲಿ ಸಾಧಿಸಿದ್ದೇನು ಎಂಬುದು ಕುತೂಹಲಕಾರಿ ವಿಷಯ.

ಅಂದು ಔಷಧಿ ಕೇವಲ 10 ಕೋಟಿ ರೂಪಾಯಿನದು, ಆದರೆ ಇಂದು 10,000 ಕೋಟಿ ರೂಪಾಯಿ. ಅಂಕಿ ಅಂಶಗಳನ್ನು ನೋಡಿದರೆ ಪರಿಸ್ಥಿತಿ ಆಶಾದಾಯಕವಾಗಿದೆ ಎಂದು ಹೇಳಬಹುದು. ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಔಷಧಿ ಕ್ಷೇತ್ರದಲ್ಲಿ ಭಾರತದ್ದೇ ಮೇಲುಗೈ ಎಂದು ಅಂತರ್‍ರಾಷ್ಟ್ರೀಯ ಸಂಸ್ಥೆ(ಅಂಕ್ಟಾಡ್) ಪ್ರಶಂಸಿಸಿದೆ. ಆದಕ್ಕೆ ಕಾರಣ ನಮ್ಮಲ್ಲಿ ಇಂದು ಸುಮಾರು ಎಲ್ಲ ಔಷಧಿಗಳನ್ನು ಪ್ರಾರಂಭದಿಂದ ಕೊನೆಯ ಹಂತದವರೆಗೆ ತಯಾರಿಸುವ ತಂತ್ರಜ್ಞಾನವಿದೆ. ತಂತ್ರಜ್ಞಾನ ವಿಷಯದಲ್ಲಿ ನಾವು ಸ್ವಾವಲಂಬಿಗಳೆಂದು ಹೇಳಬಹುದು. ಆದರೆ ಕೆಲವು ಇತರೇ ವಿಷಯಗಳನ್ನು ಗಮನಿಸಿದರೆ ಔಷಧಿ ಕ್ಷೇತ್ರದಲ್ಲಿ ಚಿಂತಾಜನಕ ಪರಿಸ್ಥಿತಿ ಇದೆಯೆಂದು ಸ್ಪಷ್ಟವಾಗುತ್ತದೆ. ಸುಮಾರು ಎಲ್ಲ ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಲಿವೆ. ರೋಗಾಣುಗಳು ಔಷಧಿಗಳನ್ನು ನಿರೋಧಿಸುತ್ತಿರುವುದರಿಂದ, ಔಷಧಿಗಳು ಪರಿಣಾಮಕಾರಿ ಯಾಗುತ್ತಿಲ್ಲ. ಇಂದು ಕ್ಷಯರೋಗ, ಕುಷ್ಠರೋಗ ಗಳಿಗೆ ಅನೇಕ ಸ್ಥಳಗಳಲ್ಲಿ ಔಷಧಿ ಲಭ್ಯವಿಲ್ಲ. ಇದೊಂದೇ ಮುಖ್ಯ ಕಾರಣವಲ್ಲದಿದ್ದರೂ ಔಷಧಿ ಅಭಾವ ಹಾಗೂ ಈ ರೋಗಗಳು ಹೆಚ್ಚುತ್ತಿರುವುದನ್ನು ಕಡೆಗಣಿಸಲಾಗುವುದಿಲ್ಲ.

> **ಇಂದು ಔಷಧಿಕ್ಷೇತ್ರ ಕೆಲವೇ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿ ಬರುವ ಸಾಧ್ಯತೆ ಇದೆ. ಈ ಕಂಪನಿಗಳು ಅನಗತ್ಯ ಔಷಧಿಗಳನ್ನು ತಯಾರಿಸುತ್ತ ಬಂದು ದಾಖಲೆ ಸಾಧಿಸಿವೆ.**

ಅಗತ್ಯ ಔಷಧಿಗಳಿಗಿಂತ ಅನಗತ್ಯ ಔಷಧಿಗಳ ತಯಾರಿಕೆ (ಟಾನಿಕ್, ವಿಟಮಿನ್ ಮಾತ್ರೆಗಳು ಇತ್ಯಾದಿ) ಪ್ರಮಾಣ ಹೆಚ್ಚಿದೆ.

ಔಷಧಿ ಬೆಲೆ ದಿನೇ ದಿನೇ ಹೆಚ್ಚುತ್ತಿದೆ.

- ಅನೇಕ ಅಗತ್ಯ ಔಷಧಿಗಳ ಕೊರತೆ ಇದೆ, ಉದಾಹರಣೆಗೆ ಕ್ಷಯರೋಗ ಚಿಕಿತ್ಸೆ ರಕ್ತಹೀನತೆಗೆ ಉಪಯೋಗಿಸುವ ಫೆರಸ್ ಸಲ್ಫೇಟ್, ರಕ್ತಹೀನತೆಗೆ ಉಪಯೋಗಿಸುವ ದುಬಾರಿ ಟಾನಿಕ್‌ಗಳು (ಅನಗತ್ಯ) ಲಭ್ಯವಿದೆ.
- ಬ್ರಾಂಡ್ ಔಷಧಿ, ಜನೆರಿಕ್ ಔಷಧಿಗಳಿಗಿಂತ ದುಬಾರಿ, ಜನರಿಕ್ ಔಷಧಿಯು ಸುಲಭವಾಗಿ ದೊರಕದೇ, ಬ್ರಾಂಡ್ ಔಷಧಿಗಳಿಗೆ ಹೆಚ್ಚು ಪ್ರೋತ್ಸಾಹವಿದೆ.
- ದೇಶದಲ್ಲಿ ಕೇವಲ ಶೇ. 20-30 ಜನರಿಗೆ ಮಾತ್ರ ಆಧುನಿಕ ಔಷಧಿಗಳು ದೊರಕುತ್ತಿದೆ. ಅಂದರೆ ಔಷಧಿ ವಿತರಣೆ ಸರಿಯಾಗಿಲ್ಲ. ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಿ ಪೂರೈಕೆಯಾದ 2-3 ತಿಂಗಳಲ್ಲೇ ಔಷಧಿಗಳು ಮುಗಿದು ಹೋಗುತ್ತವೆ. ಔಷಧಿಗಳನ್ನು ದುಡ್ಡು ಕೊಟ್ಟು ಕೊಂಡುಕೊಳ್ಳಲು ವೈದ್ಯರು ಆದೇಶಿಸುತ್ತಾರೆ.
- ಆಧುನಿಕ ಔಷಧಿಗಳ ಗುಣಮಟ್ಟ ಪರೀಕ್ಷೆ ಅತ್ಯಗತ್ಯ. ಇದು ಸರಿಯಾಗಿಲ್ಲದ ಕಾರಣ, ಅನೇಕ ಔಷಧಿ ದುರಂತಗಳಾಗುತ್ತವೆ(ಜೆ.ಜೆ. ಆಸ್ಪತ್ರೆ, ಪೆರಿಸಂದ್ರ ದುರಂತ)
- ಅಪಾಯಕಾರಿ, ಔಷಧಿಗಳು (ಅನಾಲ್‌ಜಿನ್) ಇಂದಿಗೂ ದೊರಕುತ್ತಿದೆ. ನಿಷೇಧಿಸುವ ಪ್ರಯತ್ನ ಮಾಡಲಾಗಿಲ್ಲ. ಅಪಾಯಕಾರಿ ಗರ್ಭನಿರೋಧಕ ಔಷಧಿಗಳನ್ನು ಮಾರಲು ಪರವಾನಗಿ ಕೊಡಲಾಗಿದೆ. ಉದಾಹರಣೆಗೆ ಡಿಪೊಪ್ರೊವೆರಾ, ಕ್ವಿನಾಕ್ರಿನ್, ಯಾರುಬೇಕಾದರೂ ವೈದ್ಯರ ಆದೇಶ ಚೀಟಿ ಇಲ್ಲದೇ ಔಷಧಿ ಅಂಗಡಿಗಳಿಂದ ಔಷಧಿಗಳನ್ನು ಪಡೆಯಬಹುದಾಗಿದೆ. Schedules ಗಳಿಗೆ ಅರ್ಥವಿಲ್ಲದಂತಾಗಿದೆ.
- ಔಷಧಿ ನಿಷೇಧಿಸುವ ಪ್ರಕ್ರಿಯೆ ದುರ್ಬಲವಾಗಿದೆ. ನಿಷೇಧಿಸಬಹುದಾದ ಅನೇಕ ಔಷಧಿಗಳು ಸುಲಭವಾಗಿ ದೊರಕುತ್ತವೆ. ಉದಾ: ಅನಾಲ್‌ಜಿನ್, ಸಮ್ಮಿಶ್ರ ಬೇಧಿ ಚಿಕಿತ್ಸೆಗಳು, ಅನಬಾಲಿಕ್ ಸ್ಟೀರಾಯ್ಡ್.
- ಔಷಧಿ ಜಾಹಿರಾತಿನ ಮೇಲೆ ಯಾವ ಹತೋಟಿ ಇಲ್ಲ. ಸಕ್ಕರೆ ಕಾಯಿಲೆ, ಲೈಂಗಿಕ ರೋಗ, ಅಸ್ತಮಾ ರೋಗ ಗಳಿಗೆ ಸಂಪೂರ್ಣ ಗುಣಪಡಿಸುವುದಾಗಿ ಜಾಹಿರಾತು ಪಡಿಸಿ ಔಷಧಿಗಳನ್ನು ಮಾರಲಾಗುತ್ತಿದೆ. ಇಂದು ಈ ರೋಗಗಳನ್ನು ಯಾವ ಪದ್ಧತಿಯಿಂದಲೂ ಸಂಪೂರ್ಣ ಗುಣಪಡಿಸಲು ಸಾಧ್ಯವಿಲ್ಲ. ಹತೋಟಿಯಲ್ಲಿಡಬಹುದಷ್ಟೇ ಎಂದು ಎಲ್ಲರಿಗೂ ತಿಳಿದ ವಿಷಯ. ಔಷಧಿ ಹಾಗೂ ಆಹಾರ ಘಟಕಗಳ ಬಗ್ಗೆ ತಪ್ಪು ಜಾಹೀರಾತುಗಳನ್ನು ದೂರದರ್ಶನವೇ ತೋರಿಸುತ್ತಿದೆ.

ಜನಾರೋಗ್ಯ ಸರ್ಕಾರದ ಆದ್ಯ ಕರ್ತವ್ಯ. ನೈರ್ಮಲ್ಯ ಸಾಧನೆ, ಕುಡಿಯುವ ನೀರಿನ ವ್ಯವಸ್ಥೆ, ಪೌಷ್ಟಿಕ ಆಹಾರ ದೊರಕುವಿಕೆಯೊಂದಿಗೆ ಅಗತ್ಯ ಔಷದಿಗಳ ದೊರಕುವಿಕೆಗೆ ಸರಕಾರ ಹೆಚ್ಚು ಗಮನಕೊಡಬೇಕಾಗಿದೆ.

ಯಾವುದೇ ದೇಶದಲ್ಲಿ ಔಷಧಿ ಪರಿಸ್ಥಿತಿ ಸರಿಯಾಗಿರಬೇಕಾದರೆ ಅದು ಔಷಧಿ ನೀತಿ, ಸರ್ಕಾರ, ಔಷಧಿ ಉದ್ಯಮ, ವೈದ್ಯರು ಹಾಗೂ ಸಾಮಾನ್ಯ ಜನರ ಅಗತ್ಯತೆಗಳನ್ನು ಅವಲಂಬಿಸುತ್ತದೆ. ನಮ್ಮ ದೇಶದಲ್ಲಿ ಈ ಚಿಂತಾಜನಕ ಸ್ಥಿತಿ ಇರಲು ಕಾರಣವೇನು ತಿಳಿಯೋಣ.

ಸರಕಾರ

1974 ರಲ್ಲಿ ಹಾಥೀ ಸಮಿತಿಯು ಜನಪರ ಔಷಧಿ ನೀತಿಯನ್ನು ಅನುಸರಿಸಲು ಸರಕಾರಕ್ಕೆ ಸಲಹೆ ಕೊಟ್ಟಿತು. ಸರಕಾರ 1978 ರಲ್ಲಿ ಮೊದಲ ಔಷಧಿ ನೀತಿಯನ್ನು ರೂಪಿಸುವಾಗ, ಬಹುರಾಷ್ಟ್ರೀಯ ಔಷಧಿ ಕಂಪನಿಗಳ ಒತ್ತಡಕ್ಕೆ ಮಣಿದು ಹಾಥೀ ಸಮಿತಿಯ ಶಿಫಾರಸ್ಸು ಲಾಭಕೋರರ ಪರವಾದ ಔಷಧಿ ನೀತಿಯನ್ನು ಜಾರಿಗೆ ತಂದಿತ್ತು. ನಂತರದ 1986, 1994 ರ ಆರೋಗ್ಯ ನೀತಿ ಸಂಪೂರ್ಣ ಲಾಭಕೋರ ಉದ್ಯಮಿಗಳ ಪರ ನೀತಿಯಾಯಿತು. ಅದಲ್ಲದೆ ವಿಚಿತ್ರ ಸಂಗತಿಯೆಂದರೆ 1977 ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಕಾರ್ಯಕ್ರಮವನ್ನು ಇಲ್ಲಿಯವರೆಗೆ ಯಾವ ಔಷಧಿ ನೀತಿಯಲ್ಲೂ ಗಣನೆಗೆ ತೆಗೆದುಕೊಂಡಿಲ್ಲ. ಔಷಧಿ ಸ್ಥಿತಿಯನ್ನು ಸುಧಾರಿಸಲು ಅಗತ್ಯ ಔಷಧಿ ಪಟ್ಟಿಯನ್ನು ಜಾರಿಗೊಳಿಸುವುದು ಮೊದಲನೇ ಹೆಜ್ಜೆ. 60 ರ ದಶಕದಲ್ಲಿ ಸಾರ್ವಜನಿಕ ಔಷಧಿ ಉದ್ಯಮವನ್ನು ಪ್ರಾರಂಭಿಸುವುದು, 70 ರ ದಶಕದಲ್ಲಿ ಭಾರತೀಯ ಪೇಟೆಂಟ್ಸ್ ಕಾನೂನನ್ನು ಜನ ಹಿತದೃಷ್ಟಿಯಿಂದ ಜಾರಿಯಲ್ಲಿ ತರುವುದನ್ನು ಬಿಟ್ಟರೆ, ಭಾರತ ಸರಕಾರ ಬಹುರಾಷ್ಟ್ರೀಯ ಔಷಧಿ ಉದ್ಯಮದ ಮೇಲೆ ಹೆಚ್ಚು ಭರವಸೆ ಇಟ್ಟು, ಪ್ರೋತ್ಸಾಹಿಸುತ್ತದೆ. ಇಂದು ಯಾವ ದೂರದೃಷ್ಟಿ ಇಲ್ಲದೇ ಔಷಧಿ ಕ್ಷೇತ್ರದಲ್ಲಿ ಪೇಟೆಂಟ್ಸ್‌ನ್ನು ಬರಮಾಡಿಕೊಂಡಿದೆ. ನಾವು ಸ್ವಾವಲಂಬನೆಯಿಂದ, ಪರಾವಲಂಬನೆಗೆ ಸಿದ್ಧರಾಗಬೇಕಾಗಿದೆ. ಇದರಿಂದಾಗಿ ಆಗಲೇ ಔಷಧಿ ಬೆಲೆಗಳು ಏರುತ್ತಲಿವೆ. ಜನರ ಹೇಳತೀರದ ವ್ಯಥೆಗಳು ಇಲ್ಲಿಂದ ಪ್ರಾರಂಭವಾಗುತ್ತಿದೆ. ಭಾರತದ ಮುಂಗಡ ಪತ್ರದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಬರುವ ಹಣ, ಪ್ರತಿ ಪಂಚವಾರ್ಷಿಕ ಯೋಜನೆಯಲ್ಲಿ ಕಡಿಮೆಯಾಗುತ್ತಿದೆ. ವಿಶ್ವಬ್ಯಾಂಕ್, ಐ.ಎಂ.ಎಫ್. ಆದೇಶದಂತೆ ಇನ್ನೂ ಕಡಿಮೆ ಮಾಡಲು ಸರಕಾರ ಹಿಂದೇಟು ಹಾಕುತ್ತಿಲ್ಲ. ಸರಕಾರ ಜನರ ಅಗತ್ಯತೆ ಹಾಗೂ ಆತಂಕಗಳ ಬಗ್ಗೆ ಬೇಜವಾಬ್ದಾರಿಯನ್ನು ತೋರಿಸುತ್ತಿರುವುದು ಸ್ಪಷ್ಟವಾಗುತ್ತದೆ.

ಉದ್ಯಮ

ಭಾರತದಲ್ಲಿ ಪ್ರಾರಂಭದಲ್ಲಿ ಬಹುರಾಷ್ಟ್ರೀಯ ಉದ್ದಿಮೆಗಳು ಔಷಧಿ ಕ್ಷೇತ್ರದಲ್ಲಿದ್ದವು. ಆಗ ಭಾರತದಲ್ಲಿ ಔಷಧಿ ಬೆಲೆಗಳು ಜಗತ್ತಿನ ಯಾವುದೇ ದೇಶಕ್ಕಿಂತ ಹೆಚ್ಚಿತ್ತು. ಸಾರ್ವಜನಿಕ ಉದ್ಯಮ ಬಂದನಂತರ ಔಷಧಿ ಬೆಲೆಗಳು ಕಡಿಮೆಯಾಯಿತು. ಅದೇ ಸಮಯದಲ್ಲಿ ಭಾರತದ ಖಾಸಗೀ ಕ್ಷೇತ್ರದ ಬೆಳವಣಿಗೆಯಾಯಿತು. ಭಾರತೀಯ ಪೇಟೆಂಟ್ಸ್ ಕಾನೂನು, ಭಾರತೀಯ ಉದ್ಯಮದ ಸಹಾಯಕ್ಕೆ ಬಂದಿತು. ಆದರೂ ಬಹುರಾಷ್ಟ್ರೀಯ ಕಂಪನಿ ಹಿಡಿತ ದಿನೇ ದಿನೇ ಹೆಚ್ಚುತ್ತಾ ಬಂದಿತು. ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ನೀತಿಯಿಂದ ಇಂದು ಔಷಧಿಕ್ಷೇತ್ರ ಕೆಲವೇ ಬಹುರಾಷ್ಟ್ರೀಯ ಕಂಪನಿಗಳ ಹಿಡಿತದಲ್ಲಿ ಬರುವ ಸಾಧ್ಯತೆ ಇದೆ. ಈ ಕಂಪನಿಗಳು ಅನಗತ್ಯ ಔಷಧಿಗಳನ್ನು ತಯಾರಿಸುತ್ತ ಬಂದು ದಾಖಲೆ ಸಾಧಿಸಿವೆ. ಮುಂದೆಯೂ ಅದೇ ಮುಂದುವರೆಯುವ ಸಾಧ್ಯತೆ ಇದೆ. ಪೈಪೋಟಿಯಿಂದಾಗಿ ಭಾರತೀಯ ಕಂಪನಿಗಳು ಮುಚ್ಚಲ್ಪಡುವ ಸಾಧ್ಯತೆ ಇದೆ. ಭಾರತೀಯ ಸಾರ್ವಜನಿಕ ಕ್ಷೇತ್ರದ ಐ.ಡಿ.ಪಿ.ಎಲ್. ಒಮ್ಮೆ ಭಾರತವನ್ನು ಆಂಟಿಬಯಾಟಿಕ್ ತಯಾರಿಕೆಯಲ್ಲಿ ಸ್ವಾವಲಂಬೀ ಮಾಡಿದ ಕಂಪನಿ, ಇಂದು ಮುಚ್ಚುವ ಸ್ಥಿತಿಯಲ್ಲಿದೆ.

ವೈದ್ಯಕೀಯ ವೃತ್ತಿ

ಇಂದು ವೈದ್ಯಕೀಯ ಸೌಲಭ್ಯ ವ್ಯಾಪಕವಾಗಿ ಬೆಳೆದಿದೆ. ಭಾರತದಲ್ಲಿರುವ ಸುಮಾರು 8 ಲಕ್ಷ ವೈದ್ಯರಲ್ಲಿ ಅರ್ಧದಷ್ಟು ಮಾತ್ರ ಆಧುನಿಕ ಪದ್ಧತಿ ವೈದ್ಯರಿದ್ದಾರೆ. ಉಳಿದವರಲ್ಲಿ ಅರ್ಧದಷ್ಟು ವೈದ್ಯರಿಗೆ ತರಬೇತಿ ಇಲ್ಲದಿದ್ದರೂ, ಆಧುನಿಕ ಔಷದಿಗಳನ್ನು ಬಳಸುತ್ತಿದ್ದಾರೆ. 1994 ರಲ್ಲಿ ಸುಪ್ರೀಂ ಕೋರ್ಟ್ ಇದನ್ನು ಖಂಡಿಸಿದರೂ, ಈ ಪದ್ಧತಿ ಮುಂದುವರಿದಿದೆ. ಆದ್ದರಿಂದ ಔಷಧಿಗಳು ದುರುಪಯೋಗವಾಗುತ್ತಿದೆ. ಈ ವಿಷಯ ಕೋರ್ಟ್ ತೀರ್ಮಾನದಿಂದ ಬದಲಾಗದು. ಇಂದು ವೈದ್ಯರು ಔಷಧಿ ಬರೆದುಕೊಡುವ ಯಂತ್ರಗಳಾಗಿದ್ದಾರೆ. ವ್ಯಕ್ತಿಯ ಆರ್ಥಿಕ ಹಾಗೂ ಸಾಮಾಜಿಕ ಹಿನ್ನೆಲೆಯನ್ನು ಗಮನಿಸದೇ, ಕೇವಲ ಔಷಧಿ ಚಿಕಿತ್ಸೆಗೆ ಒತ್ತು ಕೊಡುತ್ತಿದ್ದಾರೆ. ಅನಗತ್ಯ ಚಿಕಿತ್ಸೆಗಳು ಹೆಚ್ಚುತ್ತಿವೆ. ಅನಗತ್ಯ ಔಷಧಿಗಳು ಹೇರಳವಾಗಿ ದೊರಕುತ್ತಿರುವಾಗ ಅಪಾಯ ಇನ್ನೂ ಹೆಚ್ಚಾಗುತ್ತದೆ. ಸಮಂಜಸ ಔಷಧಿ ಉಪಯೋಗದ ಸೂತ್ರಗಳನ್ನು ಇಂದಿಗೂ ವೈದ್ಯಕೀಯ ಕಾಲೇಜುಗಳಲ್ಲಿ ಹೇಳಿಕೊಡಲಾಗುತ್ತಿಲ್ಲ. ವೈದ್ಯಕೀಯ ತರಬೇತಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಲು ಸರಕಾರ ಅಗತ್ಯ ಕ್ರಮ ತೆಗೆದುಕೊಂಡಿಲ್ಲ. ಅದರ ಬದಲು ಹೊಸ ಹೊಸ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಪರವಾನಗಿ ಕೊಡಲು ಮಗ್ನವಾಗಿದೆ.

ಔಷಧಿ ನಿಯಂತ್ರಣ

ಔಷಧಿ ನೊಂದಣಿ, ಔಷದಿ ಹೆಸರು ಇಡಲು, ತಯಾರಿಸಲು, ಮಾರಲು ಅನುಮತಿ, ಗುಣಮಟ್ಟ ನಿರ್ಧಾರ ಹಾಗೂ ಔಷಧಿ ಮಾರುಕಟ್ಟೆಯಲ್ಲಿದ್ದಾಗ ಅದರ ಗುಣದ ಬಗ್ಗೆ ಜಾಗರೂಕತೆಯ ಜವಾಬ್ದಾರಿ, ಔಷಧಿ ನಿಯಂತ್ರಣಕ್ಕಿದೆ. ಔಷದಿ ನಿಯಂತ್ರಣ ಕಾನೂನುಗಳು ಔಷಧಿ ನಿಯಂತ್ರಣ ಅಧಿಕಾರಿಗಳಿಗೆ ಸಹಾಯಕವಾಗಿವೆ. ಆದರೂ ಇಂದು 1. ಹೆಚ್ಚಿನ ಸಂಖ್ಯೆಯಲ್ಲಿ ಅನಗತ್ಯ ಔಷಧಿಗಳು ಮಾರಾಟವಾಗುತ್ತಿವೆ 2. ಔಷಧಿ ಬೆಲೆಗಳು ಏರುತ್ತಿವೆ 3. ನಿಷೇಧಿಸಬಹುದಾದ ಔಷಧಿಗಳು ಮಾರುಕಟ್ಟೆಯಲ್ಲಿವೆ. 4. ಜೆ.ಜೆ.ಹಾಸ್ಪಿಟಲ್ ದುರಂತ, ಪೆರಿಸಂದ್ರಾ ಔಷಧಿ ದುರಂತ ಔಷದಿ ನಿಯಂತ್ರಣದ ಅಸಮರ್ಥತೆಯನ್ನು ಎತ್ತಿತೋರಿಸುತ್ತದೆ. ಲೈಂಟಿನ್ ವರದಿ ಔಷಧಿ ನಿಯಂತ್ರಣದ ಬೇಜವಾಬ್ದಾರಿಯನ್ನು ಕಟುವಾಗಿ ಟೀಕಿಸಿದೆ.

ಅನಗತ್ಯ ಔಷಧಿಗುಣವಿಲ್ಲದ, ಔಷಧಿಗಳನ್ನು ನೊಂದಣಿ ಮಾಡುವಾಗ ನಿರಾಕರಿಸಬಹುದಾಗಿದೆ. ಅಪಾಯಕರ ಗರ್ಭನಿರೋಧಕ (ಡಿಪೋಪ್ರೋವೆರಾ) ವನ್ನು, ಸುರಕ್ಷತೆಯ ವರದಿಗಳು ಇಲ್ಲದ್ದರಿಂದ ನೊಂದಣಿ ಮಾಡುವಾಗ ನಿರಾಕರಿಸಬಹುದಾಗಿದ್ದಿತು. ಇಷ್ಟೊಂದು ಲೋಪದೋಷಗಳನ್ನಿಟ್ಟುಕೊಂಡು ನಿಷೇಧಿಸುವ ಔಷಧಿಗಳಾವೂ ಇಲ್ಲ ಎಂದು ಔಷಧಿ ನಿಯಂತ್ರಣ ಹೇಳಿಕೊಡುತ್ತದೆ.

ಶ್ರೀ ಸಾಮಾನ್ಯರು

ವೈದ್ಯರ ಹತ್ತಿರ ಹೋದಾಗ ಬೇಗ ಗುಣಹೊಂದಬೇಕೆಂಬುದು ರೋಗಿಯ ಹಂಬಲ, ಇದು ಸ್ವಾಭಾವಿಕ. ಆದರೆ ಪ್ರತಿಯೊಂದು ರೋಗಕ್ಕೂ ಔಷಧಿ ಇದೆ ಎಂದು ನಂಬಿರುವ ಜನರ ತಿಳುವಳಿಕೆ ಮಟ್ಟ ಏರಿಸಲು ವೈದ್ಯ, ಸರಕಾರ ಪ್ರಯತ್ನ ಮಾಡಬೇಕಾಗಿದೆ. ಸುಲಭವಾಗಿ ಔಷಧಿಗಳು ದೊರಕುವುದರಿಂದ ಹೆಚ್ಚು ಜನರು ಸ್ವಚಿಕಿತ್ಸೆ ಮಾಡಿಕೊಳ್ಳುತ್ತಾರೆ. ಅನೇಕ ಬಾರಿ ಇದರಿಂದ ಅಪಾಯವಾಗಬಹುದಾಗಿದೆ. ಇದನ್ನು ತಡೆಯಲು ಔಷಧಿ ನಿಯಂತ್ರಣ ಜವಾಬ್ದಾರಿ ತೆಗೆದುಕೊಳ್ಳಲಾಗಿದೆ. ಜನಸಾಮಾನ್ಯರಲ್ಲಿ ಔಷಧಿಗಳ ಬಗ್ಗೆ ಕೆಲವು ತಪ್ಪು ತಿಳುವಳಿಕೆಗಳಿವೆ. ಉದಾಹರಣೆಗೆ ಹೆಚ್ಚು ಔಷಧಿ ಬೇಗ ಗುಣ: ಹೆಚ್ಚು ದುಬಾರಿ ಔಷಧಿ-ಬೇಗ ಗುಣ: ಇಂಜೆಕ್ಷನ್-ಬೇಗ ಗುಣಪಡಿಸುತ್ತದೆ. ಈ ತಪ್ಪು ನಂಬಿಕೆಗಳನ್ನು ಆರೋಗ್ಯ ಶಿಕ್ಷಣ ಸರಿಪಡಿಸಬಹುದಾಗಿದೆ.

ಸರಕಾರ ಅಗತ್ಯ ಔಷಧಿ ಪಟ್ಟಿ ಜಾರಿಗೊಳಿಸಿ, ಉದ್ಯಮದ ಮೇಲೆ ಅಗತ್ಯ ಔಷಧಿಗಳನ್ನು ತಯಾರಿಸಲು ಒತ್ತಡ ಹೇರಿ, ಅನಗತ್ಯ ಔಷಧಿಗಳನ್ನು ನಿಷೇಧಿಸಿ ಔಷಧಿ ನಿಯಂತ್ರಣವನ್ನು ಹೆಚ್ಚು ಜವಾಬ್ದಾರಿಯುತವಾಗುವಂತೆ ಮಾಡಿ, ಅಗತ್ಯ ಔಷಧಿಗಳ ದೊರಕುವಿಕೆ ಹಾಗೂ ಬೆಲೆಗಳ ಮೇಲೆ ಗಮನವಿಟ್ಟು ವೈದ್ಯರಿಗೆ ಹಾಗೂ ಜನಸಾಮಾನ್ಯರಿಗೆ ಸಮಂಜಸ ಔಷಧಿ ಉಪಯೋಗದ ಮಾಹಿತಿ ತಿಳಿಸಿದಲ್ಲಿ ನಮ್ಮ ಔಷದಿ ಸ್ಥಿತಿಗತಿ ಸುಧಾರಿಸಲು ಸಾಧ್ಯ.

• ಭಾರತದ ಔಷಧಿ ಪರಿಸ್ಥಿತಿ ಸಂಕೀರ್ಣವಾಗಿದೆ, ಸರಕಾರ ಎಲ್ಲವನ್ನೂ ಸರಿಪಡಿಸುತ್ತದೆ ಎಂದು ಸುಮ್ಮನೆ ಕುಳಿತರೆ ಆಗುವುದಿಲ್ಲ. ಬಾಂಗ್ಲಾದೇಶದಲ್ಲಿ ಶ್ರೀಲಂಕಾದಲ್ಲಿ ಇದೇ ತರಹದ ಪರಿಸ್ಥಿತಿಯನ್ನು ಬದಲಾಯಿಸಿತು. ನಮ್ಮ ದೇಶದಲ್ಲೂ ಇತ್ತೀಚಿಗೆ ದೆಹಲಿ, ಪಂಜಾಬ್, ತಮಿಳುನಾಡಿನಲ್ಲಿ ಕೆಲವು ಬದಲಾವಣೆಗಳಾಗುತ್ತಿವೆ. ಪ್ರಯತ್ನ ಜನರದ್ದಾಗಬೇಕು. ○



ಜಾಗತೀಕರಣ

ಸತ್ತಿಬೆಳೆಯುವ ರೈತ ನೇಣಿಗಾಹುತಿಯಾದ
ಕೈಮಗ್ಗ ನೇಕಾರ ವಿಷಕುಡಿದು ಹೋದ
ಬಾಸುಮತಿ ಬೆಳೆಗಾರ ಸತ್ತಕರೆ ಹಾರಿ
ಜಾಗತೀಕರಣವಿದು ಭಾರತದ ಗೋರಿ

\- ವಿಡಂಬಾರಿ

ಸರ್ಕಾರಿ ಆಸ್ಪತ್ರೆಗಳಲ್ಲಿ ಹಣದ ದಾಹ

ಇಂದು ಸರಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಹಣಕೊಡಬೇಕಾಗಿದೆ. ಬಾಳಪ್ಪ ಕಾಲಿನ ಮೂಳೆ ಮುರಿದಾಗ ಆಸ್ಪತ್ರೆ ಚಿಕಿತ್ಸೆ ಪಡೆಯಲು 40000 ರೂ ಖರ್ಚುಮಾಡ ಬೇಕಾಯಿತು. ಅವನು ಕೃಷಿ ಕೂಲಿಕಾರ ಹಾಗೂ ಅವನಿಗೆ ಆಪರೇಷನ್ ಮಾಡಿಸಲು ಅವನ ಸಂಗಾತಿಗಳು ಹಣಕೂಡಿಸಿ ಸಹಾಯ ಮಾಡಿದ್ದಾರೆ. ಆದರೆ ಅವನು ಖರ್ಚುಮಾಡಿದ ಹಣ, ಔಷಧಿ ಹಾಗೂ ವೈದ್ಯರಿಗೆ ಕೊಟ್ಟ ಲಂಚಕ್ಕಾಗಿ ಲಂಚ ಕೊಡದಿದ್ದರೆ ಆಪರೇಷನ್ ಆಗುವುದೆಲ್ಲಿ?

ಬಾಳಪ್ಪ ಆಪರೇಷನ್ ಮಾಡಿಸಿದ ವೇಳೆಯಲ್ಲಿ ಆಸ್ಪತ್ರೆಗೆ ಉಪಯೋಗ ಶುಲ್ಕ ಕೊಡಬೇಕಾಗಿರಲಿಲ್ಲ. ಇಂದು ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಸರಕಾರ ಆಸ್ಪತ್ರೆ ಸೇವೆಗಳಿಗೆ ಉಪಯೋಗ ಶುಲ್ಕ ಕೊಡಬೇಕಾಗುತ್ತದೆ ಸರ್ಕಾರ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿರುವ ವಿವಿಧ ರೀತಿಯ ಚಿಕಿತ್ಸೆಗಳಿಗೆ ಸರ್ಕಾರವು 1988 ರಲ್ಲಿ ದರಗಳನ್ನು ನಿಗದಿ ಗೊಳಿಸಿರುತ್ತದೆ. ಆದರೆ ಇಂದು ಅತ್ಯಾಧುನಿಕ ಉಪಕರಣಗಳ ವೆಚ್ಚವು ದುಬಾರಿಯಾಗಿರುವುದರಿಂದ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಪರಿಷ್ಕರಿಸುವಂತೆ ವೈದ್ಯಕಿಯ ಶಿಕ್ಷಣದ ನಿರ್ದೇಶಕರು 3.5.2000 ರಂದು ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ. ಈ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿದ ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಭೋಧನಾ ಆಸ್ಪತ್ರೆಗಳಲ್ಲಿ ವಾರ್ಡ್ ಚಾರ್ಜ್‌ಗಳನ್ನು 15ನೇ ಜುಲೈ 2000 ರಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಸರ್ಕಾರದ ಅಧೀನ ಕಾರ್ಯದರ್ಶಿಗಳು ಎಲ್ಲಾ ಸರಕಾರಿ ಆಸ್ಪತ್ರೆಗಳಿಗೆ ಆದೇಶ ನೀಡಿದ್ದಾರೆ (ಸರಕಾರದ ಆದೇಶ ಸಂಖ್ಯೆ ಆ.ಕು.ಕ 301 ಎಂ.ಎಸ್.ಎಸ್. 38 (ಎಫ್) ಬೆಂಗಳೂರು ದಿನಾಂಕ 30 ನೇ ಜೂನ್ 2000)



ಈ ಅಧಿನಿಯಮದ ಪ್ರಕಾರ ಆಸ್ಪತ್ರೆ ಹೊರ ರೋಗಿ ಚೀಟಿ ಪಡೆಯಲು ಐದು ರೂಪಾಯಿಯಿಂದ ಇತರೇ ಎಲ್ಲಾ ಸೌಲಭ್ಯಗಳಿಗೂ ಇಂದು ಜನರು ಹಣ ತೆತ್ತಬೇಕಾಗಿದೆ. ಇಲ್ಲಿ ಬಡವ ಶ್ರೀಮಂತ ಎಂಬ ಯಾವ ಬೇಧವಿಲ್ಲದೆ ಸರ್ಕಾರೀ ಸೌಲಭ್ಯಗಳನ್ನು ಪಡೆಯಲು ಎಲ್ಲರೂ ಹಣತೆತ್ತಬೇಕಾಗಿದೆ.

ಜನಾರೋಗ್ಯ ಸುಧಾರಣೆ ಸರ್ಕಾರದ ಜವಾಬ್ದಾರಿ 2000 ದ ವರೆಗೆ ಎಲ್ಲರಿಗೂ ಆರೋಗ್ಯ ಎಂಬ ಘೋಷಣೆಗೆ ಭಾರತ ಹಸ್ತಾಕ್ಷರ ಮಾಡಿತು. ಜನಾರೋಗ್ಯ ಸುಧಾರಿಸಲು ಒಪ್ಪಿಕೊಂಡಿತು. 1983 ರಲ್ಲಿ ರಾಷ್ಟ್ರೀಯ ಆರೋಗ್ಯ ನೀತಿ ಘೋಷಿಸಲಾಯಿತು.

ಶಿಕ್ಷಣ ಉದ್ಯೋಗದೊಂದಿಗೆ ಆರೋಗ್ಯ ಸೌಲಭ್ಯವನ್ನು ದೊರಕಿಸಿ ಕೊಡುವುದು ಯಾವುದೇ ಸರ್ಕಾರದ ಜವಾಬ್ದಾರಿ.

ಇಂದು ಜನಾರೋಗ್ಯ ಸುಧಾರಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಸಜ್ಜುಗೊಳಿಸಬೇಕಾಗುತ್ತದೆ. ಇಂದು ಬಡತನ, ಅನಕ್ಷರತೆ ವ್ಯಾಪಕವಾಗಿರುವುದರಿಂದ ಸರಕಾರೀ ಆಸ್ಪತ್ರೆಗಳ ಸೌಲಭ್ಯ ಅತ್ಯಗತ್ಯವಾಗುತ್ತದೆ. ಇಂದು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯಲ್ಲಿ ಲೋಪದೋಷಗಳಿದ್ದು ಜನರು, ಸರಕಾರಿ ಸೌಲಭ್ಯಗಳನ್ನು ಉಪಯೋಗಿಸಲು ಹಿಂಜರಿಯುತ್ತಿದ್ದು ಖಾಸಗೀ ಕೇಂದ್ರಗಳಿಗೆ ಹೋಗುತ್ತಿದ್ದಾರೆ. ಖಾಸಗಿ ಕ್ಲಿನಿಕ್ ಹಾಗೂ ನರ್ಸಿಂಗ್ ಹೋಂಗಳಲ್ಲಿ ಚಿಕಿತ್ಸೆ ಅವೈಜ್ಞಾನಿಕ, ಹಾಗೂ ಅನಗತ್ಯವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸರಕಾರ ಆರೋಗ್ಯ ವ್ಯವಸ್ಥೆಯನ್ನು ಸ್ಥಾಪಿಸಿ ಜನರು ಉಪಯೋಗಿಸುವಂತೆ ಪ್ರೋತ್ಸಾಹಿಸಬೇಕಾಗಿದೆ.

ಆದರೆ ಸರಕಾರ ಈ ಜವಾಬ್ದಾರಿ ವಹಿಸುವುದರ ಬದಲು ಆರೋಗ್ಯ ವ್ಯವಸ್ಥೆ ಜನರಿಂದ ದೂರವಾಗುವಂತೆ ಮಾಡುತ್ತಿದೆ. ಆಸ್ಪತ್ರೆ ಸೌಲಭ್ಯವನ್ನು ಉಪಯೋಗಿಸಲು " ಉಪಯೋಗ ಶುಲ್ಕ ವಿಧಿಸುವುದು ಈ ನಿಟ್ಟಿನಲ್ಲಿ ಒಂದು ಮುಖ್ಯ ನಿರ್ಧಾರವಾಗಿದೆ. ಜನರಿಗೆ ಆರೋಗ್ಯ ವ್ಯವಸ್ಥೆ ದೊರಕುವಂತೆ ಮಾಡಬೇಕೆಂಬ ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಭಾರತದ ಆರೋಗ್ಯ ನೀತಿಗೆ ಇದು ತದ್ವಿರುದ್ಧವಾಗಿದೆ.

ಸರಕಾರದ ಈ ತೀರ್ಮಾನಕ್ಕೆ ಕಾರಣವೇನು?

ನಮ್ಮ ದೇಶದಲ್ಲಿ ಆರ್ಥಿಕ ನೀತಿಗಳನ್ನು ಬದಲಾಯಿಸಲಾಗಿದೆ. ಉದಾರೀಕರಣ ಖಾಸಗೀಕರಣ ನೀತಿಯನ್ನು ಜಾರಿಗೊಳಿಸಲಾಗಿದೆ. ಈ ಬದಲಾವಣೆ ವಿಶ್ವಬ್ಯಾಂಕ್ ಹಾಗೂ ಐ.ಎಮ್.ಎಫ್ ನಿಂದ ಆದೇಶಿತಗೊಂಡಿವೆ ಆರೋಗ್ಯ ಹಾಗೂ ಶಿಕ್ಷಣಗಳಿಗೆ ಸರಕಾರ ಮಾಡುತ್ತಿರುವ ಖರ್ಚನ್ನು ಕಡಿಮೆಮಾಡಲು ಆದೇಶಿಸಿದೆ ಇದರಿಂದ ಪ್ರಾಥಮಿಕ ಆರೋಗ್ಯ ಪಾಲನೆ; ನೈರ್ಮಲ್ಯ ಸಾಧನೆಗೆ ಆತಂಕ ಉಂಟಾಗುತ್ತಿದೆ ಇದೇ ನಿಯಮದಲ್ಲಿ ವಿಶ್ವವ್ಯಾಪಾರ ಸಂಘಟನೆಯ ನಿಯಮಗಳನ್ನು ಪಾಲಿಸಲು ಸರಕಾರ ಒಪ್ಪಿಕೊಂಡು ಹಸ್ತಾಕ್ಷರ ಹಾಕಿದೆ. ಇದರ ಪರಿಣಾಮವಾಗಿ ಔಷಧಿ ಬೆಲೆಗಳು ಹೆಚ್ಚಾಗುವುದಲ್ಲದೆ ಅಗತ್ಯ ಔಷಧಿಗಳು ಲಭ್ಯವಾಗದಂತಾಗುತ್ತದೆ. ಈ ತರಹದ ಮೂಲಭೂತ ಸೌಲಭ್ಯವಾದ ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆಗಳನ್ನು ಮಾಡಿ, ಆರೋಗ್ಯ ಕ್ಷೇತ್ರಕ್ಕೆ ಆಪತ್ತು ಉಂಟುಮಾಡಲಾಗಿದೆ. ಇದೇ ಸಂದರ್ಭದಲ್ಲಿ ಆರೋಗ್ಯ ಸೌಲಭ್ಯ ಉಪಯೋಗಿಸಲು ಉಪಯೋಗ ಶುಲ್ಕವನ್ನು ಹೇರಲಾಗಿದೆ. ಉಪಯೋಗ ಶುಲ್ಕ ಯಾವ ಆಧಾರದ ಮೇಲೆ ಉಪಯೋಗವಾಗುತ್ತದೆ ಎಂಬುದು ಪ್ರಶ್ನಾರ್ಹ.

ಜನಸಾಮಾನ್ಯರಿಗೆ ಈ ಉಪಯೋಗ ಶುಲ್ಕದಿಂದ ಆತಂಕ ಉಂಟಾಗಲು ಸಾಧ್ಯವಿದೆ. ಇಂದು ಬೋಧನಾ ಆಸ್ಪತ್ರೆಗಳಲ್ಲಿ ಉಪಯೋಗ ಶುಲ್ಕವನ್ನು ವಿಧಿಸಿದ ಸರಕಾರ ಕ್ರಮೇಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಪಯೋಗ ಶುಲ್ಕವನ್ನು ವಿಧಿಸುವ ಸಾಧ್ಯತೆ ಇದೆ. ಉಪಯೋಗ ಶುಲ್ಕ ವಿಧಿಸುವ ಅಗತ್ಯತೆ ಇದೆಯೇ? ಇದರಿಂದ ಜನಾರೋಗ್ಯ ಸುಧಾರಿಸಲು ಸಾಧ್ಯವೆ? ಇಂದು ಈ ಪ್ರಶ್ನೆ ಅಪ್ರಸ್ತುತ. ಜನಾರೋಗ್ಯ ವ್ಯವಸ್ಥೆ ಸುಧಾರಿಸಿ ಜನರ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ರಕ್ಷಣೆ ಮಾಡುವುದು ಪ್ರಜಾಪ್ರಭುತ್ವ ಸರಕಾರದ ಜವಾಬ್ದಾರಿ.

ಉಪಯೋಗ ಶುಲ್ಕದಿಂದ ಜನರು ಚಿಕಿತ್ಸೆಯಿಂದ ದೂರಸರಿಯುವ ಸಾಧ್ಯತೆ ಇದೆ.

ಏಡ್ಸ್ ಮಾರಿಯ ಮೇಲೆ ಕೊಬ್ಬುತ್ತಿರುವ ಬಹುರಾಷ್ಟ್ರೀಯ ಔಷಧಿ ಕಂಪನಿಗಳು

ಇತ್ತೀಚೆಗೆ ದಕ್ಷಿಣ ಆಫ್ರಿಕಾದಲ್ಲಿ ಏಡ್ಸ್ ಬಗ್ಗೆ ಅಂತರ್ರಾಷ್ಟ್ರೀಯ ಸಮ್ಮೇಳನವಾಯಿತು. ಹಲವು ಪ್ರಮುಖ ಅಭಿವೃದ್ಧಿಶೀಲ ದೇಶಗಳಲ್ಲಿ (ಭಾರತ ಸೇರಿದಂತೆ) ಏಡ್ಸ್ ಒಂದು ಮಹಾಮಾರಿಯಾಗಿದ್ದು, ಈಗ ಇದಕ್ಕೆ ಲಭ್ಯವಿರುವ ಔಷಧಿಗಳನ್ನು, ಆ ರೋಗದಿಂದ ನರಳುತ್ತಿರುವವರಿಗೆ ಮುಟ್ಟಿಸಲು ಆಗದಿರುವುದು, ಅತಿ ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಮುಖ್ಯ ತೊಡಕು WTO ಮತ್ತು ಅದು ಎಲ್ಲರ ಮೇಲೂ ಹೊರಿಸುತ್ತಿರುವ ಪೇಟೆಂಟ್ ಕಾನೂನು ವ್ಯವಸ್ಥೆ ಎಂದರೆ ಎಲ್ಲರಿಗೂ ಆಶ್ಚರ್ಯವಾಗಬಹುದು. ನೀವು ಏಡ್ಸ್ ಬಗ್ಗೆ, ಅದರ ನಿವಾರಣೆ ಬಗ್ಗೆ ಹೊಟ್ಟೆ ತುಂಬಿದ ಸಮಾಜ ಸೇವಕರಿಂದ ಭಾರಿ ಭಾಷಣಗಳನ್ನು ಕೇಳಿರಬಹುದು. ಆದರೆ ಈ ಬಗ್ಗೆ ಯಾರೂ ಏನು ಹೇಳಿಲ್ಲಾ ಎಂದಿರಾ!


ಏಡ್ಸ್ ಔಷಧಿ ವೆಚ್ಚ ತಲಾ ವಾರ್ಷಿಕ ಐದುವರೆಲಕ್ಷ

ಜಾಗತೀಕರಣವೂ, ಪೇಟೆಂಟ್ ವ್ಯವಸ್ಥೆ ಏಡ್ಸ್‌ರೋಗಿಗಳ ಮೇಲೆ ಬೀರುತ್ತಿರುವ ದುಷ್ಪರಿಣಾಮ ಸುದ್ದಿಯಾಗುವುದಿಲ್ಲ. ಇದು ದೈತ್ಯ ಔಷಧಿ ಕಂಪನಿಗಳು(ಮೆರ್ಸ್ಕ್, ಫೆಜರ್, ಗ್ಲಾಕ್ಸೋ-ವೆಲ್‌ಕಮ್, ಸ್ಮಿತ್-ಕ್ಲಿನ್-ಬಿಜಮ್) ಅದು ಸುದ್ದಿಯಾಗದಂತೆ ನೋಡಿಕೊಳ್ಳುತ್ತವೆ. ಏಡ್ಸ್‌ಗೆ ಈಗಾಗಲೇ ಸಾಕಷ್ಟು ಪರಿಣಾಮಕಾರಿಯಾದ ಔಷಧಿ ಇದೆ. ಅದರ ಹೆಸರು ಹಾರ್ಟ್(HAART-Highly Active Antirtrorial Treatment) 1992 ರಿಂದ 1998 ರವರೆಗೆ ಸ್ವಿಡ್ಜರ್‌ಲ್ಯಾಂಡಿನಲ್ಲಿ ಏಡ್ಸ್‌ನಿಂದ ಆದ ಸಾವುಗಳ ಸಂಖ್ಯೆ ಶೇಕಡ 84 ರಷ್ಟು ಕಡಿಮೆ ಆಗಿದೆ. (ಇದು 1930 ರಿಂದ 1965 ರವರೆಗೆ ನ್ಯೂಮೊನಿಯಾದಿಂದ ಆಗುತ್ತಿದ್ದ ಸಾವುಗಳಲ್ಲಿ ಶೇಕಡ 72 ರಷ್ಟು ಕಡಿಮೆಯಾಗಿದ್ದಕ್ಕಿಂತಲೂ ಹೆಚ್ಚು ಪರಿಣಾಮಕಾರಿ ಹಾಗೂ ಇನ್ನೂ ವೇಗವಾಗಿ ಆಗಿದೆ ಎಂದು ಗಮನಿಸಬಹುದು), ಆದರೆ ಜಗತ್ತಿನ ಒಟ್ಟು ಏಡ್ಸ್ ರೋಗಿಗಳಲ್ಲಿ ಶೇಕಡ 5 ಜನಕ್ಕೆ ಸಹ, 'ಹಾರ್ಟ್' ಔಷದಿ ಲಭ್ಯ ಇಲ್ಲ. ಏಕೆಂದರೆ ಒಬ್ಬ ರೋಗಿಯ ಉಪಚಾರಕ್ಕೆ ಸುಮಾರು 12 ಸಾವಿರ ಡಾಲರು (ಐದುವರೆ ಲಕ್ಷ ರೂ) ವೆಚ್ಚ ತಗಲುತ್ತದೆ. ಇದು ಶೇಕಡಾ 95 ಏಡ್ಸ್‌ರೋಗಿಗಳ ನಿಲುಕಿಗೆ ಸಿಕ್ಕದ್ದು.

ಏಡ್ಸ್ ನಿವಾರಣೆಗೆ ರಾಷ್ಟ್ರೀಯ ಉತ್ಪನ್ನದ 265 ಪಟ್ಟು ಅಗತ್ಯ

ಆಫ್ರಿಕಾದ ಕೆಲವು ದೇಶಗಳಲ್ಲಿ ಏಡ್ಸ್ ರೋಗದ ಸಮಸ್ಯೆ ಬಹಳ ತೀವ್ರವಾಗಿದೆ. ಉದಾಹರಣೆಗೆ ಜಿಂಬಾಬ್ವೆಯಲ್ಲಿ ಈಗಿನ ಔಷಧಿ ಬೆಲೆಯಲ್ಲಿ ಎಲ್ಲಾ ಏಡ್ಸ್ ರೋಗಿಗಳನ್ನು ಗುಣಮಾಡಬೇಕೆಂದರೆ ಆ ದೇಶದ ಒಟ್ಟು ಉತ್ಪನ್ನದ 265 ಪಟ್ಟು ಅದರ ಮೇಲೆ ಖರ್ಚು ಮಾಡಬೇಕು. ನಮ್ಮ ದೇಶದಲ್ಲೂ, ನಮ್ಮ ಉತ್ಪನ್ನದ ಶೇಕಡಾ 11.5 ರಷ್ಟು ಏಡ್ಸ್ ಉಪಚಾರದ ಮೇಲೆ ಖರ್ಚು ಮಾಡಬೇಕು -ಏಡ್ಸ್ ರೋಗಿಗಳಿಗೆಲ್ಲಾ ಉಪಚಾರ ಒದಗಿಸಬೇಕಾದರೆ ಇದು ನಮ್ಮ ದೇಶದಲ್ಲಿ ಆರೋಗ್ಯ ಸೇವೆಗೆ ಈಗ ಖರ್ಚಾಗುತ್ತಿರುವುದರ ಹತ್ತು ಪಟ್ಟು.

ಏಡ್ಸ್ ಔಷಧಿಗಳು ದುಬಾರಿಯಾಗಿರುವುದು,



ನಿಜವಾಗಿಯೂ ಅದನ್ನು ಅಭಿವೃದ್ಧಿ ಪಡಿಸಲು ಬೇಕಾದ ಭಾರಿ ಖರ್ಚಿನಿಂದಲೇ? ಏಡ್ಸ್ ಔಷಧಿ ಅಭಿವೃದ್ಧಿಪಡಿಸಲು 2.5 ಕೋಟಿ ಡಾಲರುಗಳು ಖರ್ಚಾಗಿದೆ. ಆದರೆ ಈ ಔಷಧಿಗಳ ಒಟ್ಟು ವಹಿವಾಟು ಈಗ ನೂರು ಕೋಟಿ ಡಾಲರು ಎಂದು ನೆನಪಿಸಿಕೊಂಡರೆ ಈ ದುಬಾರಿ ಬೆಲೆ ಸಮರ್ಥನೀಯವಲ್ಲ ಎಂದು ಗೊತ್ತಾಗುತ್ತದೆ. ಅದು ಮಾತ್ರವಲ್ಲ ಏಡ್ಸ್ ಔಷಧಿ ಅಭಿವೃದ್ಧಿಪಡಿಸಿದ್ದು ಸಂಪೂರ್ಣವಾಗಿ ಈ ಕಂಪನಿಗಳೇ ಅಲ್ಲ. ನಿಜವಾಗಿಯೂ ನೋಡಿದರೆ ಏಡ್ಸ್ ಔಷಧಿ ಸಾಧ್ಯಮಾಡಿದ ಸಂಶೋಧನೆಯ ಬಹುಪಾಲು ಯೂನಿವರ್ಸಿಟಿಗಳಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ ಆಗಿದೆ. ಏಡ್ಸ್ ಔಷಧಿಗಳನ್ನು ದುಬಾರಿ ಮಾಡಿರುವುದು ಯಾರು ಎನ್ನುವುದಕ್ಕೆ ಒಂದೇ ಉದಾಹರಣೆ ಸಾಕು. ಪೆಂಟಾಮಿಡಿನ್ ನಿದ್ರಾರೋಗದ ಔಷಧ. ಏಡ್ಸ್ ಸಂಬಂಧಿ ಒಂದು ರೋಗಕ್ಕೆ ಪೆಂಟಾಮಿಡಿನ್ ಒಳ್ಳೆ ಔಷಧ ಎಂದ ಕಂಡುಹಿಡಿದ ಕೂಡಲೇ ಅದರ ಬೆಲೆ ಐದುಪಟ್ಟು ಆಯಿತು.


ಆದ್ದರಿಂದ ಜಾಗತಿಕವಾಗಿ ನಿವಾರಣೆ ಮಾಡಲು, ಇಂದು ಔಷಧಿಗಳನ್ನು ಎಲ್ಲಾ ಏಡ್ಸ್ ರೋಗಿಗಳಿಗೆ ಒದಗಿಸುವುದು ಮುಖ್ಯವಾಗಿದೆ.

ಇತ್ತೀಚೆಗೆ ಸಭೆ ಸೇರಿದ ದಕ್ಷಿಣ ಆಫ್ರಿಕಾದ ದೇಶಗಳ ಆರೋಗ್ಯ ಮಂತ್ರಿಗಳು ಬಹುರಾಷ್ಟ್ರೀಯ ಔಷಧಿ ಕಂಪನಿಗಳ ಮೇಲೆ ನಿಯಂತ್ರಣ ಸಾಧಿಸಿದ್ದಲ್ಲದೆ, ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಸ್ಥಳೀಯವಾಗಿ ಈ ಔಷಧಿಯನ್ನು ಉತ್ಪಾದಿಸುವಂತೆ ಕಡ್ಡಾಯ ಲೈಸೆನ್ಸ್ ಮಾಡುವುದು, ಜಾಗತಿಕ ಮಾರುಕಟ್ಟೆಯಲ್ಲಿ ಔಷಧಿ ಖರೀದಿಸುವುದು - ಇತ್ಯಾದಿ ಕ್ರಮಗಳನ್ನು ಬಹುರಾಷ್ಟ್ರೀಯ ಔಷಧಿ ಕಂಪನಿಗಳು ಬಲವಾಗಿ ವಿರೋಧಿಸುತ್ತಿವೆ. ಇದಕ್ಕೆ ಆ ದೇಶಗಳ ಕಾನೂನಿನಲ್ಲಿ ಅವಕಾಶ ಇದ್ದಾಗ್ಯೂ. WTO ಈಕಂಪನಿಗಳ ಬೆಂಬಲಕ್ಕೆ ಟೊಂಕಕಟ್ಟಿ ನಿಂತಿದೆ. ಏಡ್ಸ್ ಕಾರ್ಯಕ್ರಮಕ್ಕೆ ಮೀಸಲಾದ ವಿಶ್ವಸಂಸ್ಥೆಯ ಅಂಗ ಸಂಘಟನೆ UNAIDS, WHO (ವಿಶ್ವ ಆರೋಗ್ಯ ಸಂಸ್ಥೆ) ಅಭಿವೃದ್ಧಿಶೀಲದೇಶಗಳು, ಬಡವರ ಹಿತಾಸಕ್ತಿ ಕಾಪಾಡುವ ತರಾತುರಿಯಲ್ಲಿವೆ. ಔಷಧಿ ಕಂಪನಿಗಳ ಮೇಲೆ ಒತ್ತಡ ಹೇರುವ ಮೊದಲು, ಈ ಬಗ್ಗೆ ಸರ್ಕಾರಗಳ ಹಾಗೂ ಕಂಪನಿಗಳು ದ್ವಿ-ಪಕ್ಷೀಯ ಒಪ್ಪಂದ ಮಾಡಿಕೊಳ್ಳಬೇಕು ಎಂದು ಹೇಳಿ ನುಣುಚಿಕೊಳ್ಳುತ್ತಿವೆ. ಇತ್ತೀಚೆಗೆ ನಡೆದ WHO ಸಭೆಯಲ್ಲಿ ಔಷಧಿಗಳ ಬೆಲೆಯ ನಿಗದಿ ಬಗ್ಗೆ ಅಗತ್ಯ ಮಾಹಿತಿ ಸಂಗ್ರಹಿಸಿ, ಸರ್ಕಾರಗಳಿಗೆ ಔಷಧಿ ಬೆಲೆ ನಿಗದಿ ಬಗ್ಗೆ ಸಲಹೆ ಕೊಡಬೇಕೆಂಬ ಬ್ರೆಜಿಲ್ ಮತ್ತು ಜಿಂಬಾಬ್ವೆ ಪ್ರಸ್ತಾವ ಜಾರಿಯಾಗಿಲ್ಲ. WHO, UNAIDS ಈ ಬಗ್ಗೆ ಸಕ್ರಿಯ ಪಾತ್ರವಹಿಸುತ್ತಿಲ್ಲ. ನಮ್ಮ ದೇಶದಲ್ಲೇ ನಮ್ಮ ಪೇಟೆಂಟ್ ಕಾನೂನು WTO ನಿರ್ದೇಶನಕ್ಕೆ ಅನುಗುಣವಾಗಿ ಬದಲಾಗಿದ್ದು, ಅದೇ ಪರಿಸ್ಥಿತಿ ನಮ್ಮಲ್ಲಿನ್ನ ಬರಲಿದೆ.

ಬಹುರಾಷ್ಟ್ರೀಯ ಔಷಧಿ ಸಂಸ್ಥೆಗಳ, WTO ನ ಬಲಮುರಿಯದೆ, 20 ವರ್ಷಗಳ ಉತ್ಪನ್ನ ಪೇಟೆಂಟ್‌ಗೆ ಅನುವು ಮಾಡಿಕೊಟ್ಟ ಗುತ್ತೇದಾರಿ ಪದ್ಧತಿಗೆ ಅವಕಾಶ ಮಾಡುವ ಪೇಟೆಂಟ್ ವ್ಯವಸ್ಥೆ ಬದಲಾಗದೆ, ಏಡ್ಸ್‌ನಿಂದ ಜಗತ್ತಿಗೆ ಇಲ್ಲ.

ಬಡವನ ಹಾಡು

ಈ ತುಟ್ಟಿ ಕಾಲದೊಳು ಬಡವನಿಗೆ ಹೊಟ್ಟೆ
ತುಂಬಲೂಗತಿಯಿಲ್ಲ ಇನ್ನೆಲ್ಲಿ ಬಟ್ಟೆ!
ಇಂತಿರಲು ಅವಶ್ಯಬೇಕಾದ ವಿದ್ಯೆ
ಬಡವನಿಗೆ ದಕ್ಕೀತೆ ವಂಚಕರ ಮಧ್ಯೆ?
- ವಿಡಂಬಾರಿ



ಶೋಷಣೆಗಳಿಂದ ಬಿಡುಗಡೆ ಹೊಂದಬೇಕೆಂದೂ ಆಶಿಸಿದರು.

ಕೊನೆಯಲ್ಲಿ ಸೌಜನ್ಯಕ್ಕಾಗಿಯೋ ಏನೋ ಮಹಾಭಾರತದಲ್ಲಿ ಪಾಂಡವರನ್ನು ಶ್ರೀ ಕೃಷ್ಣ ರಕ್ಷಿಸಿದಂತೆ ಕನ್ನಡಿಗರನ್ನು ಮುಖ್ಯಮಂತ್ರಿ ಕೃಷ್ಣ ರಕ್ಷಿಸುತ್ತಾರೆ ಎಂದರು. ಪ್ರಾದೇಶಿಕ ಅಸಮಾನತೆ ಪ್ರತ್ಯೇಕತೆ, ಕನ್ನಡ ಕಲಿಕೆಯ ಕುರಿತು ಅಲಕ್ಷಬಾವನೆ, ಇಂಗ್ಲೀಷ್ ವ್ಯಾಮೋಹ ಮಹಿಳೆಯರ ಶೋಷಣೆ ಮುಂತಾದವುಗಳಿಗೆ ಸ್ವಾತಂತ್ರ್ಯಾನಂತರದ 50 ವರ್ಷಗಳಿಗೂ ಹೆಚ್ಚು ಗಣ್ಯರೂ ಬಾಯಿತುಂಬ ಹೊಗಳಿದರು ಮತ್ತು ಅವರ ತ್ಯಾಗದ ಕುರಿತು ಕಥೆಕವನ ಬರೆಯಲು ಸಾಹಿತ್ಯಾಸಕ್ತರಿಗೆ ಕರೆ ನೀಡಿದರು. ಬಾಗಲಕೋಟೆಯ ಮುಳುಗಡೆ ಸಂತ್ರಸ್ತರ ಕರಿನೆರಳಿನಲ್ಲಿಯೇ ಅದ್ದೂರಿಯ ಸಾಹಿತ್ಯಸಮ್ಮೇಳನ ವಿಜೃಂಭಿಸಿತು.

ಸಂತ್ರಸ್ಥರ ಕಷ್ಟ ಕಾರ್ಪಣ್ಯಗಳ ಹಾಗೂ ಹಿತರಕ್ಷಣೆಯ ಕುರಿತಾದ" ಜಿಲ್ಲಾ ದರ್ಶನಗೋಷ್ಠಿ" ಸಮ್ಮೇಳನದ ಮೊದಲ ದಿನದ ಕೊನೆಯಲ್ಲಿ ರಾತ್ರಿ 8-9 ಗಂಟೆಗೆ ಮುಖ್ಯಮಂತ್ರಿ

ಕನ್ನಡ ಸಾಹಿತ್ಯ ಸಮ್ಮೇಳನ ಸಾಧಿಸಿದ್ದೇನು?

ಪ್ರತ್ಯಕ್ಷ ವರದಿ
ಸಿ.ಆರ್.ಭಟ್

ಲಕ್ಷಗಟ್ಟಲೇ ಹಣ ಸುರಿದ, ಪೂರ್ವ ತಯಾರಿಕೆಗೆ ಭಾರಿ ಶ್ರಮ ಹರಿಸಿದ, ಸಾವಿರಾರು ಜನರು ಮೂರು ದಿನಗಳ ಕಾಲ ಭಾಗವಹಿಸಿದ, ಬಾಗಲಕೋಟೆಯಲ್ಲಿ ಜೂನ್ 24, 25,26 ರಂದು ನಡೆದ ಅ.ಬಾ. 68 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಾಧನೆಗಳೇನು ಎಂದು ಮೌಲ್ಯ ಮಾಪನ ಮಾಡುವುದು ಅಗತ್ಯ

ಕನ್ನಡ ಕರ್ನಾಟಕ ಉಳಿಸಲು ಕರೆ:

ಉತ್ತರ ಕರ್ನಾಟಕ ದಶಕಗಳಿಂದ ಅನುಭವಿಸುತ್ತಿರುವ ತೀವ್ರ ಪ್ರಾದೇಶಿಕ ಅಸಮಾನತೆಯ ಹಿನ್ನಲೆಯಲ್ಲಿ, ಈ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯ ಅಂಗವಾಗಿ ಪ್ರತ್ಯೇಕ ಹೈಕೋರ್ಟ್ ಪೀಠ ಮತ್ತು ರೈಲ್ವೆ ವಲಯಗಳ ಬೇಡಿಕೆಗಳನ್ನು ಒತ್ತಾಯಿಸಿ ಇತ್ತೀಚೆಗೆ ಪುನ: ಭುಗಿಲೆದ್ದ ಹೋರಾಟ ದಿಕ್ಕು ತಪ್ಪಿ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯದ ಬೇಡಿಕೆಯ ದು: ಸ್ಸಾಹಸದ ಸಂದರ್ಭದಲ್ಲಿ ಈ ಸಮ್ಮೇಳನ ನಡೆದಿದೆ. ಹೋರಾಟಗಾರರು ಸಮ್ಮೇಳನವನ್ನು ರದ್ದುಗೊಳಿಸಲು, ಸಮ್ಮೇಳನದ ಅಧ್ಯಕ್ಷರಾದ ಶಾಂತಾದೇವಿ ಮಾಳವಾಡರ ರಾಜಿನಾಮೆ ಪಡೆಯಲು ವಿಫಲ ಪ್ರಯತ್ನ ಮಾಡಿದರು. ಪರಿಸ್ಥಿತಿಯ ಒತ್ತಡದಿಂದ ಅನಿವಾರ್ಯವಾಗಿ ಸಮ್ಮೇಳನದ ಉದ್ಘಾಟಕರಾದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣಾ ಹೋರಾಟಗಾರರ ಬೇಡಿಕೆಗಳನ್ನು ಬೆಂಬಲಿಸುವುದಾಗಿಯೂ, ಅವುಗಳ ಈಡೇರಿಕೆಗಾಗಿ ಸೂಕ್ತ ಕ್ರಮ ಕೈಗೊಂಡಿರುವುದಾಗಿಯೂ ತಿಳಿಸಿದರು. ಕರ್ನಾಟಕದ ಐಕ್ಯತೆ ಕಾಪಾಡಲು ಕರೆ ನೀಡಿದರು. ಈ ಸಾಮಾನ್ಯ ಬೇಡಿಕೆಗಳು ಹಲವು ದಶಕಗಳಿಂದ ಯಾಕೆ ಈಡೇರಲಿಲ್ಲ, ಕೇಂದ್ರದಲ್ಲಿ ಅಧಿಕಾರರೂಢ ಬಿ.ಜೆ.ಪಿ ನೇತೃತ್ವದ ವಾಜಪೇಯಿ ಸರಕಾರ ಯಾಕೆ ಈ ಕುರಿತು ನಿರ್ಲಕ್ಷ ಭಾವನೆ ತಾಳಿದೆ, ಬೆಂಗಳೂರನ್ನು ಸಿಂಗಾಪುರ ಮಾಡಲು ದೇಶ ವಿದೇಶಗಳಿಂದ ಅಲ್ಪಕಾಲದಲ್ಲಿ ಸಾವಿರಾರು ಕೋಟಿ ರೂ. ಬಂಡವಾಳ ಹರಿದು ಬರುವಂತೆ ಮಾಡಬಲ್ಲ ಮುಖ್ಯಮಂತ್ರಿಗೆ ಈ ಬೇಡಿಕೆಗಳನ್ನು ಈಡೇರಿಸಲು ತಡವೇಕೆ ಎಂದು ತಿಳಿಯದು. ಹೆಲಿಪ್ಯಾಡ್‌ನಿಂದ ಮುಖ್ಯಮಂತ್ರಿ ಇಳಿದು ಉದ್ಘಾಟನಾ ಸಮಾರಂಭ ಮುಗಿಸಿ ಹೋಗುವವರೆಗೂ, ಹೋರಾಟಗಾರರ ಕರಿ ಬಾವುಟಗಳ ಪ್ರತಿಭಟನಾ ಮತಪ್ರದರ್ಶನವನ್ನು ಮುಖ್ಯಮಂತ್ರಿ ಬಹಳ ಮುಜುಗರದಿಂದಲೇ ಎದುರಿಸಬೇಕಾಯಿತು. ಯಾವುದೇ ಕಾರಣಕ್ಕೂ ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಎತ್ತಬಾರದೆಂದು ಸಮ್ಮೇಳನದಲ್ಲಿ ಸರ್ವಾನುಮತದ ನಿರ್ಣಯ ಅಂಗಿಕರಿಸಿದ್ದು ಸಮಯೋಚಿತವಾಗಿದೆ.ಸಾಹಿತ್ಯ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಯಂತಹ ರಾಜಕೀಯ ಧುರೀಣರಿಗೆ ಏನು ಕೆಲಸ ಎಂದು ಅವರೇ ಕೇಳಿದರೂ, ಅವರು ಮತ್ತು ಅವರ ಮಂತ್ರಿಗಳ ಹಾಗೂ ಕೇಂದ್ರಮಂತ್ರಿಗಳ ಪಡೆಗಳು, ವಿರೋಧ ಪಕ್ಷದ ಮುಖಂಡರೂ, ಸಮ್ಮೇಳನದ ವೇದಿಕೆಯಲ್ಲಿ ಮೇಲಿಂದ ಮೇಲೆ ಮಿಂಚುತ್ತಿದ್ದರು.

ಕನ್ನಡ ಸಾಹಿತ್ಯದ 68 ಸಮ್ಮೇಳನಗಳಲ್ಲಿ, ದೀರ್ಘಕಾಲದ ನಂತರ, ಈ ಸಲ ಸಮ್ಮೇಳನದ ಎರಡನೇ ಮಹಿಳಾ ಅಧ್ಯಕ್ಷರಾಗಿ ಶಾಂತಾದೇವಿ ಮಾಳವಾಡ ಭಾಗವಹಿಸಿದ್ದು ಸ್ವಾಗತಾರ್ಹ ಮತ್ತು ಅಭಿಮಾನದ ಸಂಗತಿಯಾಗಿದೆ. ಸಮ್ಮೇಳನ ಪ್ರಾರಂಭವಾಗುವ ಮೊದಲು ಮೂರು ಗಂಟೆಗಳ ಕಾಲ ನಡೆದ ಮೆರವಣಿಗೆಯಲ್ಲಿ, ಅಧ್ಯಕ್ಷರು ಬೇಡ ಎಂದರೂ ಅವರನ್ನು ಮೆರವಣಿಗೆಯಲ್ಲಿ ಮೆರೆಸಿದ್ದು ಮತ್ತು ಆ ಕಾರಣದಿಂದ ಸಮ್ಮೇಳನದ ಉದ್ಘಾಟನಾ ಸಮಾರಂಭ ಎರಡು ಗಂಟೆಗಳ ಕಾಲ ತಡವಾದದ್ದು ಎಷ್ಟು ಸಮಂಜಸ ಎಂದು ಸಾಹಿತ್ಯಾಸಕ್ತರು ಚಿಂತನೆ ಮಾಡಬೇಕಾಗಿದೆ. ಮಾಳವಾಡರು ತಮ್ಮ ಸುದೀರ್ಘ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡ ಹಾಗೂ ಕರ್ನಾಟಕ ಉಳಿಸಿ ಬೆಳೆಸಲು ಕಳಕಳಿಯ ಕರೆ ನೀಡಿದರು. ಪ್ರಾದೇಶಿಕ ಅಸಮಾನತೆಯೇ ಪ್ರತ್ಯೇಕತಾ ಚಳುವಳಿಗೆ ಕಾರಣವಾಗಿರುವುದರಿಂದ, ಅದನ್ನು ಅಳಿಸಿಹಾಕಲು ಒತ್ತಾಯಿಸಿದರು. ಈ ದಿಸೆಯಲ್ಲಿ ನದಿ ನೀರು ಹಂಚಿಕೆಯ ವಿವಾದವನ್ನು ಬಗೆಹರಿಸಲು, ಹೈಕೋರ್ಟ್‌ಪೀಠ ಮತ್ತು ರೈಲ್ವೆ ವಲಯಗಳಂತಹ ಬೇಡಿಕೆಗಳನ್ನು ಈಡೇರಿಸಲು ಕರೆಕೊಟ್ಟರು. ಕನ್ನಡದ ಬೆಳವಣಿಗೆ ಮತ್ತು ಕರ್ನಾಟಕದ ಏಕೀಕರಣಕ್ಕೆ ಉತ್ತರ ಕರ್ನಾಟಕದವರೂ ಸೇರಿದಂತೆ ನಾಡಿನಾದ್ಯಂತ ಸಾಹಿತಿಗಳು, ಸಮಾಜಸೇವಕರು, ಸ್ವಾತಂತ್ರ್ಯ ಹೋರಾಟಗಾರರು, ಜನಕೋಟಿ ಮಾಡಿದ ಅಪಾರ ತ್ಯಾಗ ಬಲಿದಾನಗಳನ್ನು ನೆನಪಿಸಿಕೊಟ್ಟರು. ಆಡಳಿತ ಭಾಷೆಯಾಗಿ ಕನ್ನಡದ ವ್ಯಾಪಕ ಬಳಕೆ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಮತ್ತು ಅಂತಹ ವಿದ್ಯಾರ್ಥಿಗಳಿಗೆ ವೈದ್ಯಕೀಯ ಇಂಜಿನಿಯರಿಂಗ್ ಮುಂತಾದ ವೃತ್ತಿ ಶಿಕ್ಷಣದಲ್ಲಿ ಮೀಸಲಾತಿ, ಕನ್ನಡಿಗರಿಗೆ ಉದ್ಯೋಗಾವಕಾಶಗಳಲ್ಲಿ ಆದ್ಯತೆ ಶಿಕ್ಷಕರ ತರಬೇತಿ ಪ್ರವೇಶಕ್ಕೆ ಕನ್ನಡ ಕಡ್ಡಾಯ, ಗಡಿಪ್ರದೇಶಗಳಲ್ಲಿ ಕನ್ನಡಿಗರ ಸಮಸ್ಯೆಗಳ ಪರಿಹಾರ, ಇಂಗ್ಲೀಷ್ ಮಾಧ್ಯಮಗಳ ಶಾಲೆಗಳಲ್ಲಿ ಕನ್ನಡ ಕಲಿಕೆ, ಇತ್ಯಾದಿಗಳನ್ನು ಅಧ್ಯಕ್ಷರು ಸಮರ್ಥವಾಗಿ ಪ್ರತಿಪಾದಿಸಿದರು. ಅವುಗಳ ಕುರಿತು ನಿರ್ಣಯಗಳೂ ಅಂಗೀಕಾರವಾದವು. ಆದರೆ. ಹಿಂದಿನ ನಿರ್ಣಯಗಳಂತೆಯೇ ಇವುಗಳು ಮೂಲೆಗುಂಪಾಗಲಿವೆ, ಇವುಗಳನ್ನು ಜಾರಿಗೆ ತರಲು ಯಾವ ಸರಕಾರಕ್ಕೂ ರಾಜಕೀಯ ಧೃಡ ಮನಸ್ಸು ಇಲ್ಲದಿರುವುದನ್ನು ಗಮನಿಸಬೇಕು. ಸಾಹಿತ್ಯ ಸಮ್ಮೇಳನಗಳು ಕನ್ನಡಿಗರ ಆಶೋತ್ತರಗಳನ್ನು ಅಳಲುಗಳನ್ನು ಹೇಳಿಕೊಳ್ಳಲಿಕ್ಕೆ ಒಂದು ವೇದಿಕೆ ಅಷ್ಟೆ.

ಮಾಳವಾಡರವರು ಮಹಿಳಾ ಸಾಹಿತ್ಯದ ವಿಮರ್ಶೆ ಇನ್ನಷ್ಟು ಆಗಬೇಕೆಂದೂ ಅದಕ್ಕೆ ಸಾಹಿತ್ಯ ಲೋಕದಲ್ಲಿ ಸರಿಯಾದ ಸ್ಥಾನಮಾನ ದೊರೆಯಬೇಕೆಂದೂ ಅದು ಕೇವಲ ಪುರುಷದ್ವೇಷಿ ಸಾಹಿತ್ಯ ಆಗಬಾರದೆಂದೂ, ಮಹಿಳೆಯರು ವರದಕ್ಷಿಣೆ, ದೇವದಾಸಿ ಪದ್ಧತಿ, ಜಾಹಿರಾತು-ಗ್ರಾಹಕ ಸಂಸ್ಕೃತಿ, ಅಶ್ಲೀಲತೆ ಕ್ರೌರ್ಯ, ಲೈಂಗಿಕ ಕಿರುಕುಳ, ಮುಂತಾದ ಕಾಲ ಅನುಸರಿಸಿಕೊಂಡು ಬಂದ ಬಂಡವಾಳ ಶಾಹಿ- ಭೂಮಾಲಕ ಪದ್ಧತಿ ಹಾಗೂ ಅದರ ಮುಂದುವರಿಕೆಯಾಗಿ ಬಂದ ಜಾಗತೀಕರಣ ನೀತಿಗಳೇ ಕಾರಣ ಎಂದು ಮುಖ್ಯಮಂತ್ರಿಗೆ ತಿಳಿಯದ ವಿಷಯವಲ್ಲ. ಆದರೆ ಅವರು ತಮ್ಮ ವರ್ಗ ಹಿತಾಸಕ್ತಿಯಿಂದ ಈ ಸತ್ಯವನ್ನು ಮುಚ್ಚಿಡುತ್ತಿದ್ದಾರೆ. ಸ್ವತ: ಶ್ರೀಮತಿ ಮಾಳವಾಡರಿಗೆ ಈ ಸತ್ಯದ ಸರಿಯಾದ ಅರಿವು ಇಲ್ಲದಿರಬಹುದು. ಮಹಿಳೆಯರೂ ಸೇರಿದಂತೆ ಎಲ್ಲಾ ಶೋಷಿತ ಜನರು ಈ ದುಷ್ಪರಿಣಾಮಗಳ ವಿರುದ್ಧ ಸಂಘಟಿತ ಹೋರಾಟ ನಡೆಸುವ ಮೂಲಕವೇ ಪರಿಸ್ಥಿತಿಯನ್ನು ಬದಲಾಯಿಸಬಹುದೆಂಬ ಬಂಡಾಯದ ಪ್ರಜ್ಞೆಯ ಅಭಾವ ಇವರಿಗೆ ಇದ್ದಿರಬಹುದು. ಮಹಾಭಾರತದಲ್ಲಿಯೂ ಪಾಂಡವರ ಮತ್ತು ಕೌರವರ ನಡುವಿನ, ನ್ಯಾಯ ಅನ್ಯಾಯಗಳ ನಡುವಿನ, ಕುರುಕ್ಷೇತ್ರದ ಸಂಘರ್ಷ ಇಲ್ಲದೆ ಏನೂ ಸಾಧ್ಯವಾಗಲಿಲ್ಲ. ಅಲ್ಲವೇ.

ಮುಳುಗಡೆ ಸಂತ್ರಸ್ತರು ಕರಿ ನೆರಳಿನಲ್ಲಿ;

ಸಾಹಿತ್ಯ ಸಮ್ಮೇಳನ ನಡೆದ ಬಾಗಲಕೋಟೆ ನಗರ ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ಜಲಾವೃತವಾಗಿ ಸಾವಿರಾರು ಜನರು ತಮ್ಮ ಆಸ್ತಿಪಾಸ್ತಿ, ಮನೆಮಠ, ದನಕರುಗಳನ್ನು ಕಳೆದುಕೊಂಡು ನಿರ್ಗತಿಕರಾಗುವ ದುರಂತದ ದು:ಸ್ವಪ್ನದಲ್ಲಿ ಹಲವು ದಶಕಗಳನ್ನು ಕಳೆದಿದ್ದಾರೆ. ಅಲಮಟ್ಟಿ ಅಣೆಕಟ್ಟಿನ ಎತ್ತರದ ವಿವಾದ ಸದ್ಯ ಬಗೆಹರಿದಿದ್ದು, ಅನತಿ ಕಾಲದಲ್ಲಿಯೇ ಚಾರಿತ್ರಿಕ-ಸಾಂಸ್ಕೃತಿಕ ಪ್ರಧಾನವಾದ ಈ ನಗರ ನೀರು ಪಾಲಾಗುವುದು ನಿಶ್ಚಿತವಾಗಿದೆ. ಈ ಬೃಹತ್ ನೀರಾವರಿ ಯೋಜನೆಯ ಸಾಕ್ಷಾತ್ಕಾರಕ್ಕಾಗಿ ತಮ್ಮ ಫಲವತ್ತಾದ ಭೂ ಹಿಡುವಳಿಗಳನ್ನು, ಪರಂಪರಾಗತವಾಗಿ ಬಂದ ಮನೆ ಮಠಗಳನ್ನು ಹಾಗೂ ವ್ಯಾಪಾರ ವಹಿವಾಟುಗಳನ್ನು, ಶಿಕ್ಷಣ ಸಂಸ್ಥೆಗಳನ್ನು ಬಿಟ್ಟುಕೊಡಲು ಒಪ್ಪಿಕೊಂಡ ಈ ನಗರದ ಜನರನ್ನು ಮಹಾತ್ಯಾಗಿಗಳೆಂದೂ ಮುಖ್ಯಮಂತ್ರಿಗಳು, ಸಮ್ಮೇಳನದ ಅಧ್ಯಕ್ಷರು, ಬಿಜಾಪುರದ ಸಿದ್ಧೇಶ್ವರ ಸ್ವಾಮಿಗಳು, ಇತರ ಮತ್ತು ಇತರ ಗಣ್ಯರ ನಿರ್ಗಮನದ ನಂತರ, ಪ್ರತಿನಿಧಿಗಳು ಕಡಿಮೆ ಸಂಖ್ಯೆಯಲ್ಲಿದ್ದಾಗ, ನಡೆದಿರುವುದು ವಿಷಾದನೀಯ. ಅಧಿಕಾರಸ್ಥರು, ಪ್ರತಿಷ್ಠಿತರು ಸಂತ್ರಸ್ತರ ಕುರಿತು ಕೇವಲ ಮೊಸಳೆ ಕಣ್ಣೀರು ಸುರಿಸಿ, ಅವರನ್ನು ತ್ಯಾಗಿಗಳ ಪಟ್ಟಕ್ಕೆ ಏರಿಸಿ, ತಮ್ಮ ಜವಾಬ್ದಾರಿಕೆಯಿಂದ ಜಾರಿಸಿಕೊಂಡು. ಸಂತ್ರಸ್ತರ ಹಿತರಕ್ಷಣೆಯನ್ನು ಅಧಿಕಾರಶಾಹಿಗಳಿಗೆ, ಮಧ್ಯವರ್ತಿ ಶೋಷಕ ದಲ್ಲಾಳಿಗಳಿಗೆ, ಹೆಬ್ಬಾವು ತಿಮಿಂಗಲಗಳಿಗೆ ಬಿಟ್ಟುಬಿಟ್ಟರು. ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷರಾದ ವಾಸಣ್ಣ ದೇಸಾಯಿ ಗೋಷ್ಠಿಯಲ್ಲಿ ಪಾಲ್ಗೊಂಡು ಹತ್ತು ಹಲವು ಉಪಯುಕ್ತ ಸಲಹೆಗಳ ಪಟ್ಟಿ ಮಾಡಿ ರಾತ್ರಿ ರೋಧನ ಮಾಡಿದರು. ಕೇಳುವವರು ಯಾರು? ಹೀಗಾದರೆ ಅಭಿವೃದ್ಧಿ ಯೋಜನೆಗಳಲ್ಲಿ ಜನರು ಆಸಕ್ತಿ ವಹಿಸುವುದು ಹೇಗೆ? ಮುಳುಗಡೆ ಸಂತ್ರಸ್ತರಿಗೆ ಈಗ ಇರುವಷ್ಟಾದರೂ ಸೌಲಭ್ಯಗಳಿರುವ ಮರುವಸತಿ ಕಾರ್ಯಕ್ರಮ ಜಾರಿಗೊಳಿಸಬೇಡವೇ?

ಅವಕಾಶವಾದಿ ಭೈರಪ್ಪನವರ ಮೊಂಡುವಾದ:

ಉದ್ಘಾಟನಾ ಸಮಾರಂಭದಲ್ಲಿ ಹಿಂದಿನ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಸ್.ಎಲ್. ಭೈರಪ್ಪನವರಿಗೆ ಸ್ವಲ್ಪ ಮಾತನಾಡಲು ಅವಕಾಶ ಮಾಡಿ ಕೊಟ್ಟರು. ಅದನ್ನೇ ಬಳಸಿಕೊಂಡು-ದುರ್ಬಳಸಿಕೊಂಡು, ಭೈರಪ್ಪನವರು ತಮ್ಮ "ಖಾಕಿ ಚಡ್ಡಿ ಸಂಸ್ಕೃತಿ"ಯ ನಿಷ್ಠೆಯನ್ನು ಪ್ರದರ್ಶಿಸಿಯೇಬಿಟ್ಟರು. ಅಪ್ರಾಸಂಗಿಕವಾಗಿ ಕಮ್ಯುನಿಸ್ಟರ ವಿರುದ್ಧ ಆರ್ಭಟಿಸಿದರು. ಪ್ರಾದೇಶಿಕ ಅಸಮಾನತೆಗೆ ಆಯಾ ಪ್ರದೇಶಗಳ ಜನರ ಉದ್ಯಮ ಶೀಲತೆಯ ಕೊರತೆಯೇ ಕಾರಣ ಎಂದು ತಮ್ಮ ಮೊಂಡುವಾದವನ್ನು ಮುಂದಿಟ್ಟರು. ಪ. ಪಾಕಿಸ್ತಾನದಿಂದ ವಲಸೆ ಬಂದವರು (ಹಿಂದುಗಳು ಎಂದು ಅವರ ಅರ್ಥ) ಮುಂಬಯಿ ಮತ್ತು ಮತ್ತು ಪಂಜಾಬ್ ಪ್ರದೇಶಗಳನ್ನು ತಮ್ಮ ಉದ್ಯಮಶೀಲತೆಯಿಂದ ಶ್ರೀಮಂತ ಗೊಳಿಸಿದರು ಎಂದರು. ಪೂ. ಪಾಕಿಸ್ತಾನ-ಬಾಂಗ್ಲಾದೇಶದಿಂದ ಪ. ಬಂಗಾಳಕ್ಕೆ ವಲಸೆ ಬಂದವರನ್ನು (ಮುಸ್ಲಿಂರು ಎಂದು ಅವರ ಅರ್ಥ) ಬೆಂಬಲಿಸಿ ಅವರಿಗೆ ಸರಕಾರದ ಕೆಲಸ ಕೊಡಿಸುವ ಆಸೆ ಅಮಿಷಗಳನ್ನು ನೀಡಿ ಕಮ್ಯುನಿಸ್ಟರು ಬೆಳೆದರೆಂದೂ, ಕೈಗಾರಿಕೆಗಳು ಆ ರಾಜ್ಯ ಬಿಟ್ಟು ಹೋಗುವಂತಾಯಿತೆಂದೂ ಆಪಾದಿಸಿದರು. ಕೇರಳ ಮತ್ತು ತ್ರಿಪುರಾದ ಎಡರಂಗ ಸರಕಾರಗಳನ್ನೂ ಟೀಕಿಸಿದರು....." ಸರಕಾರದ ಕೆಲಸ ವ್ಯಾಪಾರೋದ್ಯಮಗಳನ್ನು ನಡೆಸುವುದಲ್ಲ, ಜನರಿಗೆ ಉದ್ಯೋಗ ಕೊಡಿಸುವುದಲ್ಲ" ಎಂದು ಹೇಳಿ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಆಧಾರಿತ ಆರ್ಥಿಕ ನೀತಿಯನ್ನು ಪರೋಕ್ಷವಾಗಿ ಪ್ರತಿಪಾದಿಸಿದರು.

ಭೈರಪ್ಪನವರ ವಾದದಂತೆ, ಉತ್ತರ ಕರ್ನಾಟಕ ಹಿಂದುಳಿಯಲು ಹಾಗೆಯೇ ಭಾರತ ಹಿಂದುಳಿಯಲು ಅಲ್ಲಿಯ ಜನರ ಉದ್ಯಮಶೀಲತೆಯ ಕೊರತೆಯೇ ಕಾರಣ



ಮುಂದಿನ ಪುಟಕ್ಕೆ

ಎಂದಾಗುವುದು. ಬಡತನ ಶ್ರೀಮಂತಿಕೆಯ ಪ್ರಾದೇಶಿಕ ಅಸಮಾನತೆಯ ತಾರತಮ್ಯವನ್ನು ವ್ಯಕ್ತಿಗಳ ಉದ್ಯಮ ಶೀಲತೆಯ ಅಳತೆಗೋಲಿಂದ ಮಾತ್ರ ಅರ್ಥೈಸಿ ಬಂಡವಾಳಶಾಹಿ ಭೂಮಾಲಕ ಹಾಗೂ ಸಾಮ್ರಾಜ್ಯಶಾಹಿ ಶೋಷಣಾ ವ್ಯವಸ್ಥೆಗಳ ಕರಾಳತೆಯನ್ನು ಮುಚ್ಚಿಡುವ ಭೈರಪ್ಪನವರು ಯಾರ ವಕ್ತಾರರು ಎಂದು ತಿಳಿಯಲು ಕಷ್ಟ ಇಲ್ಲ. ಒಮ್ಮೆ ಭೈರಪ್ಪನವರು ಪ. ಬಂಗಾಳ, ತ್ರಿಪುರಾ, ಕೇರಳ ರಾಜ್ಯಗಳಿಗೆ ಹೋಗಿ ಬರಲಿ. ಆಗ ಅವರಿಗೆ ತಿಳಿದೀತು. ಬಿಜೆಪಿ ಆಳ್ವಿಕೆಯ ರಾಜ್ಯಗಳೂ ಸೇರಿದಂತೆ, ಬೇರೆ ಎಲ್ಲಾ ರಾಜ್ಯಗಳಿಗಿಂತ ಈ ಮೂರು ರಾಜ್ಯಗಳು ತಮ್ಮ ಅಧಿಕಾರದ ಇತಿಮಿತಿಗಳೊಳಗೆ ಸರ್ವತೋಮುಖವಾದ ಅಭಿವೃದ್ಧಿ ಸಾಧಿಸಿರುವುದು

ಮತಾಂಧರು ಬಾಬ್ರಿ ಮಸೀದಿ ಕೆಡವಿದ ನಂತರ ಮುಂಬೈಯಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟಗಳಿಂದ ಹಾಗೂ ಕೋಮು ಗಲಭೆಗಳಿಂದ ಕೈಗಾರಿಕಾ ಉದ್ಯಮಿಗಳು ಗಾಬರಿಯಾಗಿ ಮುಂಬಯಿ ಬಿಟ್ಟು ಕಲ್ಕತ್ತಕ್ಕೆ ವಲಸೆ ಹೋಗುತ್ತಿರುವುದನ್ನು ಭೈರಪ್ಪನವರ ಗಮನಕ್ಕೆ ಬರಲಿಲ್ಲವೇ? ಹಿಂದಿನ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಮಾಡುತ್ತ "ಸಾಹಿತಿಗಳಿಗೆ ರಾಜಕೀಯ ಬದ್ಧತೆ ಸಲ್ಲದು" ಎಂದು ಅಪ್ಪಣೆ ಕೊಡಿಸಿ ಭೈರಪ್ಪನವರು ವಾದ-ವಿವಾದಗಳ ಧೂಳೆಬ್ಬಿಸಿದ್ದರು. ಈಗ ಪ್ರಾದೇಶಿಕ ಅಸಮಾನತೆಯ ಕುರಿತು ಕೇಸರಿ ರಾಜಕೀಯ ಬದ್ಧತೆಯ ರಂಗು ಚೆಲ್ಲಿ ರಾಡಿ ಮಾಡಿದರು.

ವಿಶ್ವ ಧರ್ಮ ಮತ್ತು ವಚನ ಸಾಹಿತ್ಯದ ಮುಸುಕಿನಲ್ಲಿ ಕರ್ಮಸಿದ್ಧಾಂತ:

ಸಮ್ಮೇಳನದ ಎರಡನೇ ದಿನ ಸಂಜೆ ರಸವತ್ತಾದ, ಹೃದಯಂಗಮವಾದ ಒಬ್ಬ ಪ್ರತಿಭಾವಂತ ಅಂಧ ಕವಿ ಶಿವರಾಜ ಹೇರೂರ ಸೇರಿದಂತೆ ಹಿರಿಯ-ಕಿರಿಯ ಕವಿಗಳ ಕಾವ್ಯವಾಚನಗಳ ಮಧುರ ಕಾಲವನ್ನು ಮೊಟಕುಗೊಳಿಸಿ, ವೇದಿಕೆ ತುಂಬಾ ಕಾವಿ ಬಟ್ಟೆಯ ಮಠಗಳ ಸ್ವಾಮಿಗಳ ದಂಡನ್ನೇ ನುಗ್ಗಿಸಿದ್ದು, ಅಲ್ಲಿ ನೆರೆದಿದ್ದ 50000ಕ್ಕೂ ಹೆಚ್ಚು ಶ್ರೋತೃಗಳಿಗೆ ತೀವ್ರ ರಸಭಂಗ ಉಂಟು ಮಾಡಿದ್ದು ವಿಷಾದನೀಯ, ಸ್ವಾಮಿಗಳ ದಂಡಿನ ಮಧ್ಯದಿಂದ ಬಿಳಿ ಬಟ್ಟೆಯ ಬಿಜಾಪೂರದ ಶ್ರೀ ಸಿದ್ದೇಶ್ವರ ಸ್ವಾಮಿ ಒಬ್ಬರೇ ವಿಶ್ವಧರ್ಮ ಮತ್ತು ವಚನ ಸಾಹಿತ್ಯದ ಕುರಿತು ಒಂದು ಗಂಟೆ ಕಾಲ ಕನ್ನಡದ ಆಯ್ದು ನುಡಿಮುತ್ತುಗಳಿಂದ ಘನ ಗಾಂಭೀರ್ಯದಿಂದ, ವೀಣೆಯ ಝೇಂಕಾರ ಸ್ವರಭಾರದಿಂದ, ನಿಶ್ಯಬ್ದದಿಂದ ಇದ್ದ ಶ್ರೋತೃಗಳನ್ನು ಉದ್ದೇಶಿಸಿ ಮಾಡಿದ್ದ ಧರ್ಮ ಪ್ರವಚನ ಸಮಸ್ತ ಸಭಿಕರನ್ನು "ಡಿನ್‌ಕೊಲೆಯ ಹಿಪ್ನಾಟಿಸಂ-ಸಮ್ಮೋಹಿನಿ" ಯಂತೆ ಮಂತ್ರ ಮುಗ್ಧರನ್ನಾಗಿ ಮಾಡಿರುವುದೇನೋ ನಿಜ. ಸ್ವಾಮಿಗಳು ಬುದ್ಧ ಬಸವ, ಶಿವಶರಣರು, ಐನ್‌ಸ್ಟೇನ್ ಮುಂತಾದವರ ಉಪದೇಶಗಳನ್ನು ಅಲ್ಲಲ್ಲಿ ಚಿಮುಕಿಸಿ ತಮ್ಮ ಪಾಂಡಿತ್ಯ ಪ್ರದರ್ಶಿಸಿ ಸಭಿಕರನ್ನು ಭ್ರಮಾ ಲೋಕದಲ್ಲಿ ವಿಹರಿಸುವಂತೆ ಮಾಡಿರುವುದೂ ನಿಜ.

ಆದರೆ ಸ್ವಾಮಿಗಳು ಏನು ಮಾತನಾಡಿದರು? ಅವರು ಸಂದೇಶಗಳೇನು? "ಬಡವ ಶ್ರೀಮಂತ ಎಂಬ ಭೇಧ ಭಾವ ಇಲ್ಲ, ಭೇಧ ಭಾವಗಳಿರುವುದು ನಮ್ಮ ನಮ್ಮ ದೃಷ್ಟಿಕೋನದಲ್ಲಿ. ಒಬ್ಬ ಬಡರೈತ 40 ವರ್ಷಗಳಿಂದ ದೇವರೇ ನನಗೆ ಸುಖಕೊಡು, ನನ್ನ ಧಣಿಗೆ ಭೂಮಾಲಕನಿಗೆ ಶ್ರೀಮಂತಿಕೆ ಕೊಡು ಎಂದು ಪ್ರಾರ್ಥನೆ ಮಾಡುತ್ತಿದ್ದ. ಯಾವುದೇ ಫಲಾಪೇಕ್ಷೆ ಇಲ್ಲದೇ ನಿರ್ಲಿಪ್ತತೆಯಿಂದ ತಮ್ಮ ತಮ್ಮ ಪಾಲಿನ ಕೆಲಸವನ್ನು ಶ್ರದ್ಧೆಯಿಂದ ಮಾಡುವುದೇ ವಿಶ್ವಧರ್ಮ ಮತ್ತು ವಚನ ಸಾಹಿತ್ಯ ಸಾರ...." ಎಂದು ಸ್ವಾಮಿಗಳು ಬೋಧಿಸಿದರು. ಅಂದರೆ ಬಡತನ ದುಃಖ ತರುವುದಿಲ್ಲ ಮತ್ತು ಶ್ರೀಮಂತಿಕೆ ಸುಖ ಕೊಡುವುದಿಲ್ಲ. ಎರಡನ್ನೂ ಸಮಾನಭಾವದಿಂದ ಕಾಣಬೇಕು ಎಂದು ಸ್ವಾಮಿಗಳ ಉಪದೇಶ. ಇದರ ಅರ್ಥ ಬಡವ ಬಡವನಾಗಿಯೇ ಉಳಿಯಬೇಕು ಮತ್ತು ಶ್ರೀಮಂತ ಶ್ರೀಮಂತನಾಗಿಯೇ ಉಳಿಯಬೇಕು ಎಂದು ಸ್ವಾಮಿಗಳ ಪ್ರವಚನದ ಅಮಲು ಇಳಿದ ಕೂಡಲೇ, ಸಾವಿರಾರು ಶ್ರೋತೃಗಳಿಗೆ ತಮ್ಮ ಬದುಕಿನ ಸಮಸ್ಯೆಗಳಾದ ಬಡತನ, ನಿರುದ್ಯೋಗ ಅಸಮಾನತೆ, ಅನಕ್ಷರತೆ, ಅನಾರೋಗ್ಯ, ಶೋಷಣೆ, ಭ್ರಷ್ಟಾಚಾರ, ಸದ್ಯದ ಜಾಗತೀಕರಣದ ದುಷ್ಪರಿಣಾಮಗಳು, ಮುಳುಗಡೆ ಸಂತ್ರಸ್ತರಿಗೆ ಪರಿಹಾರ ಇತ್ಯಾದಿಗಳು ಮತ್ತೆ ದುಃತ್ತಂದು ಎದುರು ಬಂದು ನಿಲ್ಲುತ್ತವೆ. ಸ್ವಾಮಿಗಳು ಬುದ್ಧ, ಬಸವ, ಮುಂತಾದ ದಾರ್ಶನಿಕರು ತಿಳಿಸಿದಂತೆ ಜನರು ತಮ್ಮ ಕಷ್ಟ ಕಾರ್ಪಣ್ಯಗಳಿಗೆ ಬಡತನ ದಾರಿದ್ರ್ಯಗಳಿಗೆ ಕಾರಣಗಳು ಏನು ಎಂದು ಸಮೂಹ ಚಿಂತನೆಗೆ ಅನುಭವ ಮಂಟಪದಲ್ಲಿ ಚರ್ಚೆಗೆ ತೊಡಗಲು ಪ್ರೇರೇಪಿಸಲಿಲ್ಲ. ಅವುಗಳ ಪರಿಹಾರಕ್ಕೆ ಮಾರ್ಗದರ್ಶನ ನೀಡಲಿಲ್ಲ. ಬದಲು ಅವರ ಸಮಸ್ಯೆಗಳು ಸಮಸ್ಯೆಗಳೇ ಅಲ್ಲ, ಎಲ್ಲ ಬಟ್ಟ ಬಯಲು ಶೂನ್ಯ ಎಂಬ ಅದ್ವೈತ ತತ್ವಜ್ಞಾನವನ್ನು ಮತ್ತು ಕರ್ಮಸಿದ್ಧಾಂತವನ್ನು ಸ್ವಾಮಿಗಳು ಬೋಧಿಸಿ ಹೋದರು. ಸಾಹಿತಿಗಳು ಜನರ ನೋವು ನಲಿವುಗಳಿಗೆ ಸ್ಪಂದಿಸಿ ಸಮಾನತೆಯ ಸಮೃದ್ಧಿಯ ಶೋಷಣಾರಹಿತ ಸಮಾಜ ನಿರ್ಮಾಣಕ್ಕೆ ಪ್ರೇರೇಪಿಸುವ ಕತೆ ಕವನಗಳಂತಹ ಸಾಹಿತ್ಯ ಸೃಷ್ಟಿಸಬೇಕೆಂಬುದು ಸಮಕಾಲೀನ ಚಿಂತನೆಯ ಮಾರ್ಗ. ಆದರೆ, ಸ್ವಾಮಿಗಳು ಪ್ರತಿಪಾದಿಸುತ್ತಿರುವುದು ಸುಖ ದುಃಖಗಳನ್ನು ಸಮಚಿತ್ತದಿಂದ ಸಹಿಸಿಕೊಳ್ಳುವ ಸಾಹಿತ್ಯ ಸೃಷ್ಟಿಯಾಗಬೇಕು ಎಂದು ಇಂತಹ ಸ್ವಾಮಿಗಳಿಗೆ ಸಾಹಿತ್ಯ ಸಮ್ಮೇಳನದಲ್ಲಿ ಏನು ಕೆಲಸ? ಇವರ ಧರ್ಮ- ಅಧರ್ಮ ಪ್ರವಚನಗಳನ್ನು ಇವರ ಮಠಮಾಳಿಗೆಗಳಲ್ಲಿ ತಮ್ಮ ಶಿಷ್ಯರಿಗೆ ಮಾತ್ರ ಸೀಮಿತ ಗೊಳಿಸಬಹುದಲ್ಲ?



ಸಮ್ಮೇಳನದ ಅಧ್ಯಕ್ಷೆ ಶಾಂತಾದೇವಿ ಮಾಳವಾಡ

ಜನಜಾತ್ರೆ-ಯಾತ್ರೆ, ಸಾಹಿತ್ಯ ಪ್ರಚಾರ:

ಈ ಮಧ್ಯೆ ಸಾಹಿತ್ಯ ಚಳುವಳಿಗಳು ನಿಂತು ಹೋದವೇ ಮತ್ತು ಸಮೂಹ ಮಾಧ್ಯಮಗಳು ಹಾಗೂ ಸಾಹಿತ್ಯ ಗೋಷ್ಠಿಗಳಿಗೆ ಸ್ಥಳಾವಕಾಶ ಮತ್ತು ಸಮಯಾವಕಾಶಗಳ ಕೊರತೆಯಿಂದಾಗಿ ಇವುಗಳು ಸೊರಗಿದವು. ಕತೆ ಕಾದಂಬರಿ ಕಾವ್ಯ ನಾಟಕ ವಿಮರ್ಶಾ ಸಾಹಿತ್ಯ ಪ್ರಕಾರಗಳ ಕುರಿತು ಗೋಷ್ಠಿಗಳಲ್ಲಿ ಸಾಕಷ್ಟು ಜನಪರ ಅಂಶಗಳು ಮೂಡಿ ಬಂದವು. ಕನ್ನಡ ಸಾಹಿತ್ಯಕ್ಕೆ ಭವಿಷ್ಯ ಇರುವುದಾಗಿ ಭರವಸೆ ಮೂಡಿಸಿದವು. ನಾಟಕ ರಂಗದ ಗೋಷ್ಠಿಯ ಅಧ್ಯಕ್ಷರಾದ ಬಿ.ವಿ. ಕಾರಂತರು ದೇಶದ ಇತರ ಎಲ್ಲಾ ರಾಜ್ಯಗಳಲ್ಲಿ ಇಲ್ಲದಷ್ಟು ವಿವಿಧ ಪ್ರಕಾರಗಳ ನಾಟಕಗಳ ಪ್ರಯೋಗಗಳು ಕರ್ನಾಟಕದಲ್ಲಿ ನಡೆಯುತ್ತಿದ್ದು ರಂಗಭೂಮಿ ಟಿ.ವಿ. ಮಾಧ್ಯಮದ ಮಧ್ಯದಲ್ಲಿಯೂ ಜೀವಂತವಾಗಿದೆ ಎಂದು ಎತ್ತಿ ತೋರಿಸಿದರು. ಸಮ್ಮೇಳನದ ಸಭಾಂಗಣದ ಒಳ ಹೊರಗೆ ಮೂರು ದಿನಗಳ ಕಾಲ 50000ಕ್ಕೂ ಹೆಚ್ಚು ಜನರ ಜಾತ್ರೆ ಯಾತ್ರೆ ನಡೆದಿರುವುದು ಸಂತೋಷ ಹಾಗೂ ಸ್ವಾಗತ. 150 ಪುಸ್ತಕ ಮಳಿಗೆಗಳಲ್ಲಿ, ಮುಖ್ಯವಾಗಿ ನವಕರ್ನಾಟಕ ಪ್ರಕಾಶನದಲ್ಲಿ ದಿನಕ್ಕೆ 4-5 ಲಕ್ಷ ರೂ.ಗಳ ಕನ್ನಡ ಪುಸ್ತಕಗಳ ಮಾರಾಟವಾಗುತ್ತಿದ್ದುದು ಆಶಾದಾಯಕ ವಿದ್ಯಾಮಾನವಾಗಿದೆ. ಈ ಸಂದರ್ಭ ಎನ್.ಕೆ. ಉಪಾಧ್ಯಾಯರ 'ಕೃಷ್ಣೆಯ ನೀರು ರೈತರ ಕಣ್ಣೀರು' ಮತ್ತು ಸಿ.ಆರ್. ಭಟ್ ಅವರ 'ಶ್ರೀಮಂತ ಭಾರತದಲ್ಲಿ ಬಡ ಭಾರತೀಯರು', 'ಚೀನಾದ ಕ್ರಾಂತಿ ಮತ್ತು ನಂತರ ಜನರ ಧ್ವನಿ', 'ರಾಷ್ಟ್ರ ಪತಿಗಳ ಪ್ರತಿಧ್ವನಿ' ಪುಸ್ತಕಗಳ ನೂರಾರು ಪ್ರತಿಗಳೂ ಪ್ರಸಾರಗೊಂಡವು. ಸಾಹಿತ್ಯ ಸಮ್ಮೇಳನದ ಸಂದರ್ಭ ಲೆನಿನ್ ಅವರ ಕುರಿತಾದ ಪುಸ್ತಕವೂ ಸೇರಿದಂತೆ ಏಕಕಾಲದಲ್ಲಿ 70 ಹೊಸ ಪುಸ್ತಕಗಳ ಬಿಡುಗಡೆ ಸಮಾರಂಭವೂ ನಡೆದಿರುವುದು ಸಂತೋಷ.

ಸರಕಾರದ ಸ್ವಾಮಿಗಳ, ವ್ಯಾಪಾರೋಧ್ಯಮಿಗಳ ಕೃಪಾಪೋಷಿತವಾದ ಇಂತಹ ಸಾಹಿತ್ಯ ಸಮ್ಮೇಳನಗಳ ಸಾಧನೆಗಳು ಸೀಮಿತವಾಗಿರುವುದು ಸಹಜವಾಗಿದೆ. ಮಹಾರಾಷ್ಟ್ರದಲ್ಲಿ ಹಿಂದೆ ಬಿಜೆಪಿ ಶಿವಸೇನೆ ಸರಕಾರ ಇದ್ದಾಗ ಮರಾಠಿ ಸಾಹಿತ್ಯ ಸಮ್ಮೇಳನವನ್ನು ಪೂನಾದಲ್ಲಿ ಜನರಿಂದ ಚಂದಾ ಎತ್ತಿ ಯಶಸ್ವಿಯಾಗಿ ನಡೆಸಿ ಸಾಹಿತಿಗಳೆಲ್ಲರೂ ಒಕ್ಕೊರಲಿನಿಂದ ಸರಕಾರದ ಕೋಮುವಾದಿ ಧೋರಣೆಯನ್ನು ಖಂಡಿಸಿರುವುದನ್ನು ನೆನಪಿಸಿಕೊಳ್ಳಬಹುದು. ನಮ್ಮ ಕನ್ನಡದ ಸಾಹಿತಿಗಳೂ ತಮ್ಮ ಸ್ವಂತ ಕಾಲ ಮೇಲೆ ನಿಲ್ಲಬಲ್ಲರೇ? ಕೆಲವು ತಿಂಗಳುಗಳ ಹಿಂದೆ ಮುಂಡರಗಿಯಲ್ಲಿ ನಡೆದ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನ ಇಂತಹ ಸಾಧ್ಯತೆಯನ್ನು ತೋರಿಸಿ ಕೊಟ್ಟಿದೆ.

○


ದ.ಕ.ಜಿಲ್ಲೆಯಲ್ಲಿ ಬೆಳೆಯುತ್ತಿದೆ ಕೈಗಾರಿಕಾ ಮರುಭೂಮಿ

ಬಿ. ಮಾಧವ

ಐದು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಳುತ್ತಿದ್ದ ದೊಡ್ಡ ಕೂಗು: "25 ಬೃಹತ್ ಕೈಗಾರಿಕೆಗಳು ಬರುತ್ತಿವೆ. ಪರಿಸರವೆಲ್ಲಾ ನಾಶವಾಗುತ್ತದೆ. ಜಿಲ್ಲೆಯ ಧಾರಣ ಶಕ್ತಿ ಪರೀಕ್ಷಿಸದೆ ಕೈಗಾರಿಕೆ ಬರಲು ಬಿಡೆವು". ಕೊಜೆಂಟ್ರಿಕ್ಸ್ ಉಷಾ ಇಸ್ಪಾತ್, ನಾಗಾರ್ಜುನ, ಇನ್ನೂ ' ಏನೇನೋ ಹೆಸರುಗಳು ಇಲ್ಲಿ ಕಂಠಪಾಠವಾಗಿವೆ. ನಾವು ಹೋರಾಡಿದೆವು, ನಾವು ಗೆದ್ದೆವು ಎಂದರು ಪರಿಸರವಾದಿಗಳು.

ಹಿಂದೆ ಕೇಳಿದ ದೊಡ್ಡ ದೊಡ್ಡ ಕೈಗಾರಿಕೆಗಳ ಹೆಸರುಗಳು ಈಗ ಕೇಳಿಸುವುದಿಲ್ಲ. ಪರಿಸರವಾದಿಗಳಿಗೂ ನೆಮ್ಮದಿ ಮತ್ತು ಶಾಂತಿ. ಹೊಸ ಕೈಗಾರಿಕೆ ಬರುವುದು ಕಾಣಿಸುವುದಿಲ್ಲ. ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಕ್ಕಿಲ್ಲ. ಆದರೆ ಪರಿಸರಕ್ಕೆ ಅಪಾಯವೂ ತಪ್ಪಿಲ್ಲ. ನವಮಂಗಳೂರು ಬಂದರಿನ ಹೊಟ್ಟೆಯೊಳಗೇ ಎಲ್ ಎಂಡ್ ಟಿಯವರ ಸಿಮೆಂಟ್ ಚೀಲವನ್ನು ತುಂಬುವ ಘಟಕ ಕಾರ್ಯಾಚರಿಸುತ್ತಿದೆ. ಎಲ್ಲಿಂದಲೋ ಬಂದ ಸಿಮೆಂಟು ಮಂಗಳೂರಿನಲ್ಲಿಳಿದು, ಗೋಣಿಗೆ ತುಂಬಿ ಪರಿಸರದಲ್ಲಿ ಒಂದಷ್ಟು ಧೂಳು ಹರಡಿ ಪುನಃ ಇನ್ನೆಲ್ಲಿಗೋ ಹೋಗುತ್ತದೆ. ಎಲ್ಲಾ ಅಟೋಮ್ಯಾಟಿಕ್. ಕಾರ್ಮಿಕರ ಅಗತ್ಯವಿಲ್ಲ. ತಣ್ಣೀರುಬಾವಿಯ ಸುಂದರ ಕಡಲ ಕಿನಾರೆಯಲ್ಲಿ ಬಾರ್ಜ್ ಮೌಂಟೆಡ್ ವಿದ್ಯುತ್ ಸ್ಥಾವರ ನಿರ್ಮಾಣವಾಗುತ್ತಿದೆ. ಅದರ ಶಬ್ಧದಿಂದ ಏಳುವ ವೈಬ್ರೇಶನ್‌ನಿಂದಾಗಿ ಕರಾವಳಿಯ ಮೀನುಗಳೆಲ್ಲಾ ಓಡಿ ಹೋಗಿ ಮೀನಿನ ಬರವನ್ನು ಎದುರಿಸಬೇಕಾದೀತೆಂದು ಮೀನುಗಾರರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಕುದುರೆಮುಖ ಕಬ್ಬಿಣ ಅದಿರು ಸಂಸ್ಥೆಯವರು ನವಮಂಗಳೂರಿನಲ್ಲಿ ಕಬ್ಬಿಣ ತಯಾರಿಸುವ ಘಟಕವೊಂದನ್ನು ಆರಂಭಿಸುತ್ತಿದ್ದಾರೆ.



ಮುಚ್ಚಲ್ಪಡುತ್ತಿರುವ ಹೆಂಚು ಕಾರ್ಖಾನೆಗಳು

ಇವುಗಳಲ್ಲೆಲ್ಲಾ ಆಗ ಬಹುದಾದ ಉದ್ಯೋಗಾವಕಾಶ ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂಬಂತೆ ಅತ್ಯಲ್ಪ.

ಮಂಗಳೂರು ರಸಗೊಬ್ಬರ ಕಾರ್ಖಾನೆ (ಎಂಸಿಎಫ್) ಬಿಕ್ಕಟ್ಟಿನಲ್ಲಿದೆ. ಎಂಆರ್‌ಪಿಎಲ್‌ನ ದೈತ್ಯಗಾತ್ರದ ಟ್ಯಾಂಕರುಗಳು ಜಿಲ್ಲೆಯ ಅಗಲ ಕಿರಿದಾದ ಹೈವೇಗಳಲ್ಲಿ ಪ್ರತಿಕ್ಷಣವೂ ಸಾರಿಗೆ ಸಮಸ್ಯೆಗಳನ್ನು ಸೃಷ್ಟಿಸುತ್ತಾ ಎಲ್ಲರ ಗಮನ ಸೆಳೆಯುತ್ತಿವೆ ಯಾದರೂ, ಎಂಆರ್‌ಪಿಎಲ್ ಒದಗಿಸಿದ ಉದ್ಯೋಗಾವಕಾಶ ನಗಣ್ಯ. ನವಮಂಗಳೂರು ಪ್ರದೇಶದಲ್ಲಿ ಮಡಗಾಂವ್‌ಡಾಕ್‌ನ ಮಂಗಳೂರು ಯಾರ್ಡ್ ಎಂಬ ಘಟಕವಿತ್ತು. ದೀರ್ಘಕಾಲದಿಂದ ಬಿಕ್ಕಟ್ಟಿನಲ್ಲಿದ್ದ ಈ ಘಟಕ ಈಗ ಮುಚ್ಚಲ್ಪಡುತ್ತಿದೆ.

ಮಂಗಳೂರಿನಲ್ಲಿದ್ದ 35 ಹೆಂಚು ಕಾರ್ಖಾನೆಗಳ ಪೈಕಿ ಈಗ ಉಳಿದಿರುವುದು ಏಳೆಂಟು, ಬೀಡಿ ಕೈಗಾರಿಕೆಯೆಂಬುದು ಶೋಷಣೆಯ ಮತ್ತೊಂದು ಹೆಸರು. ಲಕ್ಷಗಟ್ಟಲೆ ಅಸಂಘಟಿತ ಮಹಿಳಾ ಕಾರ್ಮಿಕರು ಇಲ್ಲಿ ಅಸಹಾಯಕರಾಗಿ ಶೋಷಣೆಯನ್ನು ಅನುಭವಿಸು ತ್ತಾರೆ. ದೊಡ್ಡ ಮಾಲಕರು, ಮಧ್ಯವರ್ತಿಗಳು ಮಾತ್ರವಲ್ಲದೆ ಸಣ್ಣ ಮಾಲಕರೆಂಬ ಹಣೆಪಟ್ಟಿ ಹಚ್ಚಿಕೊಂಡಿರುವ ಜಿಗಣೆಗಳು ಕಾರ್ಮಿಕರ ರಕ್ತ ಹೀರುತ್ತಿವೆ. ದಾಖಲೆ ಪ್ರಕಾರ ಈ ಜಿಗಣೆಗಳಿಗೆ ಕಾರ್ಮಿಕರೇ ಇಲ್ಲ. ಅವರು ಕಾರ್ಮಿಕರಿಂದ ಬೀಡಿ ಕ್ರಯಕ್ಕೆ ಪಡೆದು ಮಾರುವವರು. ಸಾವಿರಗಟ್ಟಲೆ ಕಾರ್ಮಿಕರನ್ನು ದುಡಿಸಿ ಅವರ ಬಗ್ಗೆ ಯಾವುದೇ ದಾಖಲೆ ಇಡದೆ, ಕಾನೂನು ಪ್ರಕಾರ ಸಲ್ಲತಕ್ಕ ಸವಲತ್ತುಗಳನ್ನು ನೀಡದೆ, ಅವರಿಂದ ಕ್ರಯಕ್ಕೆ ಬೀಡಿ ಕೊಂಡುಕೊಳ್ಳುವ ಶೋಷಕರು ಕಂಟ್ರಾಕ್ಟರರೂ ಆಗಿರುತ್ತಾರೆ, ಮಾಲಕರೂ ಆಗಿರುತ್ತಾರೆ. ದೊಡ್ಡ ಮಾಲಕರಿಗಿಂತಲೂ ಇವರು ಪ್ರಭಾವಿಗಳು; ಆದುದರಿಂದಲೇ ಅವರ ಸಾಮ್ರಾಜ್ಯ ಬೆಳೆಯುತ್ತಲೇ ಇದೆ. ಬೀಡಿ ಕೈಗಾರಿಕೆಯಲ್ಲಿ ಬಿಕ್ಕಟ್ಟು ಎಂಬ ಪರಿಕಲ್ಪನೆಗೆ ಅರ್ಥ ಹುಡುಕುವುದು ಸುಲಭವಲ್ಲ. ಆದರೆ ವಾರದಲ್ಲಿ ಮೂರು ದಿನ ಮಾತ್ರ ಕೆಲಸ ಸಿಗುವ , ತಿಂಗಳಿಗೆ ನಾನೂರು ರೂಪಾಯಿಗಳನ್ನೂ ಸಂಪಾದಿಸಲಾರದ ಕಾರ್ಮಿಕರ ಸ್ಥಿತಿ ಶೋಚನೀಯವಾಗಿ ಮುಂದುವರಿಯುತ್ತಿದೆ.

ಹಿಂದೆ ಮಂಗಳೂರಿನಲ್ಲಿ ಗೋಡಂಬಿ ಸಂಸ್ಕರಣೆಯ ಕೆಲವು ಬೃಹತ್ ಕಾರ್ಖಾನೆಗಳಿದ್ದವು. ಸುಮಾರು ಹತ್ತು ಸಾವಿರ ಮಹಿಳಾ ಕಾರ್ಮಿಕರು ಅವುಗಳಲ್ಲಿ ದುಡಿಯುತ್ತಿದ್ದರು. ಮಹಿಳಾ ಕಾರ್ಮಿಕರ ಚಳುವಳಿಗಳ ಚರಿತ್ರೆಯಲ್ಲಿ ಅತ್ಯಂತ ಸಮರಶೀಲ ಹೋರಾಟಗಳನ್ನು ನಡೆಸಿದ ಚರಿತ್ರೆ ಗೋಡಂಬಿ ಕಾರ್ಮಿಕರದ್ದು. ಈಗ ಆ ಕಾರ್ಖಾನೆಗಳೆಲ್ಲಾ ಮುಚ್ಚಿವೆ. ದೂರದ ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಲ್ಲಿ ಕೆಲವು ಸಣ್ಣ ಕಾರ್ಖಾನೆಗಳು ಹುಟ್ಟಿಕೊಂಡಿವೆ. ಗೋಡಂಬಿ ಕಾರ್ಮಿಕರ ಜೀವನ ಪರಿಸ್ಥಿತಿ ತೀರಾ ಶೋಚನೀಯವಾಗಿದೆ.

ದ.ಕ.ಜಿಲ್ಲೆಯ ಧಾರಣ ಶಕ್ತಿ ಇನ್ನೂ ಒಗಟಾಗಿಯೇ ಇದೆ. ಸರಕಾರವೂ ಪರಿಸರವಾದಿಗಳೂ ಹಲವು ದಶಕಗಳ ಕಾಲ ಈ ಜಿಜ್ಞಾಸೆಯಲ್ಲಿ ವಿರಾಜಿಸಬಹುದು. ಆದರೆ ದ.ಕ. ಜಿಲ್ಲೆ ಕೈಗಾರಿಕಾ ಮರುಭೂಮಿಯಾಗುತ್ತಿದೆ. ಇದ್ದ ಕೈಗಾರಿಕೆಗಳು ಮುಚ್ಚುತ್ತಿವೆ. ಹೊಸ ಕೈಗಾರಿಕೆಗಳು ಬರುವ ಲಕ್ಷಣಗಳಿಲ್ಲ. ಪ್ರತೀ ವರ್ಷ ಸಾವಿರಗಟ್ಟಲೆ ವಿದ್ಯಾವಂತ ಯುವಜನರು ನಿರುದ್ಯೋಗಿಗಳ ಸೈನ್ಯವನ್ನು ಸೇರುತ್ತಿದ್ದಾರೆ.

ವಿಶ್ವಶಾಂತಿಯನ್ನು ಕದಡುವ ಅಪಾಯಕಾರಿ ಪ್ರಯತ್ನ

ಅಮೆರಿಕದ ಕ್ಷಿಪಣಿ ಯೋಜನೆ

ಕ್ಷಿಪಣಿಗಳ ದಾಳಿ ವಿರುದ್ಧ ರಕ್ಷಣೆ ನೀಡಬಲ್ಲ ಅಮೆರಿಕ ಅಭಿವೃದ್ಧಿಪಡಿಸುತ್ತಿರುವ ರಕ್ಷಕ-ಕ್ಷಿಪಣಿ ಠುಸ್ಸೆಂದಿದೆ. ಕಳೆದ ಜನವರಿಯಲ್ಲೂ ಇದೇ ರೀತಿ ಠುಸ್ಸೆಂದಿತು - ಇಂತಹ ಮೊದಲನೆಯ ಪರೀಕ್ಷೆಯಲ್ಲಿ. ಅಮೆರಿಕದ ಕ್ಷಿಪಣಿ -'ರಕ್ಷಣೆ' ಕಾರ್ಯಕ್ರಮದ ಬಗ್ಗೆ ಆ ದೇಶದೊಳಗೂ, ಅಂತರ್ರಾಷ್ಟ್ರೀಯ ವಾಗಿಯೂ ಇದರಿಂದ ಭಾರೀ ಗುಲ್ಲೆದ್ದಿದೆ. ರಕ್ಷಕ ಕ್ಷಿಪಣಿ ತಾಂತ್ರಿಕವಾಗಿ ಆಗದ ಮಾತು ಎಂದು ಹಲವು ಪರಿಣತರು ಪುನಃ ಸ್ಪಷ್ಟಪಡಿಸಿದರೆ, ಅಮೆರಿಕದ ಈ ಕಾರ್ಯಕ್ರಮ ಹೊಸ ಶಸ್ತ್ರಾಸ್ತ್ರ ಪೈಪೋಟಿಯನ್ನು ಆರಂಭಿಸುತ್ತದೆ. ಶಸ್ತ್ರಾಸ್ತ್ರ ನಿಯಂತ್ರಣದ ಈವರೆಗಿನ ಒಪ್ಪಂದಗಳನ್ನೆಲ್ಲಾ ಬುಡಮೇಲು ಮಾಡುತ್ತದೆ. ಆಕಸ್ಮಿಕ ಅಣ್ವಸ್ತ್ರ ಯುದ್ಧಕ್ಕೆ ಹಾದಿ ಮಾಡಿಕೊಡುತ್ತದೆ ಎಂದು ಶಾಂತಿಪ್ರಿಯರೆಲ್ಲ ಆತಂಕಗೊಂಡಿದ್ದಾರೆ.


80 ರ ದಶಕದ ಅಮೆರಿಕದ ಅಧ್ಯಕ್ಷ ರೇಗನ್ನರ 'ತಾರಸಮರ' ನಿಮಗೆ ನೆನಪಿರಬೇಕು. ಅಂತರಿಕ್ಷವನ್ನು ರಣಾಂಗಣ ಮಾಡಲು ಹೊರಟಿದ್ದ, ಈ ಕಾರ್ಯಕ್ರಮವನ್ನು ಶಾಂತಿ ಚಳುವಳಿಯ ಒತ್ತಡ, ತಾಂತ್ರಿಕ ಸಂದೇಶಗಳಿಂದಾಗಿ 'ಪ್ರಾಕೃತಿಕ ಸಾವು' ಕಂಡಿತ್ತು. 1996 ರಲ್ಲಿ ಆರಂಭವಾದ ತಾರಾಸಮರದ ವ್ಯಾಪ್ತಿ ಈ ಕಾರ್ಯಕ್ರಮಕ್ಕೆ ಇಲ್ಲದಿದ್ದರೂ ಅದರ ದೂರಗಾಮಿ ಉದ್ದೇಶ 'ತಾರಾಸಮರ'ದ್ದೇ.

ಸೋವಿಯತ್ ಒಕ್ಕೂಟದ ವಿಘಟನೆ, ಪೂರ್ವಯುರೋಪಿನಲ್ಲಿ ಸಮಾಜವಾದದ ಹಿನ್ನಡೆಯ ಹಿನ್ನಲೆಯಲ್ಲಿ ಅಮೆರಿಕ ಪುನಃ ತನ್ನ ಮಿಲಿಟರಿ ಆಧಿಪತ್ಯ ಇಡೀ ಜಗತ್ತಿನ ಮೇಲೆ ಸಾಧಿಸಲು, ಹೊಸ ಶಸ್ತ್ರಾಸ್ತ್ರದ ಶೋಧನೆಯಲ್ಲಿ ತೊಡಗಿದೆ. ಎರಡನೇ ಮಹಾಯುದ್ಧದ ಕಾಲದಿಂದ, ಸಮಾಜವಾದಿ ಬಣದ ಬಲ ಗಮನಾರ್ಹವಾದಾಗಿಂದ ಮಿಲಿಟರಿ ಕ್ಷೇತ್ರದಲ್ಲಿ ಹೆಗ್ಗಳಿಕೆ ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಅಣುಬಾಂಬಿನಿಂದ ಆರಂಭಿಸಿ, ಅಣು ಸಿಡಿತಲೆ ಇರುವ ಕ್ಷಿಪಣಿ, ತಾರಾಸಮರ, ರಾಷ್ಟ್ರೀಯ ಕ್ಷಿಪಣಿ ರಕ್ಷಣೆವರೆಗೆ ಇರುವುದು - ಅಮೆರಿಕದ ಈ ಪ್ರಯತ್ನವೇ. ಆದರೆ ಹಿಂದೆ ಪ್ರತಿಬಾರಿ ಅಮೆರಿಕ ಮಿಲಿಟರಿ ಹೆಗ್ಗಳಿಕೆ ಸ್ಥಾಪಿಸಿದಾಗ, ಸ್ವಲ್ಪ ಸಮಯದಲ್ಲೇ ಆ ವರ್ಗದ ಶಸ್ತ್ರಾಸ್ತ್ರಗಳನ್ನು ಸಮಾಜವಾದಿ ದೇಶಗಳೂ ತಯಾರಿಸಿ ಅದರ ಹೆಗ್ಗಳಿಕೆಯನ್ನು ಅಳಿಸಿಹಾಕುತ್ತಿದ್ದವು. ಆದರೆ ಈಗ ಅದು ಸಾಧ್ಯವಾಗಲಿಕ್ಕಿಲ್ಲ ಅಂತ ಈ ಹೊಸ ವರ್ಗದ ಶಸ್ತ್ರಾಸ್ತ್ರ ತಯಾರಿಸಲು ಹೊರಟಿದೆ.

50 ರ ದಶಕದಿಂದ 80 ರ ದಶಕದವರೆಗೆ ಸಮಾಜವಾದಿ ವ್ಯವಸ್ಥೆಯೇ ಅಮೆರಿಕದ 'ಭದ್ರತೆಗೆ ಬೆದರಿಕೆ', ಅಮೆರಿಕ ತನ್ನ ಶಸ್ತ್ರಾಸ್ತ್ರ ಪೈಪೋಟಿಗೆ ನೆಪ ಕೊಡುತ್ತಿತ್ತು. ಅಮೆರಿಕದ ಆಕ್ರಮಕ ಧೋರಣೆಗೆ ಪ್ರತಿಯಾಗಿ, ರಕ್ಷಣಾತ್ಮಕವಾಗಿ ಸಮಾಜವಾದಿ ದೇಶಗಳು ಅದೇ ಶಸ್ತ್ರಾಸ್ತ್ರಗಳನ್ನು ತಯಾರಿಸಿದರೆ, ಅದು ಅಮೆರಿಕಕ್ಕೆ 'ಭದ್ರತೆಗೆ ಬೆದರಿಕೆ'ಯಾಗಿ ಕಾಣುತ್ತಿತ್ತು. ಆದರೆ 90 ರ ದಶಕದಲ್ಲಿ ಆ ನೆಪವೂ ಉಳಿದಿಲ್ಲ. ಅದಕ್ಕಾಗಿ ಹೊಸ ಕೃತಕ 'ಭದ್ರತೆಗೆ ಬೆದರಿಕೆ'ಗಳನ್ನು ಸೃಷ್ಟಿಸಲಾಗಿದೆ. ರಾಷ್ಟ್ರೀಯ ಕ್ಷಿಪಣಿ ರಕ್ಷಣಾ ಯೋಜನೆ, 'ಕೇಡಿ' ದೇಶಗಳಾದ ಉ.ಕೋರಿಯಾ, ಇರಾನ್, ಇರಾಕ್‌ಗಳು 'ಖಂಡಾಂತರ ಕ್ಷಿಪಣಿ' ತಯಾರಿಸಿ ಅಮೆರಿಕವನ್ನು ಬೆದರಿಸದಂತೆ 'ರಕ್ಷಣೆ' ಅಂತೆ! ಈಗಾಗಲೇ ಸುಮಾರು 880 ಶತಕೋಟಿ ಡಾಲರು ಈ ಯೋಜನೆ ಮೇಲೆ ಖರ್ಚು ಮಾಡಿದ್ದು, ಇನ್ನೊಂದು ಕನಿಷ್ಠ 60 ಶತಕೋಟಿ ಡಾಲರುಗಳನ್ನು ಖರ್ಚು ಮಾಡಬೇಕಾಗಿದೆ.

ಏಳು ಸಾವಿರ ಕ್ಷಿಪಣಿಗಳನ್ನು ಹೊಂದಿರುವ ಅಮೆರಿಕ ಕೆಲವೇ ಬೆರಳೆಣಿಕೆಯಷ್ಟು ಕ್ಷಿಪಣಿ ಹೊಂದಿರುವ ಇರಾನ್, ಇರಾಕ್ ಮತ್ತು ಉ.ಕೊರಿಯಗಳು ಬೆದರಿಕೆ ಹಾಕುತ್ತಿವೆ. ಅದು ತತ್‌ಕ್ಷಣದ ಬೆದರಿಕೆ ಅಂತೆ' ಕ್ಷಿಪಣಿ 'ರಕ್ಷಣಾ' ಯೋಜನೆಯ ಉದ್ದೇಶವಿಷ್ಟೆ. 'ಶತ್ರು'ಗಳು ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಹಾರಿಸಿದ ಖಂಡಾಂತರ ಕ್ಷಿಪಣಿಗಳು ಅಮೆರಿಕದ ನೆಲ ಮುಟ್ಟುವ ಮೊದಲೇ, ಪ್ರತಿ-ಕ್ಷಿಪಣಿಗಳನ್ನು ಬಳಸಿ 'ನಾಶ' ಮಾಡುವುದು. ಆದರೆ ಇದಕ್ಕೆ ಬೇಕಾದ ತಂತ್ರಜ್ಞಾನ ಭವಿಷ್ಯದಲ್ಲೂ ಸಾಧ್ಯವಿರುವಂತೆ ಕಾಣುವುದಿಲ್ಲ ಎಂದು ಹೆಚ್ಚಿನ ಪರಿಣತರ ವಿಶ್ಲೇಷಣೆ. ಅಂತರಿಕ್ಷದಲ್ಲಿ ಹಲವಾರು ವಸ್ತುಗಳ 'ಶತ್ರು' ಕ್ಷಿಪಣಿಯನ್ನು 'ಗುರುತಿಸುವುದು' ಕಷ್ಟ ಸಾಧ್ಯ. ಇಂತಹ ರಕ್ಷಣಾ ವ್ಯವಸ್ಥೆಯನ್ನು ಬರಿಯ ಎತ್ತರದಲ್ಲಿ ಹಾರಿಬರುವ ಬಲೂನುಗಳಿಂದ, 'ಫೂಲ್' ಮಾಡಬಹುದು. ಇದಲ್ಲದೆ ಕ್ಷಿಪಣಿಯನ್ನು ತಡೆಯುವ 'ಪ್ರತಿಕ್ಷಿಪಣಿ' ಅಷ್ಟೇ ಆಗದ ಹೋಗದ ಮಾತು. ಈ ಎರಡು ಠುಸ್ಸೆಂದ ಪ್ರಯೋಗಗಳು ಇವನ್ನೇ ಎತ್ತಿ ತೋರಿಸಿವೆ, ಎಂಬುದು ಕಾರ್ಯಕ್ರಮದ ಅಸಂಖ್ಯಾತ ಟೀಕಾಕಾರರ ವಾದ.

ಅದೇನೇ ಇರಲಿ ಅಮೆರಿಕನ್ ಸರ್ಕಾರ ಈ ಕಾರ್ಯಕ್ರಮವನ್ನು ಭರದಿಂದ ಮುಂದುವರೆಸುತ್ತಿದೆ. ಅದರ ಉದ್ದೇಶ ಇಂತಹ 'ರಕ್ಷಣೆ' ಸಾಧ್ಯವಾದರೆ, ಮೊದಲ ದಾಳಿಯನ್ನು ಸುಲಭವಾಗಿ ಮಾಡಬಹುದಲ್ಲ ಅಂತ. ಅಲ್ಲದೆ ಈ ಕಾರ್ಯಕ್ರಮ ಬರಿಯ 'ಗುರಾಣಿ'ಯಂತೆ ರಕ್ಷಣಾತ್ಮಕವಾದದ್ದು. ಆದರೆ 'ಗುರಾಣಿ' ಯಾವಾಗಲೂ ಕತ್ತಿ ಹಿಡಿದು ಹೋರಾಡಲು ಹೊರಟಾಗ ಮಾತ್ರ ಅಗತ್ಯ ಬೀಳುವುದು. ಅಂತ ಅತ್ಯಂತ ಪ್ರಾಚೀನ ಉತ್ಪಾದನಾ ವ್ಯವಸ್ಥೆ ಇರುವ ಆದಿವಾಸಿಗಳಗೂ ಗೊತ್ತು. ಆದ್ದರಿಂದ ಈ 'ಗುರಾಣಿ' ಕತ್ತಿ ಝಳಪಿಸಲು ಅನುವು ಮಾಡಿಕೊಡುವಂಥಹದು. ಅಂದರೆ ಈಗ ಅಮೆರಿಕಕ್ಕೆ 'ಕ್ಷಿಪಣಿ' ದಾಳಿ ಮಾಡಿದರೆ ಅದಕ್ಕೆ ಪ್ರತಿ ಕ್ಷಿಪಣಿ ದಾಳಿ ಬರಬಹುದು ಎಂಬ ಭಯ ಇದೆ. ಇಂತಹ 'ಗುರಾಣಿ' ಇದ್ದರೆ ಈ ಭಯವಿರುವುದಿಲ್ಲ. ಇದಲ್ಲದೆ ಅಂತಹ ಅಸ್ತ್ರ ಮಾಡಲಿಕ್ಕೆ ಆಗದೆ ಹೋದರೂ ಅಮೆರಿಕದ 'ಶಸ್ತ್ರಾಸ್ತ್ರ ಕೈಗಾರಿಕಾ-ಸಂಕೀರ್ಣ'ದ ಲಾಭವಂತೂ ಹೆಚ್ಚು ಮಾಡಬಹುದಲ್ಲ.



ಅಮೆರಿಕದ ಈ ನಿರ್ಧಾರ ಈವರೆಗಿನ ಎಲ್ಲಾ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದಗಳನ್ನು ತಲೆಕೆಳಗೆ ಮಾಡಿದೆ. 1972 ರ ಕ್ಷಿಪಣಿ-ನಿಯಂತ್ರಣ ಸಿಟಿಬಿಟಿ ಇತ್ಯಾದಿ ಒಪ್ಪಂದಗಳನ್ನು ಅಮೆರಿಕ ಉಲ್ಲಂಘಿಸಿದೆ. ರಶ್ಯಾ ಮತ್ತು ಚೀನಾಗಳು ಜಂಟಿಯಾಗಿ ಈ ಕ್ರಮವನ್ನು ಟೀಕಿಸಿವೆ. ಅಮೆರಿಕ ತನ್ನ ದೇಶವನ್ನು ಮಾತ್ರ ಕ್ಷಿಪಣಿ ದಾಳಿಯಿಂದ ರಕ್ಷಿಸುವ, ಯುರೋಪಿನ ರಕ್ಷಣೆ ಕೆಲಸ ಬಿಟ್ಟುಕೊಟ್ಟಿದೆ ಎಂದು ಯುರೋಪಿಯನ್ ನಾಯಕರೂ ಟೀಕಿಸಿದ್ದಾರೆ. ಒಟ್ಟಾರೆಯಾಗಿ ಅಮೆರಿಕದ ಈ ಪ್ರಯತ್ನದ ಫಲವಾಗಿ, ಇದಕ್ಕೆ ಹಲವು ದೇಶಗಳು ಇಂತಹುದೇ ಕಾರ್ಯಕ್ರಮ ಹಾಕಿ ಹೊಸ ಶಸ್ತ್ರಾಸ್ತ್ರ ಪೈಪೋಟಿ ಬೆಳೆಯುವ ಅಪಾಯ ಇದೆ. ವಿಶ್ವಶಾಂತಿಗೆ ತೀವ್ರ ಅಪಾಯ ಕಾದಿದೆ.



ಇಂಡೋನೇಶ್ಯಾದ ಸರ್ವಾಧಿಕಾರಿಯಾಗಿದ್ದ ಸುಹಾರ್ತೋನ ಪ್ರತಿಕೃತಿ ದಹನ

ಅಮೆರಿಕನ್ ಸಾಮ್ರಾಜ್ಯಶಾಹಿಯ ನೆರವಿನಿಂದ 32 ವರ್ಷಗಳ ಕಾಲ ಇಂಡೋನೇಶ್ಯಾದ ಮಿಲಿಟರಿ ಸರ್ವಾಧಿಕಾರಿಯಾಗಿದ್ದ ಸುಹಾರ್ತೋವಿನ - ರಾಕ್ಷಸನಂತ ಕೋರೆದಾಡೆಗಳೊಂದಿಗೆ ರೂಪಿಸಿದ್ದ ಪ್ರತಿಕೃತಿಯನ್ನು ಸುಡುತ್ತಿರುವುದು. ಇಂಡೋನೇಶ್ಯಾದ ಜನಸಾಮಾನ್ಯರ ಬದುಕನ್ನು ಸುಲಿದು ಅವನು ಮತ್ತು ಅವನ ಕುಟುಂಬ ಗಳಿಸಿದ 2,02,500 ಕೋಟಿ ರೂ. ನಷ್ಟು ಅಕ್ರಮ ಸಂಪತ್ತಿಗಾಗಿ ಶಿಕ್ಷೆ ನೀಡಬೇಕೆಂದು ಸುಹಾರ್ತೋವಿನ ಮನೆಯಿಂದ ಮೆರವಣಿಗೆ ಹೊರಟ ವಿದ್ಯಾರ್ಥಿಗಳು ಒತ್ತಾಯಿಸಿದರು. ಅವನನ್ನು ಅಧಿಕಾರದಿಂದ ಕಿತ್ತುಹಾಕಿದ್ದು ಹಾಗೂ ಭ್ರಷ್ಟಾಚಾರದ ಆರೋಪದ ವಿಚಾರಣೆಗೆ ಗುರಿಪಡಿಸಿದ್ದು ವಿದ್ಯಾರ್ಥಿಗಳೂ ಸೇರಿದಂತೆ ಜನರು ನಡೆಸಿದ ಚಳುವಳಿಯ ಪರಿಣಾಮವೇ ಎಂದು ನೆನಪಿಸಿಕೊಳ್ಳಬಹುದು.

50 ವರ್ಷ ಕಳೆದರೂ ಮಾಸದ ನೆನಪು, ಮರೆಯದ ದುಃಖ

ಕೊರಿಯನ್ ಯುದ್ಧದ ಆರಂಭದಲ್ಲಿ 19650 ರ ಜುಲೈ 26 ರಿಂದ 28 ರ ನಡುವೆ ಅಮೆರಿಕನ್ ಸೈನ್ಯ ರೈಲ್ವೆ ಸೇತುವೆಯೊಂದರ ಬಳಿ 300 ಜನ ನಾಗರಿಕರು ಪ್ರಾರ್ಥನೆ ಸಲ್ಲಿಸುತ್ತಿದ್ದಾಗ ಕೊಂದು ಹಾಕಿದ ಭೀಕರ ಸಾಮೂಹಿಕ ಹತ್ಯೆಯ 50ನೇ ವಾರ್ಷಿಕ ದಿನಾಚರಣೆಯಂದು ದುಃಖಿಸುತ್ತಿರುವ ಕೊರಿಯನ್ ಮಹಿಳೆಯರು. ಸ್ಥಳ: ನೊಗನ್‌ರಿ(ದ.ಕೊರಿಯಾ)



ಮೂರು ವರ್ಷಕ್ಕೊಮ್ಮೆ ಕನಿಷ್ಟ ವೇತನ ಪರಿಷ್ಕರಿಸಿ ಎಲ್ಲರಿಗೂ ಸಮಾನ ತುಟ್ಟಿಭತ್ಯೆ ನೀಡಿ

ಸರ್ಕಾರ ಅನುಸೂಚಿತ ಉದ್ಯಮಗಳಿಗೆ "ಕನಿಷ್ಟ ವೇತನ ಕಾಯಿದೆ 1948" ರ ಪ್ರಕಾರ ಪ್ರತಿ ವರ್ಷಕ್ಕೊಮ್ಮೆ ಕನಿಷ್ಟ ವೇತನವನ್ನು ಪುನರ್ ವಿಮರ್ಶೆ ಮಾಡಬೇಕು. ಆದರೆ ಸರ್ಕಾರ ಇಂದು. ಯಾವುದೇ ಅನುಸೂಚಿತ ಉದ್ಯಮಗಳಿಗೆ ಕನಿಷ್ಟ ವೇತನ ಕಾಯಿದೆ ಪ್ರಕಾರ ಪ್ರತಿ 3 ವರ್ಷಕ್ಕೊಮ್ಮೆ ಕನಿಷ್ಟ ವೇತನ ಪುನರ್ ವಿಮರ್ಶೆ ಮಾಡುತ್ತಿಲ್ಲ. ಕಾಫಿ ಕ್ಯೂರಿಂಗ್ ಉದ್ಯಮಕ್ಕೆ 1986 ರಿಂದ ಕನಿಷ್ಟ ವೇತನ ಪುನರ್ ವಿಮರ್ಶೆ ಮಾಡಿರುವುದಿಲ್ಲ ಅನುಸೂಚಿತ ಉದ್ಯಮಕ್ಕೆ ಪ್ರತಿ 3 ವರ್ಷಕೊಮ್ಮೆ ಕನಿಷ್ಟ ವೇತನ ಪುನರ್ ವಿಮರ್ಶೆ ಮಾಡಬೇಕೆಂಬ ಸುಪ್ರಿಂ ಕೋರ್ಟ್ ತೀರ್ಪು ಇದೆ.

ಅನುಸೂಚಿತ ಉದ್ಯಮಕ್ಕೆ ಸರ್ಕಾರ ಬೆಲೆ ಏರಿಕೆ ಸರಾಸರಿ ಆಧಾರದಲ್ಲಿ ತುಟ್ಟಿಭತ್ಯೆ ನಿಗದಿ ಮಾಡಿರುತ್ತದೆ. ಆದರೆ ಈ ತುಟ್ಟಿಭತ್ಯೆ ದರ ಪ್ರತಿ ಉದ್ಯಮಕ್ಕೆ ವಿವಿಧ ದರದಲ್ಲಿ ಇರುತ್ತದೆ. ಉದಾಹರಣೆಗೆ ಪ್ಲಾಂಟೇಷನ್ ಉದ್ಯಮಕ್ಕೆ ಪ್ರತಿ ಪಾಯಿಂಟ್‌ಗೆ 2 ಪೈಸೆ ದರವಿದೆ. ಸಿನಿಮಾ ಉದ್ಯಮಕ್ಕೆ 5 ಪೈಸೆ ದರವಿರುತ್ತದೆ. ಇಂಜಿನಿಯರಿಂಗ್ ಉದ್ಯಮಕ್ಕೆ 3.5 ಪೈಸೆ ದರವಿರುತ್ತದೆ. ಆದರೆ ಇಂದು ಬೆಲೆ ಏರಿಕೆ ಎಲ್ಲಾ ಉದ್ಯಮದಲ್ಲಿ ದುಡಿಯುವ ಕಾರ್ಮಿಕರಿಗೆ ಏಕ ರೀತಿಯಲ್ಲಿರುತ್ತದೆ.

ಎಲ್ಲಾ ಅನುಸೂಚಿತ ಉದ್ಯಮಕ್ಕೆ ಶಾಸನ ಪ್ರಕಾರ ಪ್ರತಿ 3 ವರ್ಷಕ್ಕೊಮ್ಮೆ ಕನಿಷ್ಟವೇತನ ಪುನರ್ ವಿಮರ್ಶೆ ಮಾಡಬೇಕೆಂದು ಹಾಗೂ ಎಲ್ಲಾ ಅನುಸೂಚಿತ ಉದ್ಯಮಕ್ಕೆ ಏಕರೂಪವಾಗಿ ಪ್ರತಿ ಪಾಯಿಂಟ್‌ಗೆ 5 ಪೈಸೆ ದರದಲ್ಲಿ ತುಟ್ಟಿಭತ್ಯೆ ನಿಗದಿ ಮಾಡಬೇಕೆಂದು ನಿಗದಿಮಾಡಿರುವ ಕನಿಷ್ಟ ವೇತನವನ್ನು ಜಾರಿಗೊಳಿಸಿ ಕಾರ್ಮಿಕರಿಗೆ ಕನಿಷ್ಟ ವೇತನ ದೊರಕುವಂತೆ ಪರಿಣಾಮಕಾರಿ ಕ್ರಮಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

ಬಿಪಿಎಲ್ ಕಾರ್ಮಿಕರ ಮೇಲಿನ ಮೊಕದ್ದಮೆ ವಾಪಸು ಪಡೆಯಿರಿ

ಬಿ.ಪಿ.ಎಲ್. ಕಾರ್ಖಾನೆ ರಾಜ್ಯದ ಇಲೆಕ್ಟ್ರಾನಿಕ್ ಉಧ್ಯಮಗಳಲ್ಲಿ ಒಂದು ದೊಡ್ಡ ಕಾರ್ಖಾನೆಯಾಗಿದೆ. ಇದು ವರ್ಷಕ್ಕೆ 3-4 ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತದೆ. ಅಧಿಕಾರಿಗಳೂ ಸೇರಿ 8-9 ಸಾವಿರ ಕಾರ್ಮಿಕರು ದುಡಿಯುತ್ತಿದ್ದಾರೆ. ಆಡಳಿತ ವರ್ಗ ಈ ಕಾರ್ಖಾನೆಯಲ್ಲಿ ಕಾರ್ಮಿಕ ಸಂಘಟನೆ ಬರಬಾರದೆಂಬ ಉದ್ದೇಶದಿಂದ ಬೆಂಗಳೂರಿನ ಹೊರ ವಲಯದಲ್ಲಿ ಮತ್ತು ರಾಜ್ಯದ ಇತರೆಡೆ ಕಾರ್ಖಾನೆಗಳನ್ನು ಸ್ಥಾಪಿಸಿಕೊಂಡು 20-25 ವರ್ಷಗಳಿಂದ ಕಾರ್ಮಿಕರ ಸಂಘಟನೆ ಬರದಂತೆ ನೋಡಿಕೊಂಡಿತ್ತು.


ಇಲೆಕ್ಟ್ರಾನಿಕ್ ವಲಯದ ಕಾರ್ಖಾನೆಯಾದ ಬಿ.ಇ.ಎಲ್.ನಲ್ಲಿ ಕಾರ್ಮಿಕರಿಗೆ ದೊರೆಯುವ ಸಂಬಳದ ಕೂಡಾ ಬಿ.ಪಿ.ಎಲ್. ಕಾರ್ಮಿಕರಿಗೆ ಸಿಗುವುದಿಲ್ಲ. ಈ ಹಿನ್ನೆಲೆಯಲ್ಲಿ ಬಿ.ಪಿ.ಎಲ್. ಕಾರ್ಮಿಕರು ಸಂಬಳ ಏರಿಕೆ ಮತ್ತಿತರ ಸೌಲಭ್ಯಕ್ಕಾಗಿ ಹಾಗೂ ಶೋಷಣೆಯ ವಿರುದ್ಧ ಹೋರಾಡಲು ಸಂಘಟನೆಯನ್ನು ರಚಿಸಿತು. ಇದನ್ನು ಸಹಿಸಲಾರದ ಆಡಳಿತ ವರ್ಗವು ಜೆ.ಹೆಚ್. ಪಟೇಲ್ ಸರ್ಕಾದ ಸಹಾಯವನ್ನು ಉಪಯೋಗಿಸಿ ಕಾರ್ಮಿಕರ ವಜಾ, ಅಮಾನತು ಇತ್ಯಾದಿ ಕ್ರಮಗಳನ್ನು ಕೈಗೊಂಡಿತು. ಈ ದಬ್ಬಾಳಿಕೆಗಳಿಗೆ ಜಗ್ಗದೆ ಪ್ರತಿಭಟನೆಗಳನ್ನು ನಡೆಸಿದ ಕಾರ್ಮಿಕರನ್ನು ಬಗ್ಗು ಬಡಿಯಲು ಪೋಲೀಸರು ಕೊಲೆ ಮೊಕದ್ದಮೆಗಳನ್ನು ಒಳಗೊಂಡು ಅನೇಕ ಮೊಕದ್ದಮೆಗಳನ್ನು ಕಾರ್ಮಿಕರ ಮೇಲೆ ಮತ್ತು ಅವರ ನಾಯಕರ ಮೇಲೆ ದಾಖಲಿಸುವಂತೆ ಆಡಳಿತ ವರ್ಗವು ಸರ್ಕಾರದ ಮೇಲೆ ತನ್ನ ಪ್ರಭಾವವನ್ನು ಉಪಯೋಗಿಸಿತು.

ಬಿ.ಪಿ.ಎಲ್. ಆಡಳಿತ ವರ್ಗದ ಈ ಎಲ್ಲಾ ಕಾರ್ಮಿಕ ವಿರೋಧಿ ನೀತಿಗಳನ್ನು ಸಮ್ಮೇಳನವು ಖಂಡಿಸಿದೆ. ಆಡಳಿತವರ್ಗವು ಇನ್ನಾದರೂ ಕಣ್ಣು ತೆರೆದು ಮಾತುಕತೆಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸಬೇಕೆಂದೂ, ತನ್ನ ಜಾಹೀರಾತುಗಳಲ್ಲಿ ಹೇಳುವ "ವಿ ಬೀಲೀವ್ ಇನ್ ದಿ ಬೆಸ್ಟ್" ಎಂಬ ಘೋಷಣೆಯನ್ನು ಕಾರ್ಮಿಕರ ವಿಷಯದಲ್ಲೂ ಅನ್ವಯಿಸಬೇಕೆಂದೂ ಈ ಸಮ್ಮೇಳನವು ಒತ್ತಾಯಿಸಿದೆ.

ರಾಜ್ಯ ಸರ್ಕಾರವು ಈ ಕಾರ್ಮಿಕರಿಗೆ ನ್ಯಾಯ ದೊರಕಿಸಿ ಕೊಡಲು ಕ್ರಮ ಕೈಗೊಳ್ಳಬೇಕೆಂದೂ ಬಿ.ಪಿ.ಎಲ್. ಕಾರ್ಮಿಕರ ಮೇಲಿರುವ ಎಲ್ಲಾ ಮೊಕದ್ದಮೆಗಳನ್ನೂ ಕೊಲೆ ಮೊಕದ್ದಮೆಗಳನ್ನೂ ಒಳಗೊಂಡು-ವಾಪಾಸು ತೆಗೆದುಕೊಳ್ಳಬೇಕೆಂದೂ ಈ ಸಮ್ಮೇಳನವು ಆಗ್ರಹಿಸಿದೆ ಒತ್ತಾಯಿಸುತ್ತದೆ.

ಬಿ.ಪಿ.ಎಲ್. ಕಾರ್ಮಿಕರು ಸಿಐಟಿಯು ಮಾರ್ಗದರ್ಶನದಲ್ಲಿ ಐಕ್ಯಹೋರಾಟಗಳನ್ನು ನಡೆಸಬೇಕೆಂದೂ ರಾಜ್ಯದ ಸಿಐಟಿಯು ನೇತೃತ್ವದ ಎಲ್ಲಾ ಸಂಘಗಳೂ ಈ ಹೋರಾಟಕ್ಕೆ ಸಂಪೂರ್ಣ ಸೌಹಾರ್ದ ಬೆಂಬಲ ನೀಡಬೇಕೆಂದೂ ಈ ಸಮ್ಮೇಳನವು ಕರೆ ನೀಡಿದೆ.

ಸಿಐಟಿಯು ಸಮ್ಮೇಳನದ ನಿರ್ಣಯಗಳು



ಸಾರ್ವಜನಿಕ ಉದ್ಯಮಗಳ ಖಾಸಗೀಕರಣವನ್ನು ಕಾರ್ಮಿಕರು ನಿರಾಕರಿಸುತ್ತಾರೆ

ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಸರ್ಕಾರವು ನಾಚಿಕೆ, ಭಯಗಳನ್ನು ತೂರೆದು ಎರಡನೇ ತಲೆಮಾರಿನ ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ ಈ ವಲಯವನ್ನು ನಾಶಗೊಳಿಸಲು ಕಂಕಣಬದ್ಧವಾಗಿದೆ. ಅಂತರ ರಾಷ್ಟ್ರೀಯ ಹಣಕಾಸು ನಿಧಿ ವಿಶ್ವ, ವ್ಯಾಪಾರ ಸಂಘಟನೆ ಹಾಗೂ ಜಾಗತಿಕ ಬ್ಯಾಂಕುಗಳ ನಿರ್ದೇಶನದ ಮೇರೆಗೆ ದೇಶಿಯ ಉತ್ಪಾದನೆ ಹಾಗೂ ಪೂರೈಕೆಗಳ ಮೇಲೆ ಹೆಚ್ಚು ಸುಂಕ ಹಾಗೂ ತೆರಿಗೆಗಳನ್ನು ಹೇರಿ ಆಮದಿಗೆ ಅಬಕಾರಿ ಶುಲ್ಕವನ್ನು ಕಡಿತಗೊಳಿಸಿ, ಮತ್ತಷ್ಟು ಸವಲತ್ತುಗಳನ್ನು ಕೊಟ್ಟು ದೇಶಿಯ ಕೈಗಾರಿಕೆಗಳು ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದನ್ನು ಅಸಾಧ್ಯವಾಗಿಸಿದೆ. 90ರ ದಶಕದಲ್ಲಿ ಅಂದಿನ ಕಾಂಗ್ರೇಸ್ ಸರ್ಕಾರ ಪ್ರಾರಂಭಿಸಿದ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಆರ್ಥಿಕ ನೀತಿಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ವೇಗವನ್ನು ಪಡೆದುಕೊಳ್ಳುತ್ತ ಪ್ರತಿನಿತ್ಯ ಹಲವಾರು ಕೈಗಾರಿಕೆಗಳು ಜಾಗತೀಕರಣದ ಕಪಿಮುಷ್ಟಿಯಲ್ಲಿ ಬೀಳುತ್ತಿದೆ.

ಸರ್ಕಾರದ ನಿರ್ವಹಣೆಯಲ್ಲಿದ್ದ ವಿದ್ಯುತ್ ಹಾಗೂ ಪೆಟ್ರೋಲಿಯಂ ಉತ್ಪಾದನೆ ಮತ್ತು ಪೂರೈಕೆಗಳಲ್ಲಿ ನೂರಕ್ಕೆ ನೂರರಷ್ಟು ಬಂಡವಾಳವನ್ನು ತೊಡಗಿಸಲು ಬಹುರಾಷ್ಟ್ರೀಯ ಉದ್ದಿಮೆಗಳಿಗೆ ತೆರೆದಿಡುವ ನೀತಿಯಾಗಿದ್ದು ಮೂಲವಸ್ತುಗಳ ಉತ್ಪಾದನಾ ವಲಯವನ್ನು ಖಾಸಗೀ ಅವರಿಗೆ ನೀಡುತ್ತಿರುವ ಔತಣಕೂಟದಂತಾಗಿದೆ. ಸಾರ್ವಜನಿಕ ರಂಗದಲ್ಲಿನ ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್ ಇಂಡಿಯಾ ಸಂಸ್ಥೆಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಸೇರಿದಂತೆ ಖಾಸಗೀಯವರಿಗೆ ವಹಿಸಿಕೊಡುವ ಕೆಲಸ ಜಾರಿಯಾಗಿದೆ. ಈ ಎರಡರ ಆಡಳಿತವನ್ನು ಖಾಸಗೀಯವರ ಒಡೆತನದಲ್ಲಿ ಒಂದು ಮುಖ್ಯ ಉದ್ದಿಮೆಗೆ ಹೆಚ್ಚಿನ ಬಂಡವಾಳ, ಪಾಲುಗಾರಿಕೆಗೆ ಕೊಡುವ ನಿರ್ಧಾರವಾಗಿದೆ. ಹಾಗೆಯೇ ವಿಮಾನ ನಿಲ್ದಾಣಗಳ ಆಡಳಿತವನ್ನೂ ಸಹ ಖಾಸಗೀ ವಲಯಕ್ಕೆ ವಹಿಸಿಕೊಡುವ ನಿರ್ಧಾರವಾಗಿದೆ. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಲು ಜಾಗತೀಕ ಸಲಹೆಗಾರರನ್ನು ನೇಮಿಸಿ ಖಾಸಗೀಯವರಿಗೆ ಮಾರಾಟ ಮಾಡುವ ಪ್ರಕ್ರಿಯೆಗೆ ವಿದೇಶಿಯರನ್ನು ತೊಡಗಿಸುತ್ತಿದೆ.

ಬ್ಯಾಂಕಿಂಗ್ ಹಾಗೂ ವಿಮಾ ವಲಯಗಳನ್ನು ಈಗಾಗಲೇ ಬಹು ರಾಷ್ಟ್ರೀಯ ಉದ್ದಿಮೆಗಳ ಪಾಲುದಾರರಿಗೆ ಅವಕಾಶ ನೀಡುವ ಬ್ಯಾಂಕಿಂಗ್ ಹಾಗೂ ವಿಮಾ ನಿಯಂತ್ರಣ ಮಸೂದೆಗಳು ಲೋಕಸಭೆಯಲ್ಲಿ ಅಂಗೀಕಾರವಾಗಿದೆ. ಈ ವಲಯಗಳಿಂದ ಗ್ರಾಮೀಣ ಕ್ಷೇತ್ರಗಳಲ್ಲಿ ಆಗುತ್ತಿದ್ದ ಅಭಿವೃದ್ದಿಗೆ ಹೊಡೆತ ಉಂಟಾಗುತ್ತದೆ. ಈ ರೀತಿಯಾದಂತಹ ಆರ್ಥಿಕ ಸುಧಾರಣೆಗಳ ಜಾರಿಯಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲದೆ ನಗರ ಪ್ರದೇಶಗಳಲ್ಲಿನ ಸಾಮಾನ್ಯ ಜನರ ಜೀವನದ ಬದುಕಿನ ಮೇಲೆ ಆಗುತ್ತಿರುವ ಪ್ರಭಾವವನ್ನು ನಾವೀಗಲೇ ನೋಡುತ್ತಿದ್ದೇವೆ. ಅನೇಕ ಕೃಷಿಕರು ತಮ್ಮ ಉತ್ಪನ್ನಗಳನ್ನು ವ್ಯವಸಾಯದ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಮಾರುವ ಸ್ಥಿತಿಗೆ ಬಂದಿದ್ದು ಅವರ ಬದುಕು ನರಕವಾಗಿದೆ. ಅತ್ಮಹತ್ಯೆಗಳಿಗೂ ಕಾರಣವಾಗಿದೆ.

ವಿದ್ಯುತ್ ಉತ್ಪಾದನೆಯನ್ನು ಬಹುರಾಷ್ಟ್ರೀಯ ಉದ್ದಿಮೆಗಳಾದ ಎನ್ರಾನ್ ಹಾಗೂ ಕ್ರೋಜೆಂಟ್ರಿಕ್ಸ್‌ಗಳಿಗೆ ವಹಿಸಿದ್ದು ವಿದ್ಯುತ್ ಬೆಲೆಯೂ ಸಹ ಹೆಚ್ಚಿದ್ದೂ ರಾಜ್ಯ ವಿದ್ಯುತ್ ಪ್ರಸರಣ ನಿಗಮಗಳು ಅವರಿಂದ ಪಡೆದಂತಹ ವಿದ್ಯುತ್ ಪೂರೈಕೆಯ ಹಣಕ್ಕೆ ರಾಜ್ಯ ಸರ್ಕಾರಗಳಿಂದ ಪ್ರತಿ ಯಾದ ಹೊಣೆಯನ್ನು ಹೊರಬೇಕಾಗಿದೆ. ಇಷ್ಟೇ ಅಲ್ಲದೆ ಭಾರತೀಯ ಪ್ರವಾಸ ನಿಗಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚತಾರಾ ಹೋಟೆಲ್‌ಗಳನ್ನು ಸಹ ಖಾಸಗೀ ವಲಯಕ್ಕೆ ವಹಿಸಿಕೊಡುವ ನಿರ್ಣಯವಾಗಿದೆ. ಷೇರುವಿಕ್ರಯದ ಮೂಲಕ ತೀವ್ರಗತಿಯಲ್ಲಿ ನಡೆಯುತ್ತಿರುವಂತಹ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣವು ಅವುಗಳ ಕಾರ್ಯ ನಿರ್ವಹಣೆಯ ಅಸಮರ್ಥತೆಯಿಂದ ಮಾಡುತ್ತಾ ಇದೆ. ಎಂದು ಹೇಳುತ್ತಿರುವ ವಾದವು ತಪ್ಪಾಗಿದ್ದು, ಖಾಸಗೀಕರಣದ ಕಬಂದ ಬಾಹುವು ನವರತ್ನ ಉದ್ದಿಮೆಗಳು, ಮೂಲವಸ್ತುಗಳ ಉತ್ಪಾದನಾ ವಲಯವೂ, ಹಾಗೂ ಲಾಭದಾಯಕ ಉದ್ದಿಮೆಗಳು ಖಾಸಗೀ ಹಾಗೂ ಬಹುರಾಷ್ಟ್ರೀಯ ಉದ್ದಿಮೆಗಳ ಪಾಲಾಗಲಿವೆ.

ಸಿಐಟಿಯು 8ನೇ ರಾಜ್ಯ ಸಮ್ಮೇಳನವು ಸಾರ್ವಜನಿಕ ಕ್ಷೇತ್ರದ, ಉದ್ಯಮಗಳ ಖಾಸಗೀಕರಣ ನೀತಿಯನ್ನು ಕೈಬಿಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ ಸರ್ಕಾರದ ಖಾಸಗೀಕರಣ ನೀತಿಯನ್ನು ವಿರೋಧಿಸಿ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಐಕ್ಯತೆಯಿಂದ ನಡೆಸುತ್ತಿರುವ ಹೋರಾಟದಲ್ಲಿ ಇದು ಕಾರ್ಮಿಕ ವರ್ಗದೊಡನೆ ಖಾಸಗೀಕರಣ ನೀತಿಗೆ ತಡೆಯಾಗಲು ಶ್ರಮಿಸಬೇಕೆಂದು ಕರೆ ನೀಡಿದೆ.

ಬಂದ್, ಹರತಾಳ ನಿಷೇಧ........

ಪುಟ 5 ರಿಂದ

ಚುನಾಯಿತ ಸರ್ಕಾರವನ್ನು ವಜಾ ಮಾಡಿದ ಕ್ರಮವನ್ನು ಪ್ರತಿಭಟಿಸಿ ಸಿಪಿಐ(ಎಂ) ಪಕ್ಷವು 1998 ಸೆಪ್ಟೆಂಬರ್ 23 ರಂದು ಕೇರಳದಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತ್ತು. ಇತ್ತೀಚೆಗೆ ತಾನೆ ರಣಬೀರ ಸೇನೆಯು ಬಿಹಾರದಲ್ಲಿ ದಲಿತರು ಮತ್ತು ಹಿಂದುಳಿದವರ ಮೇಲೆ ನಡೆಸಲಾದ ಕ್ರೂರ ಹತ್ಯೆಯನ್ನು ಪ್ರತಿಭಟಿಸಿ ಬಿಹಾರ ಬಂದ್‌ಗೆ ಕರೆ ನೀಡಲಾಗಿತ್ತು. ಇದಕ್ಕೂ ಮೊದಲು ಎನ್.ಪಿ.ಎಂ.ಓ. ನೇತೃತ್ವದಲ್ಲಿ ಮೇ 11 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಹೀಗೆ ಅಸಂಖ್ಯಾತ ಪ್ರತಿಭಟನಾ ಪ್ರದರ್ಶನಗಳು ದೇಶಾದ್ಯಂತ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ನಡೆಯುತ್ತಲೇ ಇವೆ.

ಆದರೆ ನ್ಯಾಯಾಂಗವು ಈ ವಿಷಯದಲ್ಲಿ ಸಂಕುಚಿತವಾಗಿದೆ. ಮತ್ತು ಪ್ರಜಾಪ್ರಭುತ್ವ ವಿರೋಧಿಯಾಗಿ ವರ್ತಿಸುತ್ತಿದೆ. ಕೇರಳ ಹೈಕೋರ್ಟ್‌ನ ತೀರ್ಮಾನವನ್ನು ಆಧಾರವಾಗಿಟ್ಟುಕೊಂಡು ಎಲ್ಲವನ್ನು ತೀರ್ಮಾನಿಸುತ್ತಿವೆ. ಇನ್ನು ಜನರ ಪ್ರತಿಭಟನಾ ಪ್ರದರ್ಶನಗಳನ್ನು ಅಸಂವಿಧಾನಿಕ ಎಂದು ನಿಷೇಧಿಸಲು ಹೊರಟಿದ್ದಾರೆ. ಆದರೆ ಹಾಸ್ಯಾಸ್ಪದವೆಂದರೆ 'ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಬ್ರಿ ಮಸೀದಿ ವಿವಾದ ವಿಚಾರಣೆಯಲ್ಲಿರುವಾಗಲೇ 1992 ಲ್ಲಿ ಬಾಬ್ರಿ ಮಸೀದಿಯನ್ನೇ ನಾಶ ಮಾಡಿದರು. ಅಸಂಖ್ಯಾತ ಸಂವಿಧಾನ ವಿರೋಧಿ ಕೃತ್ಯಗಳು ದೇಶಾದ್ಯಂತ ನಿರಂತರವಾಗಿ ನಡೆದುಹೋದವು. ಸಂತೋಷವಾಗಿ ಜೀವನ ನಡೆಸುತ್ತಿದ್ದ ನಾಗರೀಕರ ಬದುಕಿನ ಹಕ್ಕಿನ ಮೇಲೆ ಧಾಳಿಗಳಾದವು. ಆದರೆ ಇವ್ಯಾವು ನ್ಯಾಯಾಲಯದ ದೃಷ್ಟಿಯಲ್ಲಿ ಅಸಂವಿಧಾನಿಕವಲ್ಲ! ಆದರೆ ಜನಸಾಮಾನ್ಯರು ತಮ್ಮ ಶಾಂತಿಯುತ ಪ್ರತಿಭಟನೆಯ ಮೂಲಕ ತಮ್ಮ ಹಕ್ಕನ್ನು ಕೇಳುತ್ತಿದ್ದರು, ಇದು ಅಸಂವಿಧಾನಿಕವಾಗುತ್ತದೆ. ಸಂಸದೀಯ ವ್ಯವಸ್ಥೆಯಡಿಯಲ್ಲಿ ಜನರನ್ನು ಅವರ ಹಕ್ಕುಗಳಿಗಾಗಿ ಸಂಘಟಿಸುವ ರಾಜಕೀಯ ಪಕ್ಷಗಳು , ಸಂಘಟಿಸುವ ಜನಪರ ಹೋರಾಟಗಳು ಕಾನೂನು ಬಾಹಿರವಾಗಿವೆ!

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷವು ನ್ಯಾಯಾಂಗದ ಅಧಿಕಾರಶಾಹಿವಾದವನ್ನು ಒಂದು ಸವಾಲಾಗಿ ತೆಗೆದುಕೊಳ್ಳಲು ತೀರ್ಮಾನಿಸಿದೆ. ಕೇರಳ ಹೈಕೋರ್ಟಿನ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ ಮತ್ತು ಚುನಾವಣಾ ಆಯೋಗಕ್ಕೂ ಸಹಾ ಸೂಕ್ತವಾಗಿ ಉತ್ತರಿಸಿದೆ.


ಆದರೆ ಅತ್ಯಂತ ಮಹತ್ವದ ಅಂಶವೆಂದರೆ ಇಂತಹ ನಿರ್ಣಯದ ವಿರುದ್ಧ ಜನಾಭಿಪ್ರಾಯವನ್ನು ದೊಡ್ಡ ರೀತಿಯಲ್ಲಿ ಸಂಗ್ರಹಿಸಿ, ಈ ರೀತಿ ಈ ಸಂಬಂಧ ಎಲ್ಲ ರಾಜಕೀಯ ಪಕ್ಷಗಳು ಒಂದು ತೀರ್ಮಾನ ಮಾಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳಿಗೆ ಅವುಗಳದ್ದೆ ಆದ ಹಕ್ಕುಗಳಿವೆ ಎಂಬುದನ್ನು ಹೇಳಬೇಕಿದೆ. ಮತ್ತು ಅಂತಹ ಹಕ್ಕುಗಳ ಮೂಲಕ ಶಾಂತಿಯುತ ಪ್ರತಿಭಟನೆಗಳನ್ನು ನಡೆಸಲು ಅವಕಾಶ ಇರಲೇಬೇಕಾಗುತ್ತದೆ. ಸಂಸದೀಯ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವ ಮೌಲ್ಯ-ಹಕ್ಕುಗಳ ರಕ್ಷಣೆಗಾಗಿ ನಿರ್ಧಾರ ಕೈಗೊಳ್ಳುವುದು ಅಗತ್ಯವಿದೆ.

ಚಿತ್ರ ವಿಮರ್ಶೆ

ಉತ್ತರಕ್ಕೂ ಇಲ್ಲ.... ದಕ್ಷಿಣಕ್ಕೂ ಇಲ್ಲ......

ಎಲ್ಲೋ ಒಂದು ಹಂತದಲ್ಲಿ ಮನಸ್ಸಿಗೆ ಹತ್ತಿರವಾಗುತ್ತಿದೆ, ನಮ್ಮ ನೋವು-ನಲಿವುಗಳಿಗೆ ಪ್ರತಿಧ್ವನಿಯಾಗುತ್ತಿದೆ ಎಂದು ಭಾವಿಸುವಷ್ಟರಲ್ಲಿ ಹಳಿ ಬದಲಿಸಿದ ರೈಲು ದೂರ ಸಾಗುವಂತೆ ಸಾಗುವ ಚಿತ್ರವೇ 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ.....

ಉದಾರೀಕರಣದ ಕರಿನೆರಳಿನ ಪ್ರಭಾವದಿಂದ ಸಂಕಷ್ಟಕ್ಕೊಳಗಾಗಿರುವ ಗ್ರಾಮೀಣ ಜನರ ಬದುಕಿನ ಮೇಲೆ ಬೆಳಕು ಚೆಲ್ಲುವ ಪ್ರಯತ್ನದಿಂದ ಮನಸ್ಸಿಗೆ ಹತ್ತಿರವಾಗುವ ಈ ಚಿತ್ರ ಆದೇ ಜಾಡಿನಲ್ಲಿ ಸಾಗದೆ ಹಳಿ ಬದಲಿಸಿದ ರೈಲಿನಂತಾಗಿದೆ.



ರಾಜ್ಯ ರೈತ ಸಂಘದ ಕಾರ್ಯಕರ್ತನಾಗಿ ಗುರುತಿಸಿ ಕೊಳ್ಳುವ ಚಿತ್ರದ ನಾಯಕ ವಿದ್ಯಾವಂತನಾದರೂ ಪಟ್ಟಣ ಸೇರುವ ವ್ಯಾಮೋಹಕ್ಕೊಳಗಾಗದೆ ಬೇಸಾಯವನ್ನು ಅವಲಂಬಿಸುತ್ತಾನೆ. ಸಾಮಾನ್ಯ ಬೆಳೆಯಿಂದ 'ಕಾಸು'ಕಾಣಲು ಸಾಧ್ಯವಿಲ್ಲವೆಂದು ಭಾವಿಸಿ ಮನೆಯವರ ವಿರೋಧದ ನಡುವೆಯೂ ಸಾಲ ಮಾಡಿ ವಾಣಿಜ್ಯ ಬೆಳೆ ಬೆಳೆಯುತ್ತಾನೆ. ಆದರೆ ತಾನು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗದೆ ಅದನ್ನು ಬೀದಿಗೆಸೆಯುವ ಪರಿಸ್ಥಿತಿ ಬರುತ್ತದೆ. ಸಾಲ ತೀರಿಸಲಾಗದ್ದಕ್ಕೆ ಮನೆ ಜಪ್ತಿಯಾಗುತ್ತದೆ. ಇದರಿಂದ ಬೇಸತ್ತ ನಾಯಕ ಊರು ಬಿಡುತ್ತಾನೆ. ಈತನಂತೆಯೇ ತಾವು ಬೆಳೆದ ಬೆಳೆಗೆ ಬೆಲೆ ಸಿಗದೆ ಅನೇಕ ರೈತರು ತಮ್ಮ ಬೆಳೆಗೆ ಬೆಂಕಿ ಹಚ್ಚುವ ಸನ್ನಿವೇಶಗಳು ಪರಿಣಾಮಕಾರಿಯಾಗಿವೆ. ಇಂತಹ ಬರ್ಬರ ಸ್ಥಿತಿಗೆ ಈಗಿನ ಉದಾರೀಕರಣ, ಜಾಗತೀಕರಣದ ನೀತಿಗಳೇ ಕಾರಣವೆಂದು ಜನಸಾಮಾನ್ಯರಿಗೆ ದೃಶ್ಯಮಾಧ್ಯಮದ ಮೂಲಕ ತಲುಪಿಸುವ ಪ್ರಯತ್ನ ಗಮನಾರ್ಹ.

ಆದರೆ ಪ್ರೇಮ ಕಥೆಯೇ ಪ್ರಧಾನವಾದ ಈ ಚಿತ್ರದಲ್ಲಿ ಈ ಅಂಶಗಳು ಪ್ರತ್ಯೇಕ ಭಾಗವಾಗಿಯೇ ಉಳಿದುಬಿಡುತ್ತವೆ. ಈ ಮಣ್ಣಿನ ಸೊಗಡಿನೊಂದಿಗೆ ಈ ಜನರ ಬದುಕು-ಬವಣೆಗಳನ್ನೇ ಪ್ರಧಾನವಾಗಿಟ್ಟುಕೊಂಡು ಅದರಲ್ಲಿ ಒಂದು ಎಳೆಯಾಗಿ ಪ್ರೇಮಕಥೆಯನ್ನು ಅಳವಡಿಸಿಕೊಂಡಿದ್ದರೆ. ಇದು ಒಂದು ಉತ್ತಮ ಚಿತ್ರವಾಗಬಹುದಿತ್ತು. ಆದರೆ ಗ್ರಾಮೀಣ ಪರಿಸರದ ಅನುಭವವಿಲ್ಲದಂತೆ ಕಾಣುವ ನಿರ್ದೇಶಕರು ಅಂತಹ ಒಂದು ಅವಕಾಶವನ್ನು ತಪ್ಪಿಸಿದ್ದಾರೆ.

ಊರು ಬಿಟ್ಟ ನಾಯಕ ರಾಜಸ್ತಾನ ಸೇರಿ ಅಲ್ಲಿನ ಒಂದು ಹುಡುಗಿಯನ್ನು ಪ್ರೇಮಿಸುತ್ತಾನೆ. ಆಕೆ ಕರ್ನಾಟಕದಲ್ಲಿಯೇ ವಾಸ ಮಾಡುವವಳಾಗಿರುತ್ತಾಳೆ. ಆಕೆಯೊಂದಿಗೆ ಊರಿಗೆ ಹಿಂದಿರುಗುವ ನಾಯಕ, ಸಾಮಾನ್ಯ ಸಿನಿಮಾ ಸೂತ್ರಗಳಂತೆ ಅನೇಕ ಸಂಕಷ್ಟಗಳನ್ನೆದುರಿಸಿ ಅವಳನ್ನು ಮದುವೆಯಾಗುವುದರೊಂದಿಗೆ ಚಿತ್ರದ ಅಂತ್ಯವಾಗುತ್ತದೆ.

ಇಂಥ 'ಪ್ರೇಮಕಥೆ'ಗಳಿಗೆ ತೀರಾ ಅಗತ್ಯವಾದ 'ಮೋಹಕ' (ಗ್ಲಾಮರಸ್)ನಟಿಯ ಕೊರತೆ; ಪ್ರಧಾನ ನಾಯಕಿಯಾದ, ಅಷ್ಟೇನೂ ಅಂದವಿಲ್ಲದ ದಿವ್ಯಪಾಲಟ್ ಪ್ರೇಕ್ಷಕರನ್ನು ನಿರಾಶೆ ಗೊಳಿಸುತ್ತಾರೆ. ಮತ್ತೊಬ್ಬ ನಾಯಕಿ ಪ್ರೇಮ ಗಮನ ಸೆಳೆಯುತ್ತಾರೆ. ರಾಜಸ್ತಾನದ ರಮ್ಯ ಹೊರಾಂಗಣದ ದೃಶ್ಯೀಕರಣ ಚೆನ್ನಾಗಿದೆ.

ನಿರ್ಮಾಪಕ-ನಾಯಕ ಯೋಗೀಶ್ವರ್‌ರವರ ವಿಶೇಷ ಕಾಳಜಿಯೇ ಈ ಚಿತ್ರದಲ್ಲಿ ಎದ್ದು ಕಾಣುತ್ತದೆ. ಮೊದಲ ಯತ್ನದಲ್ಲಿಯೇ ಸ್ವಂತ ಕಥೆಯಾಧರಿಸಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಸಿನಿಮಾ ಮಾಡುವ ಅವರ 'ಗೀಳು' ಅಚ್ಚರಿ ಮೂಡಿಸುವಂತದ್ದು ಮತ್ತು ಅವರ ಪ್ರಚಾರ ವೈಖರಿಯೂ ವಿಶೇಷವಾದದ್ದು! ಗೋಡೆ ಬರಹಗಳ ಮೂಲಕ ಮತ್ತು ಬಸ್‌ಗಳ ಮೇಲೆ ಬರೆಸುವ ಮೂಲಕ ಇಡೀ ಕರ್ನಾಟಕದ ಮೂಲೆ ಮೂಲೆಗೆ ಈ ಚಿತ್ರದ ಸುದ್ದಿಯನ್ನು ತಲುಪಿಸಿದ್ದು ಅವರ 'ವ್ಯಾಪಾರಿ' ಜಾಣ್ಮೆಯನ್ನು ತೋರಿಸುತ್ತದೆ.

ಈ ಚಿತ್ರ ಯಶಸ್ವಿಯಾದಲ್ಲಿ ಉತ್ತಮ ಪ್ರಯತ್ನಗಳಿಗೆ ಕೈ ಹಾಕಲು ಯೋಗೀಶ್ವರ್‌ಗೆ ಸ್ಫೂರ್ತಿಯಾಗಬಹುದು. ರಿಮೇಕ್ ಇಲ್ಲದೆ 'ಸ್ವಮೇಕ್' ಚಿತ್ರಗಳಿಂದ ಕನ್ನಡದ ಚಿತ್ರರಂಗ ಬೆಳವಣಿಗೆ ಕಾಣಬಹುದು. ಆದ್ದರಿಂದಲಾದರೂ ಈ ಚಿತ್ರ ಯಶಸ್ವಿಯಾಗಬೇಕು.

\- ರಾಮು

ಚಿತ್ರೋದ್ಯಮದ ಅರ್ಧವಾರ್ಷಿಕ ಪರೀಕ್ಷಾ ಫಲಿತಾಂಶದ ವಿವರ!

ಇದು ಚಿತ್ರೋದ್ಯಮದ ಅರ್ಧವಾರ್ಷಿಕ ಪರೀಕ್ಷಾ ಫಲಿತಾಂಶದ ಮೊದಲ ಕಂತು.

ಕಳೆದ ಜನವರಿಯಿಂದ ಈ ಜೂನ್ ತನಕ, ಅಂದರೆ ಕಳೆದ ಅರ್ಧವರ್ಷದಲ್ಲಿ ತೆರೆಕಂಡ ಕನ್ನಡ ಚಿತ್ರಗಳ ಸಂಖ್ಯೆ 33.

ಇವುಗಳಲ್ಲಿ ಡಿ.ರಾಜೇಂದ್ರ ಬಾಬು ಒಟ್ಟು 4 ಚಿತ್ರಗಳನ್ನು ನಿರ್ದೇಶಿಸಿ ಉಳಿದವರಿಗಿಂತ ಮುಂದಿದ್ದಾರೆ.



ಸಂಗೀತ ನಿರ್ದೇಶಕರಲ್ಲಿ ಯಥಾಪ್ರಕಾರ ಹಂಸಲೇಖಾ ಮುಂದೆ, ಇವರು 8 ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ಸಾಧು ಕೋಕಿಲಾ 4, ಮನೋಹರ್ 3, ಉಳಿದವರೆಲ್ಲಾ ತಲಾ ಒಂದೊಂದು ಚಿತ್ರಕ್ಕೆ ಸಂಗೀತ ನಿರ್ದೇಶಿಸಿ ಹಿಂದುಳಿದಿದ್ದಾರೆ.

ನಾಯಕರಾಗಿ ಶಿವರಾಜ್‌ಕುಮಾರ್ ಮತ್ತು ಸಾಯಿಕುಮಾರ್ ತಲಾ 4 ಚಿತ್ರಗಳಲ್ಲಿ ನಟಿಸಿ ಮುಂದಿದ್ದಾರೆ. ವಿಷ್ಣುವರ್ಧನ್ 2, ಶಶಿಕುಮಾರ್ 2, ಡಾ. ರಾಜ್‌ಕುಮಾರ್, ರವಿಚಂದ್ರನ್, ಉಪೇಂದ್ರ, ಜಗ್ಗೇಶ್, ದೇವರಾಜ್ ತಲಾ ಒಂದೊಂದು ಚಿತ್ರದಲ್ಲಿ ನಟಿಸಿದ್ದಾರೆ. ನಾಯಕಿಯರಲ್ಲಿ ಪ್ರೇಮಾ 4 ಚಿತ್ರಗಳಲ್ಲಿ ನಟಿಸಿ ಮುಂದಿದ್ದಾರೆ. ಉಳಿದಂತೆ ಅನು ಪ್ರಭಾಕರ್, ಖುಷ್ಬೂ, ರಮ್ಯಕೃಷ್ಣ, ಭಾವನಾ ತಲಾ 2 ಚಿತ್ರಗಳಲ್ಲಿ ನಟಿಸಿದ್ದಾರೆ.

ಈಗ ನಿಜವಾದ ಫಲಿತಾಂಶದತ್ತ ಬರೋಣ. ಈ ಆರು ತಿಂಗಳಲ್ಲಿ ಬಿಡುಗಡೆ ಯಾದ ಒಟ್ಟು ಚಿತ್ರಗಳ ಸಂಖ್ಯೆ 33. ಆದರೆ ಹಿಟ್ ಆದ ಚಿತ್ರಗಳ ಸಂಖ್ಯೆ ಕೇವಲ 5 ಮಾತ್ರ. ಶಬ್ದವೇಧಿ, ಸೂರಪ್ಪ, ಯಾರಿಗೆ ಸಾಲುತ್ತೆ ಸಂಬಳ ಮತ್ತು ನಾಗದೇವತೆ.

ಉಳಿದಂತೆ 'ದೇವೀರಿ' ಚಿತ್ರಕ್ಕೆ ಪ್ರಶಂಸೆ ಬಂದರೆ, ಚಾಮುಂಡಿ, ಪಾಪಿಗಳ ಲೋಕದಲ್ಲಿ, ದೇವರಮಗ ಮೊದಲಾದ ಮೂರು ಚಿತ್ರಗಳು ನಿರ್ಮಾಪಕರ ಕೈ ಕಚ್ಚಿಸಲಿಲ್ಲ. ಉಳಿದಂತೆ 25 ಕನ್ನಡ ಚಿತ್ರಗಳು ಫ್ಲಾಪ್ ಆಗಿ ನಿರ್ಮಾಪಕರು ಠೇವಣಿ ಕಳೆದುಕೊಂಡಿದ್ದಾರೆ.

ಹಿಟ್ ಆದರೆ 5 ಚಿತ್ರಗಳಲ್ಲಿ ನಾಲ್ಕು ರಿಮೇಕ್ ಚಿತ್ರಗಳು ಎಂಬುದು ಇಲ್ಲಿ ಎಷ್ಟು ಗಮನಾರ್ಹವೋ ಫ್ಲಾಪ್ ಆದ 25 ಚಿತ್ರಗಳಲ್ಲಿ ಹೆಚ್ಚಿನವು ರಿಮೇಕ್ ಚಿತ್ರಗಳು ಎಂಬುದು ಕೂಡಾ ಗಮನಾರ್ಹವೇ.

ಕೃಪೆ: ಚಿತ್ರಸೌರಭ,
ಸಂಯುಕ್ತ ಕರ್ನಾಟಕ

ಸಿಡ್ನಿ ಒಲಂಪಿಕ್ 2000 ದ ಮೂರು ಲಾಂಛನಗಳು ಸಿಡ್, ಮಿಲ್ಲಿ ಹಾಗೂ ಒಲ್ಲಿ ಇನ್ನೇನು 50 ದಿನಗಳ ಒಳಗೆ ಆರಂಭವಾಗಲಿರುವ ಸಿಡ್ನಿ ಒಲಂಪಿಕ್‌ಗೆ ಭರದ ಸಿದ್ಧತೆಗಳು ನಡೆಯುತ್ತಿವೆ. ಒಲಂಪಿಕ್ ಜ್ಯೋತಿ ಗ್ರೀಸ್ ದೇಶದಲ್ಲಿ ಒಲಂಪಿಕ್‌ನ ಮೂಲಸ್ಥಾನದಲ್ಲಿ ಪರಂಪರಾಗತ ರೂಢಿಯಂತೆ ಹೊತ್ತಿಸಲ್ಪಟ್ಟು ಸಾವಿರಾರು ಮೈಲುಗಳನ್ನು ಕ್ರಮಿಸಿ, ನೀರಿನೊಳಗಿನಿಂದ ಹಾದು ಪ್ರಯಾಣ ಬೆಳೆಸಿದೆ. ವಿಶ್ವಾದ್ಯಂತ ವಿವಿಧ ದೇಶಗಳಲ್ಲಿ ಒಲಂಪಿಕ್ ಪೂರ್ವ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ವಿಶ್ವಾದ್ಯಂತ ಜನರನ್ನು ಸೆಳೆಯಲಿರುವ ಸಿಡ್ನಿ ಒಲಂಪಿಕ್ಸ್‌ನ ಲಾಂಛನಗಳು ಆಸ್ಟ್ರೇಲಿಯಾದ ಮೂರು ಅಪೂರ್ವ ಪ್ರಾಣಿಗಳ ಪ್ರತಿರೂಪಗಳು. ಸಿಡ್ - ಪ್ಲಾಟಿಪಸ್ ಎಂಬ ವಿಶೇಷ ಸಸ್ತನಿ(ಹಾಲುಕೊಡುವ) ಪ್ರಾಣಿ. ಮಿಲ್ಲಿ ಚೂರಾದ ಮುಳ್ಳುಗಳಿಂದ, 8 ಇಂಚಿಗಿಂತಲೂ ಉದ್ದವಾದ ನಾಲಗೆಯುಳ್ಳ ಇರುವೆ, ಗೆದ್ದಲುಗಳನ್ನು ತಿನ್ನುವ ಸಸ್ತನಿ ಪ್ರಾಣಿ. ಒಲ್ಲಿ ಕೂಕಬುರ್ರಾ ಎಂಬ ಪಕ್ಷಿ. ಕಿಂಗ್‌ಫಿಷರ್ ಎಂಬ ಪಕ್ಷಿಗಳ ಗುಂಪಿನಲ್ಲಿಯೇ ಅತ್ಯಂತ ದೊಡ್ಡ ಪಕ್ಷಿ. ಈ ಮೂರು ಪ್ರಾಣಿಗಳು ಕ್ರಮವಾಗಿ ನೀರು, ಭೂಮಿ, ಆಕಾಶಗಳನ್ನು ಸಂಕೇತಿಸುತ್ತವೆ. ಹಾಗೆಯೇ ಸಿಡ್ ಎಂಬ ಹೆಸರು ಸಿಡ್ನಿಯ ಗುರುತಾದರೆ, ಮಿಲ್ಲಿ ಹೊಸ ಸಹಸ್ರಮಾನ(ಮಿಲ್ಲೆನಿಯಂ)ದ ಗುರುತು. ಒಲ್ಲಿ ಒಲಂಪಿಕ್ಸ್‌ನ ಗುರುತು.



PRBDECR 319-7073 JANATARANGA WEEKLY
Reg.No.17015/64 KRNMBGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. [illegible] ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-[illegible] ಫೋನ್ ನಂ. [illegible]
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee Editor : G.N. NAGARAJ